ವಿಗಡ ವಿಕ್ರಮರಾಯ

ಸಂಸ

ನಾಟಕ

VEC,Library
006998

...ರೇಶ್ ಅಂಡ್ ಕಂಪನಿ
ಹನುಮಂತನಗರ : : ಬೆಂಗಳೂರು-೧೯

VEC,Library
006998
<1350(K)>

ವಿಗಡ ವಿಕ್ರಮರಾಯ

VIJAYA EVENING COLLEGE LIBRARY
BANGALORE-560 004.
Accn. No. 6998
Cost. Rs 8=00
Date 24.7.86
Librarian.

ಸಂಸ

ನಾಬರ

ನರೇಶ್ ಅಂಡ್ ಕಂಪನಿ
ಹನುಮಂತನಗರ : : ಬೆಂಗಳೂರು-೧೯

ನರೇಶ್ ಅಂಡ್ ಕಂಪನಿ
ಹನುಮಂತನಗರ : : ಬೆಂಗಳೂರು-19

ನರೇಶ್ ಅಂಡ್ ಕಂಪನಿ ಅವರಿಂದ
ಮೊದಲ ಮುದ್ರಣ : 1985

ಮುದ್ರಣ :
ರೋಹಿಣಿ ಪ್ರಿಂಟರ್ಸ್
ನಂ. 2, ಕೆ ವಿ.ಲೇನ್ ಅರಳೇಪೇಟೆ,
ಬೆಂಗಳೂರು-53.

ವಿಗಡ ವಿಕ್ರಮರಾಯ

ಪಾತ್ರಪರಿಚಯ

—:—

ಶ್ರೀ ಇಮ್ಮಡಿ ರಾಜಒಡೆಯರು—ಮೈಸೂರ ಮಹಾರಾಜ.

ಶ್ರೀ ರಣಧೀರಕಂಠೀರವ ನರಸರಾಜಒಡೆಯರು } ಮಹಿಶೂರ ರತ್ನಸಿಂಹಾಸನವನ್ನೇರಲುಳ್ಳ ಉತ್ತರಾಧಿಕಾರಿ.

ನಿರೀಶ :— ರಣಧೀರನ ನಚ್ಚಿನ ಒಡನಾಡಿ.

ಬಸವಮಲ್ಲಯ್ಯ, ಸಕ್ಕ, ಮಲ್ಲಹನುಮ } : ರಣಧೀರನ ಗರುಡಿಯ ಮಲ್ಲರು.

ಚೆನ್ನ, ರಂಗ } : ಮಹಾರಾಜಪಕ್ಷದ ಕಾವಲರು.

ವಿಕ್ರಮರಾಯ :— ಮಹಿಶೂರರಾಜ್ಯದ ದಳವಾಯಿ.

ತುಂಗರಾಯ, ಅಳಗರಾಜಯ್ಯ } ವಿಕ್ರಮರಾಯನ ಆಪ್ತಪರಿಜನರು.

ಬೊಮ್ಮರಸ ಪಣ್ಡಿತ :— ರಾಜವೈದ್ಯ—ನಿಯೋಗಿ.

ಆಸ್ಥಾನದ ಕರಣಿಕರು, ಮಹಾರಾಜ ಪರಿವಾರದವರು, ವಂದಿಮಾಗಧರು.

ವಿಕ್ರಮರಾಯನ ಪರಿಜನರು, ದೀವಟಿಗ.

ರಣಧೀರನ ಗರುಡಿಯ ಜಟ್ಟಿಗರು.

ಮಹಿಶೂರಪುರದ ಪಟ್ಟಣಿಗರು.

ಕನ್ನಂಬಾಡಿಯ ಗೌಡ ಕರಣಿಕ ಪುರೋಹಿತ ಊರುಗರು.

ಮಹಾಮಾತೃಶ್ರೀ ತಿಮ್ಮಾಜಮ್ಮಣ್ಣಿ.

ವೇಂಕಟಾಜಮ್ಮಣ್ಣಿ, ನಂಜಮ್ಮಣ್ಣಿ } :— ಮೈಸೂರ ಮಹಾರಾಣಿಯರು

ಚೆಂದವ್ವೆ, ರುದ್ರವ್ವೆ } :— ಮಹಾಮಾತೃಶ್ರೀಯ ಅವ್ವೆಯರು.

ಮಹಾರಾಜನ ಅಪ್ಸರೆಯರು.

ವಿಗಡ ವಿಕ್ರಮರಾಯ

— ೦ —

(ನಾಂದ್ಯಂತದಲ್ಲಿ ಸೂತ್ರಧಾರನ ಪ್ರವೇಶ.)

ಸೂತ್ರಧಾರ :—(ಸಭೆಗೆ ಬಾಗಿ ವಂದಿಸಿ)

ಶ್ರೀಮತ್ಪನ್ನಗತಲ್ಪನುದ್ಧತರಟಚ್ಚಕ್ರಾಯುಧಂ ಮೋಹಿನಿ ।
ರಾಮಾವಲ್ಲಭನುಗ್ರಗೃಧ್ರ ಪತಿಗಂ ತಾಂ ಸ್ವಾಮಿಯಾಗಿರ್ದೊಡಂ ॥
ಪ್ರೇಮಂ ತನ್ನೊಳಮಾ ಪರಸ್ಪರರೊಳಂ ಸಾಲ್ವಂತಿರಾಳ್ವಾತನು ।
ದ್ದಾಮಂ ತತ್ಪ್ರಭುಶಕ್ತಿಯಿಂ ಪೊರೆಯುತುಂ ಪಾಲಿಕ್ಕೆ ಭೂಮೀಶರಂ ॥

ಸ್ವಾಮಿದ್ರೋಹಾಡಂಬರ ।
ನಾ ಮಾನಿಯು ವಿಗಡವಿಕ್ರಮನ ಚರಿತಮನೀ ॥
ನಾಮರಿದಂತಭಿನಯಿಪೆವು ।
ಧೀಮತ್ಸಭ್ಯರಿರ, ತಿದ್ದಿ ಪೊರೆವುದು ನಮ್ಮಂ ॥

(ಹೋಗುವನು)

ಪ್ರವೇಶ ೧.

[ಸ್ಥಾನ—ಶ್ರೀರಂಗಪಟ್ಟಣ. ದಳವಾಯಿ ವಿಕ್ರಮರಾಯನ ಹರ್ಮ್ಯದ ಅಂತರಾಳ.]

(ವಿಕ್ರಮರಾಯನು ಶಯ್ಯೆಯಲ್ಲಿ ತಲೆಗಿಂಬಿನ ಕವುಳುಡೆಯನ್ನೊರಗಿ ಕುಳ್ಳಿರುವನು. ಬಾಗಿಲ ಪಾರ್ಶ್ವದಲ್ಲಿ ಆಸ್ಥಾನದ ಕರಣಿಕರಿಬ್ಬರೂ ತಲೆವಾಗಿ, ವಿಷಣ್ಣಭಾವದಿಂದ ನಿಂತಿರುವರು.)

ಒಬ್ಬ ಕರಣಿಕ :— (ಸ್ವಲ್ಪ ಹೊತ್ತಿನ ಬಳಿಕ, ದೈನ್ಯದಿಂದ,) ಶ್ರೀಮನ್ಮಹಾರಾಜರವರೇ ಸ್ವತಃ ಬಿಜಯಮಾಡಿಸಿ............

ವಿಕ್ರಮರಾಯ :— (ನಿಷ್ಠುರಸ್ವರದಿಂದ) ಸಾಕು, ಮುಚ್ಚು, ಗುಲಾಮ !—ಮಹರಾಜನಂತೆ ! ಇತರರೊಬ್ಬರನ್ನೂ ಒಲ್ಲದೆ, ನಿಮ್ಮಿಬ್ಬರನ್ನೇ

ನಮ್ಮ ವಿಶ್ವಾಸದ ಅಂತರ್ಯದ ಕರಣಿಕರನ್ನಾಗಿ ಆಯ್ದುಕೊಂಡಿವೇಕೆ ? ಅಯ್ದುವರುಷಗಳಿಂದ ತಿಂಗಳೊಂದಕ್ಕೆ ಎರಡೆರಡುಸಾಯಿರ ವರಹ ಗಳಂತೆ ನಿಮಗೆ ತೆತ್ತು, ತೆತ್ತು, ಹಾಳಾಗುತ್ತಿರುವವೇತಕ್ಕೋಸ್ಕರ ವಾಗಿ ? ಕೃತಜ್ಞತೆ ! ಸ್ವಾಮಿಭಕ್ತಿ !...... (ಮೊಳಕಯ್ಗಳ ಮೇಲೆದ್ದು,) ತೊಲಗಿ !............ ನಡೆಯಿರಿ ! ಇಂದಿನಿಂದ ಕರಣಿಕತನವನ್ನು ಕಾಳಸರ್ಪಗಳಿಗೆ ವಹಿಸಿ, ನಿರಾತಂಕದಿಂದಿರುವೆವು : ಅವಕ್ಕೆ ಎರೆದ ಹಾಲೂ ವಿಷವಾಗುವುದಾದರೂ ಕೊಟ್ಟ ನಿಕ್ಷೇಪವನ್ನು ಅವು ನಿಮ್ಮಂತೆ ಬಯಸುವವರಿಗೆ ಬಿಟ್ಟುಕೊಡದೆ, ಪ್ರಾಣಪಣದಿಂದ ರಕ್ಷಿಸಿರಿಸುವುವು.

ಕರಣಿಕ : ಶ್ರೀಮಂತರು...................

(ಹೊರಗೆ) :—(ಮಹಾರಾಜವಾದ್ಯಗಳು ಘೋಷಿಸತೊಡಗುವುವು.)

ವಿಕ್ರಮರಾಯ :—(ಹುಬ್ಬುಗಂಟಿಕ್ಕಿ) ಏನಿದು ? ನಮ್ಮ ಆಜ್ಞೆಯನ್ನು ಮರೆತವನಾರು ?

ಕರಣಿಕ :—ಅರಮನೆಯ ವಾದ್ಯಗಳೆಂಬಂತಿವೆ.

ವಿಕ್ರಮರಾಯ :—ಕಣ್ಗಳನ್ನರಲಿಸುವೆಯೇಕೆ, ಹೇಡಿ ? ಹೋಗಿ, ನಮ್ಮ ಪ್ರಾಸಾದದೆಡೆಯಲ್ಲಿ ಆರ ಆವ ವಾದ್ಯಗಳಾದರೂ ಮೌನವಾಗಿ ನಡೆಯಬೇಕೆಂಬ ನಮ್ಮ ಕಟ್ಟಳೆಯನ್ನು ಆ ದುರುಳನಾವನಾದರೂ ಅವನಿಗೆ ತಿಳಿಹಿ ಬಾ—ಹೋಗು.

(ಹಠಾತ್ತಾಗಿ ವಾದ್ಯಗಳು ನಿಲ್ಲುವುವು. ಸಪರಿವಾರ ಶ್ರೀಮನ್ಮಹಾರಾಜ ಇಮ್ಮಡಿರಾಜ ಒಡೆಯ—ಪ್ರವೇಶ.)

ಮಹಾರಾಜ :—(ಪ್ರವೇಶಿಸುತ್ತ ನಕ್ಕು,) ಆ ದುರುಳನೇ ಶ್ರೀಮಂತರ ಕಟ್ಟಾಣತಿಯನ್ನು ಕಿವಿಯಾರೆ ಕೇಳಿ ಕೃತಾರ್ಥನಾದನಾಯ್ತು.

ಕರಣಿಕರು :—(ಮಹಾರಾಜನಿಗೆ ಮುಗಿದ ನೀಡುಂಗಯ್ಗಳಿಂದ ಬಾಗಿ ನಮಸ್ಕರಿಸುವರು.)

ಮಹಾರಾಜ :—(ಕರಣಿಕರತ್ತ ನಿರ್ದೇಶಿಸಿ. ವಿಕ್ರಮರಾಯನನ್ನು ಕುರಿತು) ರಾಜ್ಯದಾಡಳಿತದ ಲೆಕ್ಕಪತ್ರಗಳನ್ನು ನಮಗೆ ತೋರಿಸಿದ ಮಹಾಪ ರಾಧಿಗಳು !—ದಣ್ಡನವಾಗುತ್ತಿದ್ದಿತೇನೊ !

ವಿಕ್ರಮರಾಯ :—(ಮಲಗಿರುವಂತೆಯೇ ಮುಗುಳ್ನಗೆ ನಕ್ಕು,) ಶಾಸ್ತ್ರಿಯಹುದು: ಆದರೆ, ರಾಜತಂತ್ರಕ್ಕೆ ಸಂಬಂಧಿಸಿದ ಅತಿ ಗೋಪ್ಯವಾದ ಹಲವು ಲೆಕ್ಕಪತ್ರಗಳನ್ನು ಅವರು ಮಹಾರಾಜರಿಗೆ ಕಾಣಗುಡದುದರಿಂದ— ಬಾ, ಪುಟ್ಟಸ್ವಾಮಿ !............ಇದೇನಿಂದೀ ಅಪೂರ್ವ ಯಾತ್ರೆ ? ನಮ್ಮ ದೀನಕುಟೀರದವರೆಗೆ ! (ಮಹಾರಾಜ ಪರಿವಾರದವರನ್ನೂ ಕರಣಿಕ ರನ್ನೂ ದುರದುರನೆ ನೋಡಿ) ಮಹಾಸ್ವಾಮಿಯವರು ನಿಂತಿರುವುದು ಕಣ್ಗೆ ಕಾಣದೆ ? ಅತ್ತಣ ಸುಖಾಸನವನ್ನು ಅನುಗೊಳಿಸಿಬಿಟ್ಟರೆ, ನೀವು ತಿನ್ನುವ ಉಪ್ಪಿಗೆ ದ್ರೋಹಮಾಡಿದಂತಾಗುವುದೇನು ?

ಕರಣಿಕರು :—(ಸಂಭ್ರಮದಿಂದ ಸುಖಾಸನವನ್ನು ಮಂಚದ ಬಳಿಗೆಳೆದು, ಅದ ರೊಳಗಣ ಮೂಡಾವಿಗಳನ್ನು ಓಜೆಗೊಳಿಸಿಟ್ಟು, ಹಿಂಜರಿದು ನಿಲ್ಲುವರು.)

ಮಹಾರಾಜ :—(ಗಂಭೀರಭಾವದಿಂದ) ದಳವಾಯಿ ವಿಕ್ರಮರಾಯ ! ನಿನ್ನ ಲೆಕ್ಕಿಗರು ಹೊರಗೆಡಹದೆ ಬಚ್ಚಿಟ್ಟು ಮಾಯಮಾಡಿದ, ರಾಜ ಮುದ್ರೆಗೆ ಸಂಬಂಧಿಸಿದ, ಆ ಲೆಕ್ಕಪತ್ರಗಳನ್ನೆಲ್ಲ ಆಮೂಲಾಗ್ರವಾಗಿ ಪರಿಶೀಲಿಸಿ ತಿಳಿಯಬೇಕೆಂಬ ಉದ್ದೇಶದಿಂದ ನಾವಿಲ್ಲಿಗೆ ಈಗ ಬಂದಿರುವೆವು.

ವಿಕ್ರಮರಾಯ :—ಇರಬಹುದು.

ಮಹಾರಾಜ :—ಅವೆಲ್ಲಿ ? ಬೇಗನೆ ತರಿಸು.

ವಿಕ್ರಮರಾಯ :—(ನಕ್ಕು,) ಆಗಬಹುದು—ಬಾ, ಪುಟ್ಟಸ್ವಾಮಿ ! ನನ್ನಿ ದಿರಲ್ಲಿ ನಿಂತಿರುತ್ತಲೇ ಮಾತಾಡುವುದನ್ನು ಇನ್ನಾದರೂ ಬಿಟ್ಟು, (ಸುಖಾಸನದತ್ತ ಕಯ್ತೋರಿಸಿ,) ಕುಳ್ಳಿರು. ನಿನಗೆ ಇಂದೀಗಳೇನುಬೇಕು ? ಬಿಜಾಪುರದ ಆಸ್ಥಾನದಲ್ಲಿರುವ ವಿದೇಶದ ಗಾಯಕನ ಆ ವಾದ್ಯ : ಬಳ್ಳಾರಿಯ ಮನೋರಮೆ ; ದೆಹಲಿಯ ಬಾದಷಹನ ಮಹಲ್ಗಳನ್ನಪ

ಹಾಸ್ಯಮಾಡುವಂತಹುದೊಂದು ಅಂತಃಪುರ ; ಅದನ್ನು ಬಳಸಿ, ನಂದನವನವನ್ನು ನಾಚಿಸುವಂತೆ ಸಾಂಗವಾದ ಪರಿಪರಿಯ ಪುಷ್ಪೋದ್ಯಾನಗಳು ; ಅವುಗಳೊಳಗೆ ....ವನಲಕ್ಷ್ಮಿಯಂತೆ ಕುಸುಮ ಸಮಯಾಲಂಕೃತೆಯಾಗಿ, ಕಳಹಂಸೆಯಂತೆ ಅಲ್ಲಲ್ಲಿ ನಡೆಗಾಣಿಸಿ, ಶುಕಸತಿಯಂತೆ ನುಡಿದು, ಕೋಗಿಲೆಯಂತೆ ಮದಿಸಿ ಹಾಡುತ್ತ, ಅಪ್ಸರೆಯಂತೆ ಸ್ವೈರದಿಂದ ನರ್ತಿಸುವ ಲತಾಂಗಿಯಾದ ಆ ಗಾಲವ ನಗರಿಯ ಕುಟ್ಟಿ :...............

ಮಹಾರಾಜ :—(ಕೊರಲ್ವಾಗಿದ್ದು,) ಆಯ್ತು ?

ವಿಕ್ರಮರಾಯ :—ಬಾ, ಪುಟ್ಟಸ್ವಾಮಿ ; ನೀನು ಕುಳಿತಿರದಿದ್ದರೆ ನಾವಾವ ಮಾತನ್ನೂ ಆಡುವುದಿಲ್ಲ.

ಮಹಾರಾಜ :—ನಾವು ಸೂಚಿಸಿದಂತೆ ಆ ಲೆಕ್ಕಪತ್ರಗಳನ್ನು ಒಪ್ಪಿಸಬಹುದಷ್ಟೆ ?

ವಿಕ್ರಮರಾಯ :—(ಅಂಗಯ್ಗಳ ಮೇಲೆದ್ದು, ಬದ್ಧಭ್ರುಕುಟಿಯಾಗಿ, ಕಣ್ಣಾಲಿಗಳನ್ನೆಬ್ಬಿಸಿ, ಮಹಾರಾಜನನ್ನಡಿಯಿಂದ ಶಿರಸ್ಸಿನವರೆಗೆ ದಿಟ್ಟಿಸಿ,) ನಮಗಿದು ಅರ್ಥವಾಗುತ್ತಿಲ್ಲ !

ಮಹಾರಾಜ :—ಏನು ?

ವಿಕ್ರಮರಾಯ :—ನಿನ್ನ ಇಂದಿನ ಈ ವೇಷವಿದು ; ಆ ವೃದ್ಧ—ರಂಗ ಜೋಯಿಸರೇನಾದರೂ ತಪ್ಪಿ, ಈವೊತ್ತು ಮಹಾನವಮಿಯ ಪಾಡ್ಯಮಿಯೆಂದು ನಿನಗೆ ಭ್ರಮೆಯನ್ನು ಹುಟ್ಟಿಸಿಟ್ಟರೋ ?

ಮಹಾರಾಜ :—ಹುಂ.

ವಿಕ್ರಮರಾಯ :—ಮತ್ತೆ, ಈ ವೊಡ್ಡೋಲಗದ ಉಡುಗೆತುಡುಗೆಗಳು ....ಪಟ್ಟದ ಕತ್ತಿಯೂ, ಶಿಖಾಸರವು—ಮುದ್ರೆಯುಂಗುರವೂ ಹೀಗೆ ಇಂದೇಕೆ ? ಇವೆಲ್ಲವನ್ನೂ ಬೊಕ್ಕಸದಿಂದ ನಿನಗೆ ತೆಗೆದಿತ್ತವರಾರು ? ನಮಗೆ ಅರ್ಥವಾಗಿಲ್ಲ.

ಮಹಾರಾಜ :— ದಳವಾಯಿ ಮಹಾಶಯರೆ, ನಮ್ಮೆದಿರಲ್ಲಿಯಾದರೂ ನಮಗೆ ಸಲ್ಲತಕ್ಕ ಗೌರವಮರ್ಯಾದೆಗಳನ್ನರಿತು ನೀನು ನಡೆದು ಕೊಳ್ಳಬೇಕೆಂದು ನಾವಾಗಿ ನಿರವಿಸೋಣವೆ ?

ವಿಕ್ರಮರಾಯ :—(ನಕ್ಕು,) ಹಾಗೆಂದರೆ ?

ಮಹಾರಾಜ :—(ತನ್ನೆದೆಯನ್ನು ಮುನ್ನೀಡಿ, ಮೊಗವೆತ್ತಿ, ದರ್ಪದಿಂದ) ನಿನ್ನ ವಿಷಯವನ್ನು ಏಕವಚನದಲ್ಲಿ ಹೇಳಿಕೊಳ್ಳುತ್ತ, ನಾವಾರೆಂಬು ದನ್ನು ಮರೆಯದಿರು.

ವಿಕ್ರಮರಾಯ :—(ನೆಟ್ಟನೆ ಕುಳಿತು, ಕೌತುಕದಿಂದ,) ನೀವಾರು ?

ಮಹಾರಾಜ :—ನಾವಾರು ! (ಥಟ್ಟನೆ ಪಾರ್ಶ್ವಕ್ಕೆ ತಿರುಗಿ, ವಂದಿಮಾಗಧರತ್ತ ನೋಡುವನು.)

ವಂದಿಮಾಗಧರು :—(ಕಯ್ಯೆತ್ತಿ) ಜಯಜಯ ಮಹಾರಾಜ ! ಜಯಜಯ ಮಹಾಸ್ವಾಮಿ !

ಸ್ವಸ್ತಿಶ್ರೀಮತ್ಪಶ್ಚಿಮರಂಗನಾಥಪಾದಾರವಿಂದಮಧುಕರಾಯಿತ ಚಿತ್ತ !

ಮತ್ತರಿಪುಷಂಡಖಣ್ಡನೋದ್ದಂಡದೋರ್ದಂಡ !

ಅರ್ಥಿಜನೇಪ್ಸಿತಾರ್ಥದಾನಶೌಂಡ !

ಅಂಗನಾಜನಕುಸುಮಕೋದಣ್ಡ !

ಬಾಹುದಂಡಧೃತವಿವಿಧಾಯುಧಪ್ರಕಾಂಡ !

ಬಿರುದಂತೆಂಬರಗಂಡ !

ಮಿತ್ರಕುಲಕಮಲಮಾರ್ತಾಂಡ !

ಮೊನೆಗಾರ !

ಸುಗುಣಗಂಭೀರ !

ರಾಜಕಂದರ್ಪ !

ವೀರ !

ಶೂರ !

ಮಲೆವರ ಗಂಡ !

ಅಭಯಪ್ರತಾಪಾಧೀಶ್ವರ !

ಶರಣಾಗತಪರಿಪಾಲಕ !

ಸಂಗೀತಲೋಲ !

ಸಾಹಿತ್ಯರತ್ನಾಕರ !

ಸೂರ್ಯಚಂದ್ರಶಂಖಚಕ್ರಾಂಕುಶಕುಠಾರಮಕರಮತ್ಸ್ಯಹನೂಮ
ದ್ಗರುಡಕಂಠೀರವಾದ್ಯನೇಕಬಿರುದಾಂಕಿತ !

ರಾಜಾಧಿರಾಜ !

ಮಹಾರಾಜ !

ಶ್ರೀಮನ್ಮಹೀಶೂರರತ್ನಸಿಂಹಾಸನಾಧೀಶ್ವರ !

ಶ್ರೀ ಇಮ್ಮಡಿರಾಜ ಒಡೆಯ !

ಜಯ ಜಯ ಮಹಾಸ್ವಾಮಿ !

ವಿಜಯೀಭವ !

ಮಹಾರಾಜ :— (ವಿಕ್ರಮರಾಯನತ್ತ ಹೊರಳಿನಿಂತು,) ನಾವಾರೆಂಬುದನ್ನೀಗ ಅರಿವುಗೊಂಡೆಯ, ವಿಕ್ರಮರಾಜಯ್ಯ ?

ವಿಕ್ರಮರಾಯ :—(ಚಿಕ್ಕನೆ ಮಂಚದಿಂದಿಳಿದು, ಮಹಾರಾಜನಿಗೆ ಮಣಿದು, ನೀಡುಂಗಯ್ಗಳಿಂದ ವಂದಿಸಿ, ಕೀಳ್ಮೊಗನಾಗಿ ನಿಂತು, ವಿನೀತಭಾವದಿಂದ) ಪಾದದ ಸೇವಕನ ಸರ್ವಾಪರಾಧಗಳನ್ನೂ ಕ್ಷಮಿಸಿ, ಮಹಾಸ್ವಾಮಿಯವರು ಕಾಪಾಡಬೇಕು.

ಮಹಾರಾಜ :—(ವಿಕ್ರಮರಾಯನನ್ನೇ ಅಭೀಕ್ಷಿಸುತ್ತಿದ್ದು, ಸಂದಿಗ್ಧಸ್ವರದಿಂದ,) ಉಳಿದ ಆ ಲೆಕ್ಕಪತ್ರಗಳೆಲ್ಲಿ !

ವಿಕ್ರಮರಾಯ :—(ಹಿಂದಣಂತೆ ಪುನಃ ತುಳಿಲ್ಗೆಯ್ದು) ಮಹಾಸ್ವಾಮಿಯವರ ಅಪ್ಪಣೆಯಾದರೆ, ಇಲ್ಲಿಗೇ ಅವನ್ನು ತರಿಸುವೆನು.

ಮಹಾರಾಜ :—ಇನ್ನಿಲ್ಲಿ ನಾವು ನಿಲ್ಲಲಾರೆವು. ನಾಳಿನ ಪ್ರಾತಃಕಾಲಕ್ಕೆ ಆಸ್ಥಾನದ ಮಹಾಸಭೆಯು ನೆರೆಯುವುದು. ಆಗಳ್ಗೆ ರಾಜ್ಯದ ಅಖಿಲ ಲೆಕ್ಕಪತ್ರಗಳೂ ಅಲ್ಲಿ ನಮ್ಮ ಪರಾಂಬರಿಕೆಗೆ ಸಿದ್ಧವಾಗಿರಬೇಕು.

ವಿಕ್ರಮರಾಯ :—ಅಪ್ಪಣೆ, ಮಹಾಸ್ವಾಮಿ.

ಮಹಾರಾಜ, ಅವನ ಪರಿವಾರದವರು } :—(ಹಿಂದಿರುಗಿ ಹೊರಟುಹೋಗುವರು.)

(ಹೊರಗೆ) :—(ಓಲಗದ ವಾದ್ಯಗಳು ಮತ್ತೆ ಮೊಳಗಲಾರಂಭಿಸಿ, ಸ್ವಲ್ಪಸ್ವಲ್ಪವಾಗಿ ಕ್ಷೀಣವಾಗುವುವು.)

ವಿಕ್ರಮರಾಯ ;—(ಹವ್ವನೆ ಹಿಂದಣ್ಗೆ ನೆಗೆದುನಿಂತು, ಪ್ರಬಲಮುಷ್ಟಿಯನ್ನೆತ್ತಿ ಬೀಸಿ, ರೋಷವಿಕಾರವಾದ ಮುಖವನ್ನೆತ್ತಿ ಸುತ್ತನೋಡಿ, ಹಲ್ಮೊರೆದು,) ವಿಕ್ರಮರಾಜಯ್ಯ ! ಏಕವಚನದಲ್ಲಿ ಮಾತಾಡಿಕೊ ! ಮಿಕ್ಕ ಲೆಕ್ಕ ಪತ್ರಗಳು !............... ಹೂಂ !........ ಸುಣ್ಣಿಲ ಹಿಡಿದಾಟಕ್ಕೆ ಮೆಯ್ಗೊಟ್ಟಡಕವಾಗದೆ ತಪ್ಪಿಸಿಕೊಂಡು ಉರುಳ್ದು ಹೊರಳಿಯಾಡುವ ಬೇಲದ ಕಸುಗಾಯದು ಆನೆಯ ಕಾಲ ಕೆಳಗೆ ಜಜ್ಜಿಹೋಗುವುದು ಸಂಭವವಲ್ಲವೆ ? (ಕರಣಿಕರನ್ನು ಕಂಡು,) ತೊಲಗಿಹೋಗಿ ! ಆ ಗುಪ್ತ ವಾದ ಲೆಕ್ಕಪತ್ರಗಳನ್ನೆಲ್ಲಾ ಈ ನಿಮಿಷವೇ ತಂದು, ನಮ್ಮಿದಿರಿಗೆ ಸುಟ್ಟು ನೀರಲ್ಲಿ ಕದಡಿ ತೀರಿಸಬೇಕು—ತಿಳಿಯಿತೆ ? ಆ ಬಳಿಕ ನೀವು ಮಾಡಿಟ್ಟಿರುವ ಪೈಶುನ್ಯದ ಕುಚೇಷ್ಟಿತನವನ್ನು ತಿದ್ದುವುದಾಗಲಿ.

ಪ್ರವೇಶ ೨.

[ಸ್ಥಾನ :—ಶ್ರೀರಂಗಪಟ್ಟಣ. ಅರಮನೆಯೊಳಗೆ ನಾಟ್ಯಶಾಲೆ]

(ಪರಮಸುಂದರಿಯಾದ ಹೊನಹುಗಾರ್ತಿಯರನೇಕರು ವಿವಿಧಾಲಂಕಾರ ಭೂಷಿತೆಯರಾಗಿ, ಅಲಂಕೃತಿಮಾಡಿಕೊಳ್ಳುತ್ತ, ನಾನಾ ಅವಸ್ಥೆಗಳಲ್ಲಿರುವರು. ಕೆಲವರು ವೀಣೆ ಕೊಳಲು ಮದ್ದಳೆ ಮುಂತಾದ ಸಂಗೀತವಾದ್ಯಗಳನ್ನು ಬಾಜಿಸುತ್ತಲೂ, ಹಲವರು ಮೆಲ್ಲನೆ ಹಾಡಿಕೊಳ್ಳುತ್ತಲೂ, ಆರೆಬರು........ಅದೃಶ್ಯರಾಗಿರುವ ವಾದಕರ ವಾದಿತ್ರಗಳಿಗೆ ಅನುಸಾರವಾಗಿ ನರ್ತನಮಾಡುತ್ತಲೂ, ಕೆಲವರು ಬಳಲ್ದು ಮಲಗಿನ ವಿಶ್ರಾಮಪೀಠಗಳ ಮೇಲೆ ಪರಿವಡೆದೊರಗಿಯೂ, ಹಲಬರು ಮುದ್ದಾಗಿ ನಿದ್ರಿಸುತ್ತಲೂ, ಅನ್ಯರು ಸಕಲ ಸಾಧನಗಳಿಂದ ಸುಸಜ್ಜಿತೆಯರಾಗಿ ಪಟಗಳನೇಲೆ ಚಿತ್ರಿಸುತ್ತಲೂ, ಹೆರರು ಓಲೆಯ ಪುಸ್ತಕಗಳನ್ನೋದಿಕೊಳ್ಳುತ್ತಲೂ ಇರುವರು. ಪಲರು ಆ ಅಂತರಂಗಣದ ಮಣಿಭಿತ್ತಿಗಳಲ್ಲಿ ಸಾಧಿತವಾದ ಚಮತ್ಕಾರಿಕವೂ ಚಿತ್ರವಿಧವೂ ಆದ ಚಿತ್ತಾರಗಳನ್ನು ನೋಡಿ ನೋಡಿ ಮಾತನಾಡಿಕೊಳ್ಳುತ್ತಿರುವರು. ಬೇರೆಯವರು ಅಕ್ಷಚತುರಂಗಾದಿಗಳನ್ನಾಡುತ್ತಿರುವರು. ಉಳಿದ ನೀರೆಯರಲ್ಲಿ ಕೆಲಬರು ಅವರಿವರನ್ನು ನೋಡಿ ವಿಮರ್ಶಿಸುತ್ತ, ಮಿಕ್ಕವರು ಪುಷ್ಪಗಳನ್ನು ಕೋವುತ್ತ ಸುಗಂಧ ದ್ರವ್ಯಗಳನ್ನು ನೇರ್ಪಡಿಸುತ್ತ ಇರುವರು.)

[ಈಷತ್ಕಾಲಾನಂತರ, ಮಹಾರಾಜನ ಪ್ರವೇಶ]

(ಒಡನೆಯೇ ಅಲ್ಲಿ ಗಭೀರ ನಿಶ್ಶಬ್ದವಾಗಿದ್ದು, ತೆರೆತೆರೆಯಾಗಿ ಕಳಕಳವೇರುತ್ತಿರುವುದು.)

ಎಲ್ಲರೂ :—(ಎದ್ದು, ಹರ್ಷವಿಸ್ಮಯಗಳಿಂದ ಅವನನ್ನೇ ಈಕ್ಷಿಸುತ್ತಿರುವರು.)

ಓರ್ವಳು :—(ಕಯ್ಯೆತ್ತಿ) ಸುಸ್ವಾಗತವು, ಮದನಮೋಹನರಾಜ !

ಮಹಾರಾಜ :—(ದರಸ್ಮಿತನಾಗಿ, ತಲೆದೂಗುವನು.)

ಆ ಸುಂದರಿ :—(ಪುನಃ) ಜಯಜಯ ಶೃಂಗಾರರತ್ನಾಕರ !

ಸಕಲರೂ :—(ಕಯ್ಮುಗಿದು) ಜಯಜಯ ಶೃಂಗಾರರತ್ನಾಕರ !

ಆಕೆ :—ಜಯಜಯ ಪ್ರಣಯಪರಮೇಶ್ವರ !

ಸಮಸ್ತರೂ :—ಜಯಜಯ ಪ್ರಣಯಪರಮೇಶ್ವರ !

ಆಕೆ :—ಜಯಜಯ ಸಂಗೀತಲೋಲ !

ಅನಿಬರೂ :—ಜಯಜಯ ಸಂಗೀತಲೋಲ !

ಆಕೆ :—ಜಯಜಯ ಲಲ್ಲೆಯ ಲಾವಣ್ಯಲೀಲಾಲಲಿತ !

ಯಾವಲ್ಲಲನೆಯರೂ :—ಜಯಜಯ ಲಲ್ಲೆಯ ಲಾವಣ್ಯಲೀಲಾಲಲಿತ !

ಆಕೆ :—ಜಯಜಯ ಸಾನಂದಪರಮಸೌಂದರ್ಯಾವತಾರ !

ಸರ್ವರೂ :—ಜಯಜಯ ಸಾನಂದಪರಮಸೌಂದರ್ಯಾವತಾರ !

ಮತ್ತೊರ್ವಳು :—(ಎಲ್ಲರ ಬಗಸೆಗಳಿಗೂ ಪುಷ್ಪಗಳನ್ನು ತುಂಬುತ್ತಿದ್ದು, ತನ್ನ ಅಂಜಲಿಪುಟಗಳೊಳಗೂ ನಿಗುಂಬಿಸಿ ನಿಲಿಸಿಕೊಂಡು, ಅದನ್ನು ಸೇರ್ಗೆಗೆಯ್ದು, ಅನುವಾಗಿ ನಿಲ್ಲುವಳು.)

ಆಕೆ :—ಜಯಜಯ ಪ್ರಿಯದೇವ ! ರಾಜಕಂದರ್ಪ !

ಅಖಿಲರೂ :—ಜಯಜಯ ಪ್ರಿಯದೇವ ! ರಾಜಕಂದರ್ಪ ! ವಿಜಯೀಭವ ! (ಎಂದು ಉದ್ಘೋಷಿಸುತ್ತ ಕುಸುಮಾಂಜಲಿಯನ್ನು ಮಹಾರಾಜನ ಮೇಲೆ ಚೆಲ್ಲುವರು.)

ಮಹಾರಾಜ :—(ಸುತ್ತಲೂ ನೋಡಿ, ನಿಡುಸುಯ್ದು, ಅವಾಙ್ಮುಖನಾಗಿ, ಒಂದು ಸುಖಾಸನದೆಡೆಗೆ ಹೋಗಿ ಕುಳಿತುಕೊಳ್ವನು.)

ಎಲ್ಲರೂ :—(ನಗುನಗುತ ಮಹಾರಾಜನ ಸುತ್ತ ಮುತ್ತಿಕೊಳ್ಳುವರು.)

ಮೊದಲನೆಯ ಸುಂದರಿ :—ಪಾಮರತೆ !........ ನಿನ್ನ ಆ ಲಜ್ಜೆಯಿಲ್ಲದ ದೀರ್ಘನಿಶ್ವಾಸವು ಈ ಅಪ್ಸರೆಯರ ಸದಸ್ಸಿನ ಆತ್ಮಗೌರವಕ್ಕೆ ಪುಣ್ಯ ಪರಿಪೂರ್ಣತೆಗೆ ಅವಮಾನವನ್ನು ಅಳವಡಿಸುತ್ತಿರುವುದೆಂಬುದರ ಅರಿವು ನಿನಗುಂಟಾಯ್ತೆ, ರಾಜಕಂದರ್ಪ ? ಅದರ ಅರ್ಥವೇನು ?

ಬೇರೊರ್ವಳು :—(ಮಹಾರಾಜನ ತೊಡೆಯಮೇಲೆ ಕುಳಿತು, ಅವನ ಗಲ್ಲವನ್ನೆತ್ತಿ ಮುಖವನ್ನು ಕಣ್ಬೇಟದಿಂದ ಕಟಾಕ್ಷಿಸಿ, ಆ ತರುವಾಯ ಅವನನ್ನು ಹಾಗೆಯೇ ಆಲಂಗಿಸಿಕೊಳ್ಳಲು ನಳಿದೋಳ್ಗಳನ್ನು ಸಾಚುವಳು.)

ಮಹಾರಾಜ :—(ಮೆಲ್ಲಗೆ ದೃಢತೆಯಿಂದ ಅವಳ ಕೈಯ್ಗಳನ್ನು ಹಿಡಿದವಳನ್ನೆಬ್ಬಿಸಿ ನಿಲ್ಲಿಸಿ, ತಲೆಯನ್ನಲ್ಲಾಡಿಸಿ) ಬೇಗನೆಯೇ ಈ ಅಪ್ಸರೆಯರ ಮಹಾ ಸದಸ್ಸು ಇಲ್ಲಿಂದ—ಈಯರಮನೆಯಿಂದ ಹೊರಟುಹೋಗುವುದು.

ನಿಖಿಳರೂ :—(ಬೆಚ್ಚಿನಿಂತು) ಏನು !

ಮೊದಲನೆಯುವಳು :—(ಅನತಿಕಾಲದ ಬಳಿಕ,) ಸ್ಥಾನಭ್ರಷ್ಟತ್ವವೆ ?

ಮಹಾರಾಜ :—(ತಲೆಯೆತ್ತಿ ದೃಢಕಂಠದಿಂದ,) ಅಲ್ಲ, ಎಲ್ಲಿಯೇ ಆದರೂ ಇಂದಿನಿಂದ ನನಗೆ ಇಂತಹ ಆಟಪಾಟಗಳಿಗೆ ಅವಕಾಶವಿರದು

ಮೊದಲನೆಯುವಳು :—ಅಂತದೇನು ?

ಇನ್ನೊರ್ವಳು :—ರಾಜಕಂದರ್ಪನು ಸನ್ಯಾಸವನ್ನು ಸ್ವೀಕರಿಸುವನು !

ಎಲ್ಲರೂ :—(ನಗುವರು)

ಎರಡನೆಯ ಸುಂದರಿ :—(ಮಹಾರಾಜನ ಕತ್ತಿನಿಂದ ಮುತ್ತಿನ ಕಂಠಿಕೆಯನ್ನೂ ತನ್ನ ಕೊರಲ ಬಿರಿಮುಗುಳ್ಗಳ ತೋರದಂಡೆಯನ್ನೂ ತೆಗೆದುಕೊಂಡು, ಜೋಡಿಸಿ ಹಿಡಿದೆತ್ತಿ, ಆರನ್ನೊ, ಬಾಗಿಲತ್ತ ಹೊಡೆದಟ್ಟುವಂತೆ ಅಭಿನಯಿಸುತ್ತ ಹೋಗಿ, ಕಪಟರೋಷದಿಂದ) ಹೋಗೆ ! ನಾಚುಗೆಯಿಲ್ಲದ ಹೇಡಿ ! ತೊಲಗು ! (ಹಿಂದಿರುಗುವಳು.)

ಮಹಾರಾಜ :—ಅದಾರು ?

ಎರಡನೆಯುವಳು :—ಓ ! ಅವಳೇ ? ವೈರಾಗ್ಯದೇವತೆ.

ಸರ್ವರೂ :—(ಸುಹಾಸಿನಿಯರಾಗುವರು)

ಮೂರನೆಯ ಸುಂದರಿ :—(ಆ ಸುಖಾಸನದ ಕೆಲದಲ್ಲಿ ಮಂಡಿಸಿ, ಮಹಾರಾಜನ ಬಾಹುವನ್ನೆತ್ತಿ ತನ್ನ ಕೊರಲ್ಗೆ ಸುತ್ತಿಕೊಳ್ಳುತ, ಪ್ರಣಯಪೂರಿತ ಸ್ವರದಿಂದ.) ಏನಾಯ್ತು, ಪ್ರಿಯಕಾನ್ತ ? ಇದೇಕೆ ನೀನಿಂದು ನಮ್ಮನ್ನು ಹೀಗೆ ಪರೀಕ್ಷಿಸುವೆ ? ನಮ್ಮ ಅಪರಾಧವಾವುದು ?

ಮಹಾರಾಜ :—(ತನ್ನ ಬಾಹುವನ್ನು ಮೆಲ್ಪಿನಿಂದೆಳೆದು ಬಿಡಿಸಿಕೊಂಡು, ಅವರ ನ್ನಿಬ್ಬರನ್ನೂ ನೋಡಿ.) ನೀವೆಲ್ಲರೂ ನಮ್ಮನ್ನು ಪ್ರೀತಿಸುವಿರಿ :—

ಸಮಸ್ತರೂ :—(ಕಣ್ಮೊಗಗಳರಲ್ದು, ಪ್ರಣಯಸಾತ್ತ್ವಿಕಸ್ವರದಿಂದ) ಅಹುದು !

ಮಹಾರಾಜ :—ನಿಮ್ಮ ಪರಿಶುದ್ಧವಾದ ಪ್ರೇಮಕ್ಕೆ ಪಾತ್ರನಾದ ನಾನು ಆವಾಗಳೂ ಇಲ್ಲಿ ನಿಮ್ಮೊಡನೆ ವಿಹರಿಸುತ್ತ ಕ್ರೀಡಿಸುತ್ತ ಸ್ವರ್ಗ ಸುಖವನ್ನಾರಾಧಿಸಿ ಅನುಭವಿಸುತ್ತಿರಲೇ !

ಸಕಲರೂ :—ಅಹುದು, ರಾಜಕಂದರ್ಪ !

ಮಹಾರಾಜ :—(ಎದ್ದು ನಿಂತು,) ಅಥವಾ, ಸರ್ವಕರ್ತ್ತನಾದ ಪರಮೇಶ್ವರನು ನನ್ನ ಈ ಭುಜಕ್ಕೆ ಹೊರಿಸಿಟ್ಟಿರುವ ರಾಜ್ಯಭಾರವನ್ನಂಗೀಕರಿಸಿ ಅರ್ಥಮಾಡಿಕೊಂಡು, ನನ್ನ ಪ್ರಜಾಲೋಕವನ್ನು ಮಕ್ಕಳಂತೆ ಪರಿ ಪಾಲಿಸುತ್ತ, ನಾನು ಜನ್ಮಿಸಿದ ವೀರಕ್ಷತ್ರಿಯ ವಂಶಕ್ಕೆ ಪರಿಭವ ವಡಸದಂತೆ ಉದ್ಧಾಮ ಶೌರ್ಯ ಔದಾರ್ಯಗಳನ್ನು ಬಳಸಿ, ನನ್ನ ಹೆಸರನ್ನು ಸಾರ್ಥಕಮಾಡಿಕೊಂಡು, ಸತ್ತ್ವತಃ "ಬಿರುದಂತೆಂಬರ ಗಣ್ಡನಾಗಿ," ಕಡುಪಿನ ಗಂಡುಗಲಿಗಳೂ ರಾಜನೀತಿವಿಶಾರದರೂ ಆದ ನನ್ನ ಶತ್ರುಗಳು ಸಂತತವೂ ನಡುಗುತ್ತಿರುವಂತೆ, ನಿಮ್ಮ ಪ್ರಣಯದ ಪುಣ್ಯದಿಂದ—ದಿಗಂತ ವಿಶ್ರಾಂತ ಕೀರ್ತ್ತಿಯ ಮಹಾ ರಾಜನಾಗಿ ರಾಜಿಸಲೆ ?

ಎಲ್ಲರೂ :—(ವಿವರ್ಣೆಯರಾಗಿ, ನಿಶ್ಶಬ್ದ.)

ಮೊದಲನೆಯವಳು :—(ಕಿರಿದುಹೊತ್ತಿನ ತರುವಾಯ, ಕ್ಷೀಣಕಂಪಿತಸ್ವರದಿಂದ,) ಅಹುದು, ರಾಜಕಂದರ್ಪ : ನೀನು ಅಂತಹ ಮಹಾರಾಜನಾಗ ಬೇಕೆಂಬುದು ನಮ್ಮೆಲ್ಲರ ಆಸೆ.

ಪೆರಳೊರ್ವಳು :—(ಭಾಷ್ಪಗದ್ಗದಸ್ವರದಿಂದ,) ಆದರೆ.... .ಆದರೆ.... ....

ಮೊದಲನೆಯವಳು :—(ಕಣ್ಣೊರಸಿಕೊಂಡು, ಮಾತನಾಡಿದವಳನ್ನು ಕಿಸುಗಣ್ಚಿ, ಮಹಾರಾಜನತ್ತ ತಿರುಗಿ,) ಆದರ್ರೆ, ಏನೂ ಇಲ್ಲ, ರಾಜಕಂದರ್ಪ: ನೀನು ಅಂತಹ ಮಹಾರಾಜನೇ ಆಗಿ, ಪರಮೇಶ್ವರನ ಹೆಸರಿಗೆ, ಮಹೀ

ಶೂರದೇಶಕ್ಕೆ, ನಿನ್ನ ಶೂರವಂಶದ ಬಿರುದಿಗೆ, ನಮ್ಮೆಲ್ಲರ ಪ್ರೇಮದ ವಿಶ್ವಾಸಕ್ಕೆ—ಆಸ್ತಿಕತೆಯನ್ನು ನೀನು ಒದವಿಸಬೇಕು. (ಸ್ವಲ್ಪ ಕಾಲದ ಅನಂತರ, ಅವನತಮುಖಿಯಾಗಿ, ಕಿರುದನಿಯ ಗದ್ಗದದಿಂದ,) ಹೋಗಿಬರುವೆವು, ರಾಜಕಂದರ್ಪ.

ಮಹಾರಾಜ :—(ನಿರ್ವಿಣ್ಣನಾಗಿರುವನು.)

ಮೊದಲನೆಯವಳು :—(ಮೊಗವೆತ್ತಿ, ತನ್ನ ಗೆಳತಿಯರಿಗೆಲ್ಲ ಸನ್ನೆಮಾಡುವಳು.)

ಹೆಂಗಸರೆಲ್ಲ :—(ಹೊರಡುವರು.)

ಮೂರನೆಯವಳು :—(ಮಹಾರಾಜನನ್ನೆಯ್ದಿ, ಅಳುತಳುತ್ತ,) ನಿನ್ನ ಕಾಲ ಕಿರಿಯುಂಗುಟದ ನಖಮಣ್ಡಲವನ್ನಾದರೂ, ಒಮ್ಮೆ—ಕಡೆಯುಬಾರಿ—ಒಮ್ಮೆ, ಮುದ್ದಿಸಿಹೋಗುವೆನು, ಪ್ರಿಯತಮ ! (ಅವನ ಕೆಂದಳವನ್ನು ಹಿಡಿದುಕೊಳ್ಳುವಳು.)

ಇತರೆಯೋರ್ವಳು :—ಅಯ್ಯೋ ! ಇನ್ನು ನಮ್ಮ ಜೀವನಕ್ಕೆ—

ಮಹಾರಾಜ :—ನಿಮಗೆ ಒಬ್ಬೊಬ್ಬರಿಗೂ ಹತ್ತು ಹತ್ತು ಸಾಯಿರ ವರಹಗಳನ್ನು ನನ್ನ ಕೋಶಗೃಹದಿಂದ ಕುಡಬೇಕೆಂದು ನಿಯಮಿಸಿರುವೆನು.

ಮೊದಲ ಆಕೆ :—(ಆ ಇತರೆಯನ್ನು ನೀರು ತುಂಬಿದ ಕಣ್ಣಿಂದ ದೃಷ್ಟಿಸಿ ನೋಡಿ, ಔಡುಗಚ್ಚಿ,) ಕೀಳ್ವಣ್ಣದ ಹೆಣ್ಣು !

ಸ್ತ್ರೀಜನರೆಲ್ಲ :—(ಹೋಗುವರು)

ಮಹಾರಾಜ :—(ಅತ್ತ ನೋಡುತ್ತಿದ್ದು, ಆ ಸುಖಾಸನದೊಳಗೆ ಕುಳಿತು, ಕಯ್ಮೊಗನಾಗಿ ಚಿಂತಿಸುತ್ತಿರುವನು.)

(ಮಹಾಮಾತೃಶ್ರೀ ತಿಮ್ಮಾಜಮ್ಮಣ್ಣಿಯ ಪ್ರವೇಶ)

ಮಹಾಮಾತೃಶ್ರೀ :—(ನಿಂತು, ಮಾತೃವಾತ್ಸಲ್ಯದ ಪುಣ್ಯದೃಷ್ಟಿಯಿಂದ ಮಹಾರಾಜನನ್ನು ಪಾವನಮಾಡಿ, ಹೋಗಿ ಅವನ ಉಷ್ಣೀಷದ ಮೇಗೆ ಕಯ್ಯಿರಿಸಿ.) ಪುಟ್ಟಸ್ವಾಮಿ!

ಮಹಾರಾಜ :—(ತಲೆಯೆತ್ತಿ ನೋಡಿ, ತಟ್ಟನೇಳುತ್ತ) ಅಮ್ಮಯ್ಯ !—ಬನ್ನಿ, ಕುಳಿತುಕೊಳ್ಳಿ. ನಾಟ್ಯಶಾಲೆಗೆ.....ನೀವು !.........ಇಲ್ಲಿಗೆ....ಬರುವುದೆಂದರೆ—

ಮಹಾಮಾತೃಶ್ರೀ :—ಇಂದು ಬೆಳಗಾಗುತ್ತಲೇ ನನಗೆ ಪುತ್ರೋತ್ಸವವಾಯ್ತು ; ಆ ಆನಂದ ಸಂಭ್ರಮದಲ್ಲಿ ನನಗೆ ಕಾಲದೇಶ ನಿಮಿತ್ತಗಳ ಪರಿಜ್ಞಾನವು ನಷ್ಟವಾಗಿ ಹೋಗಿದೆ, ಕಂದ.

ಮಹಾರಾಜ :—(ನಕ್ಕು,) ಅಹುದು, ಅಮ್ಮಯ್ಯ : ಇಂದೇ ತಾನೇ ನನಗೂ ಜನ್ಮಾಂತರ ಪ್ರವೇಶವಾದುದು-ಅಮ್ಮಯ್ಯ, ನೀವು ಕುಳಿತುಕೊಳ್ಳಿ !

ಇಬ್ಬರೂ :—(ಸುಖಾಸನಗಳಲ್ಲಿ ಆಸೀನರಾಗುವರು.)

ಮಹಾಮಾತೃಶ್ರೀ :—ಪುಟ್ಟಸ್ವಾಮಿ, ಹೀಗೆ ಅಕಸ್ಮಾತ್ತಾಗಿ ಈ ವಿಪರೀತ ಪ್ರಚಾರದ ಸೌಭಾಗ್ಯಕ್ಕೆ ಕಾರಣವೇನು ? (ಸುತ್ತನೋಡಿ ಪ್ರಫುಲ್ಲಾಸ್ಯೆಯಾಗಿ) ಮತ್ತೆ,...........

ಮಹಾರಾಜ :—(ಬೆಳ್ನಗೆವರೆಸು,) ಅಹುದು, ಅಮ್ಮಯ್ಯ, ನನ್ನ ಅಪ್ಸರೆಯರನ್ನು ಬೀಳ್ಕೊಂಡು, ಅವರವರ ಸ್ಥಾನಗಳಿಗೆ ಕಳಿಹಿದೆನು. ಇನ್ನು ಆ ಅಪ್ಸರೆಯರಿಗೆ ಬದಲಾಗಿ ಪ್ರಧಾನ ಮಂತ್ರಿಗಳೂ, ಸಂಗೀತ ವಾದ್ಯಗಳೆಡೆಯಲ್ಲಿ ಶಸ್ತ್ರಾಸ್ತ್ರಗಳೂ, ಸಾರಿಮೇಳಕ್ಕೆ ಪ್ರತಿಯಾಗಿ ಸಪ್ತಾಂಗಮುದ್ರೆಯ ಮಂತಣಗಳೂ, ಆ ಸ್ವರ್ಗಸುಖದ ಪದವಿಗೆ ನನ್ನ ಪ್ರಜೆಗಳ ಕ್ಷೇಮಾಭ್ಯುದಯಗಳೂ ಕಯ್ಗೂಡಿ ನೆರವೇರಿ—ನಿಮ್ಮ ಆಶೀರ್ವಾದದಿಂದ—ನನ್ನನ್ನು ಚರಿತಾರ್ಥನನ್ನಾಗಿ ಮಾಡಬೇಕಾಗಿದೆ.

ಮಹಾಮಾತೃಶ್ರೀ :—(ಕಂಪಿತಸ್ವರದಿಂದ,) ಮಹಾದೇವನು ನಿನಗೆ ಮಂಗಳವನ್ನುಂಟು ಮಾಡಿ, ರಕ್ಷಿಸಿಕೊಳ್ಳಲಿ, ಕಂದ !

ಮಹಾಜ :—(ಎದ್ದು ತನ್ನ ಮಾತೆಗೆ ನಮಸ್ಕರಿಸಿ, ಕುಳ್ಳಿರುವನು)

ಮಹಾಮಾತೃಶ್ರೀ :—(ಅನತಿಕಾಲದ ಬಳಿಕ,) ಪುಟ್ಟಸ್ವಾಮಿ, ವಿಕ್ರಮರಾಯನನ್ನು ಏನುಮಾಡುವೆ?

ಮಹಾರಾಜ :—ಅವನ ಕೃತ್ರಿಮತೆಯನ್ನು, ಸುಳ್ಳು ಲೆಕ್ಕಪತ್ರಗಳನ್ನು, ದ್ರೋಹವನ್ನು ನಾಳಿನ ಓಲಗಸಾಲೆಯಲ್ಲಿ ಲೋಕಕ್ಕೆ ತಿಳಿಯುವಂತೆ ವಿಚಾರಿಸಿ, ವ್ಯಕ್ತಗೊಳಿಸಿ, ತರುವಾಯ ಅವನ ಸರ್ವಸ್ವವನ್ನೂ ಅರಮನೆಗೆ ತೆಗೆದುಕೊಂಡು, ಅವನನ್ನು ದೊಡ್ಡಗಿಡ್ಡಂಗಿಗೊ.... ಶೂಲದಮರದ ತುತ್ತತುದಿಗೋ ನೂಕಿ ತೀರಿಸುವೆನು.

ಮಹಾಮಾತೃಶ್ರೀ:—ಎರಡನೆಯದೇ ಕ್ಷೇಮಕರವಾದುದು.

ಮಹಾರಾಜ:—ಹಾಗೆಯೇ ಆಗಲಿ, ಅಮ್ಮಯ್ಯ.

ಮಹಾಮಾತೃಶ್ರೀ :—(ಬೇವಸದಿಂದೆದ್ದು) ಆದರೂ, ಅವನ ವಿಷಯದಲ್ಲಿ ಎಚ್ಚರಿಂದಿರು. ಪುಟ್ಟಸ್ವಾಮಿ !-ನಿನ್ನ ಅಪ್ಪಾಜಿಯ ಕಾಲಾ ನಂತರದಲ್ಲಿ, ಎಂದರೆ ಸುಮಾರು ಇಪ್ಪತ್ತು ವರುಷಗಳಿಂದ ರಾಜ್ಯದ ಆಯವ್ಯಯಗಳೆಲ್ಲಾ ದಳವಾಯಿಗಳ ಕಯ್ಯಳತೆಯಾಗಿದ್ದು, ಆ ದುರಾಶೆಯ ಧೂರ್ತರು ರಾಜಶಕ್ತಿಯ ದುರುಪಭೋಗದ.... ಆ ಸವಿಯನ್ನು ಕಂಡುಕೊಂಡಿದ್ದಾರೆ, ನಿನಗೆ ಮೊದಲು ಆಳಿದ ನಿನ್ನ ಅಣ್ಣಾಜಿಯವರ ಮಕ್ಕಳು, ಚಾಮರಾಜ ಒಡೆಯರು, ಪಟ್ಟಕ್ಕೆ ಬಂದಾಗ ಏನೊಂದನ್ನೂ ಅರಿಯದ ಮಗುವಾಗಿದ್ದರು. ಅವರಿಗೆ ಪಾಠವನ್ನೋದಿಸುತ್ತಿದ್ದ ರಂಗನಾಥ ದೀಕ್ಷಿತ, ದಳವಾಯಿಯಾಗಿದ್ದ ಬೆಟ್ಟದ ಅರಸು, ಬೊಮ್ಮರಸ ಪಂಡಿತ-

ಮಹಾರಾಜ:—ಆರು ! ಈಗಳೂ ಅರಮನೆಗೆ ಔಷಧವನ್ನೊಪ್ಪಿಸುವ ನಿಯೋಗಿ ಬೊಮ್ಮರಸ ಪಂಡಿತನೆ?

ಮಹಾಮಾತೃಶ್ರೀ:—ಅಹುದು, ಇವರೆಲ್ಲ ಆ ಚಾಮರಾಜ ಒಡೆಯರಿಗೆ ರಾಜ್ಯದಾಡಳಿತಗಳಲ್ಲಿ ಒಮ್ಮೆಯೂ ಮನವಾಗದಂತೆ—ಅವರು ಸರ್ವದಾ ಸ್ತ್ರೀಲೋಲರಾಗಿರುವಂತೆಯೂ ಸಮಕಟ್ಟಿ, ಆಳುತಿದ್ದರು.

ಮಹಾರಾಜ:—ನೀಚರು !........ ಅದಕ್ಕೆ ವಿಕ್ರಮರಾಯನ ಒಪ್ಪಿಗೆಯೂ ಸಹಾಯವೂ ಇದ್ದಿತಷ್ಟೆ?

ಮಹಾಮಾತೃಶ್ರೀ:—ಆಗ ಅವನೂ ಒಬ್ಬ ದಳವಾಯಿಯಲ್ಲವೆ ?

ಮಹಾರಾಜ :— (ನೆಗೆದೆದ್ದು ಶತಪಥ ತಿರುಗುತ್ತಿದ್ದು, ಥಟ್ಟನೆ ನಿಂತು,) ಆಗ ನೀವು – ಅರಮನೆಯರು ....ಅನ್ತಃಪುರಃದವರು.... ....ನೀವು ಮಾಡುತ್ತಿದ್ದುದೇನು ?

ಮಹಾಮಾತೃಶ್ರೀ :—(ಮೆಲ್ಲಗೆ) ನಮ್ಮಿಂದೇನೂ ಆಗುವಂತಿರಲಿಲ್ಲ. ನಾವು ಅಬಲೆಯರಾದ ಹೆಂಗುಸರು.

ಮಹಾರಾಜ :—ಹೆಂಗುಸರು ? (ದಡದಡನೆ ಶತಪಥ ತಿರುಗುತ್ತಿದ್ದು, ನಿಂತು, ಎದೆಯ ಮೇಲೆ ಕರತಳವನ್ನಿಟ್ಟು ಒಂದೆರಡು ಬಾರಿ ಕೆಮ್ಮಿ, ಸಮೀಪದ ಸುಖಾಸನವೊಂದರಲ್ಲಿ ಕುಳಿತು, ಮುಂಗಯ್ಯಿಂದ ಕಪೋಲಗಳನ್ನು ಪರೀಕ್ಷಿಸಿ ಕೊಳ್ಳುತ್ತಿದ್ದು, ಹಿಂದಣ್ಗೊರಗಿ, ಕಯ್ದುಗಳನ್ನು ಹೆಡಕಿನ ಕೆಳಗೆ ಜೋಡಿಸಿ ಕೊಳ್ಳುತ್ತ ದೀರ್ಘ ನಿಶ್ವಾಸವನ್ನು ಬಿಡುವನು.)

ಮಹಾಮಾತೃಶ್ರೀ :—(ಭಯಗೊಂಡೆದ್ದು ಹೋಗಿ ಮಹಾರಾಜನ ಕೆನ್ನೆಯನ್ನು ಮುಟ್ಟಿ ನೋಡಿ, ತಳ್ಳಂಕದಿಂದ,) ಜ್ವರ!—ಕಂದ, ನಿನಗೆ ಜ್ವರವು ಬಂದಿದೆ !

ಮಹಾರಾಜ :— (ಎವೆಗಳನ್ನು ಮುಚ್ಚಿ ತೆರೆದು, ಮೆಲ್ಲನೆ,) ಇರಬಹುದು. ಅಮ್ಮಯ್ಯ ; ನನ್ನ ದೇಹಕ್ಕೆ ಬಹಳ ಆಯಾಸವಾದಂತಿದೆ. ಓ ! ಅದೇನೂ ಇಲ್ಲ. ಅಮ್ಮಯ್ಯ : ನೀವು ಹೆದರಬೇಡಿ. ಇಂದು ಬೆಳಗಿನಿಂದಳವಟ್ಟ ಅನೇಕ ಉದ್ವೇಗ ಮನೋವಿಕಾರಗಳಿಂದ ನನಗೆ ಬಳಲ್ಕೆಯಾಗಿದೆ, ಅಷ್ಟೇ. ಸ್ವಲ್ಪ ಅಭ್ಯಾಸವಾದರೆ;.... .... (ಕಣ್ಮುಚ್ಚಿಕೊಳ್ವನು.)

ಮಹಾಮಾತೃಶ್ರೀ :—ಪಂಡಿತರಿಗೆ ಹೇಳಿಕಳುಹುವೆನು.

ಮಹಾರಾಜ :—(ಕಿರಿದು ಹೊತ್ತಿನ ಬಳಿಕ ಕನವರಿಸುವನೆಂಬಂತೆ.) ಹುಂ.

ಪ್ರವೇಶ ೩.

[ಸ್ಥಾನ :—ಶ್ರೀರಂಗಪಟ್ಟಣ, ವಿಕ್ರಮರಾಯನ ಹರ್ಮ್ಯಾಗ್ರದ ಮೊಗಸಾಲೆ.]

(ವಿಕ್ರಮರಾಯನು ಬರೆಯುತ್ತಿರುವನು.)

ವಿಕ್ರಮರಾಯ :—(ಕಡೆಗೆ,) ತುಂಗ ! ತುಂಗ !—ತುಂಗ !

(ತುಂಗರಾಯನು ಓಡಿ ಬರುವನು)

ತುಂಗರಾಯ :—ಶ್ರೀಮಂತರು ಕರೆದಂತಾಯ್ತು.

ವಿಕ್ರಮರಾಯ :—ಈವೋಲೆಗೆ ಕರಣಿಕರಿಂದ ನಮ್ಮ ಮುದ್ರೆಯನ್ನು ಹಾಯ್ಕಿಸಿ, ಒಡನೆಯೇ ನೀನಿದನ್ನು ತೆಗೆದುಕೊಂಡು ಹೊರಟು, ನಾಳೆ ಬೆಳಗಾಗುವುದರೊಳಗಾಗಿ ತೆರಕಣಾಂಬಿಯಲ್ಲಿರುವ ನಮ್ಮ ನರಸರಾಜನಿಗೆ ಮುಟ್ಟಿಸಬೇಕು.

ತುಂಗರಾಯ :—ಶ್ರೀ ರಣಧೀರ ಕಂಠೀರವ ನರಸರಾಜರಿಗೆ ?

ವಿಕ್ರಮರಾಯ :—ಅಹುದು.

ತುಂಗರಾಯ:—ಅಪ್ಪಣೆ.

ವಿಕ್ರಮರಾಯ :—ಅಲ್ಲಿಯುವರಾರಾದರೂ ರಾಜಧಾನಿಯ ವೃತ್ತಾನ್ತವೇನೆಂದು ಬೆಸಗೊಂಡ,ರೆ ಶ್ರೀ ಮನ್ಮಹಾರಾಜ ಇಮ್ಮಡಿ ರಾಜ ಒಡೆಯರು ಸ್ವರ್ಗಸ್ಥರಾದರೆಂದು ಹೇಳು.

ತುಂಗರಾಯ:—(ನಡುಗಿ, ಬಣ್ಣಗೆಟ್ಟು, ಬಿಡುಗಣ್ಣನಾಗಿದ್ದು, ಒಣಗಿದ ತುಟಿಗಳನ್ನು ಇರ್ಪುಗುಂದಿದ ನಾಲಿಗೆಯಿಂದ ಸಮರಿಕೊಂಡು.) ಆದರೆ......... ಆದರೆ ....ಮಹಾರಾಜರು ಇನ್ನೂ ಬದುಕಿರುವರು: ಅವರು ಇನ್ನೂ—ಸತ್ತಿಲ್ಲ.

ವಿಕ್ರಮರಾಯ :—(ತುಂಗರಾಯನನ್ನು ಕೆಣ್ಣಗಣ್ಣಿಂದ ನಿಟ್ಟಿಸುತ್ತಿದ್ದು,) ನಮ್ಮ—ದಳವಾಯಿ ವಿಕ್ರಮರಾಯನ—ಮಾತಿನಲ್ಲಿ ನಿನಗೆ ಅವಿಶ್ವಾಸವುಂಟಾಯ್ತೆ ? ಇಲ್ಲದಿದ್ದರೆ, ನೀನು ಹೇಡಿಯಾದೆಯೊ ?

ತುಂಗರಾಯ :—(ನಿಮಿರಿ ನಿಂತು) ಎರಡೂ ಇಲ್ಲ.

ವಿಕ್ರಮರಾಯ : —ಹೋಗು............ರಾಜಧಾನಿಯಲ್ಲಿ ಏನು ?

ತುಂಗರಾಯ :— (ಅಧೃಢಸ್ವರದಿಂದ,) ಆಳಿದ ಮಹಾಸ್ವಾಮಿಯವರು ಶ್ರೀಮನ್ಮಹಾರಾಜ ಇಮ್ಮಡಿ ರಾಜ ಒಡೆಯರು ನಿನ್ನೆ ಸ್ವರ್ಗಸ್ಥರಾದರು. ರಾಜಧಾನಿಯು.........ದೇಶವೇ ಶೋಕಸಾಗರದಲ್ಲಿ ಮುಳುಗಿ ಹೋಗಿದೆ.

ವಿಕ್ರಮರಾಯ :—ಹುಂ, ಹಾಗೆಂದೂ ಈ ಓಲೆಯಲ್ಲಿ ಬರೆದಿರುವೆವು ; ಜೋಕೆ !

ತುಂಗರಾಯ :—(ಓಲೆಯನ್ನು ತೆಗೆದುಕೊಂಡು, ಹೊರಡುವನು.)

ವಿಕ್ರಮರಾಯ :—ತಡೆ, ತುಂಗ, ಆ ಕಳ್ಳಕರಣಿಕರು ಅದಕ್ಕೆ ಮುದ್ರೆಯನ್ನಂಕಿಸುವಾಗ ಒಳಗಣ ಬರೆಹವನ್ನೋದಿಕೊಳ್ಳದಂತೆ ಎಚ್ಚತ್ತು ನೋಡಿಕೊಳ್ಳುತ್ತಿರು.

ತುಂಗರಾಯ:—ಅಪ್ಪಣೆ.

ವಿಕ್ರಮರಾಯ :—ಕೆಳಗಣ ಅಂಗಳದಲ್ಲಿರುವ ಬೊಮ್ಮರಸಪಣ್ಡಿತನನ್ನಿತ್ತ ಕಳುಹಿ, ಆ ಬಳಿಕ ನೀನು ಕರಣಿಕರ ಚಾವಡಿಗೆ ಹೋಗು.

ತುಂಗರಾಯ :—ಅಪ್ಪಣೆ (ಹೋಗುವನು.)

ವಿಕ್ರಮರಾಯ :—(ಚಿಂತಾಮಗ್ನನಾಗಿರುವನು.)

(ಬೊಮ್ಮರಸ ಪಣ್ಡಿತನ ಪ್ರವೇಶ).

ಬೊಮ್ಮರಸ :—(ವಿಕ್ರಮರಾಯನಿಗೆ ಕಯ್ಮುಗಿಯುವನು.)

ವಿಕ್ರಮರಾಯ :—(ಕತ್ತೆತ್ತಿನೋಡಿ) ಬಾ, ಪಂಡಿತ, ಕುಳಿತುಕೋ. ನಿನ್ನ ವೇಷವು ಅರಮನೆಗೆ ತವಕದ ಪ್ರಯಾಣವನ್ನು ಸಾರುತ್ತಿರುವುದು.

ಬೊಮ್ಮರಸ :—(ಕುಳಿತುಕೊಳ್ಳುತ್ತ,) ಅಹುದು ; ಪುಟ್ಟಸ್ವಾಮಿಯು ಆಯಾಸದಿಂದ ಮೂರ್ಛಿತನಾಗಿರುವನಂತೆ.

ವಿಕ್ರಮರಾಯ :—(ಗಂಭೀರಭಾವದಿಂದ) ಪಂಡಿತ, ನೀನು ಅರಮನೆಗೆ ಹೋಗಿ, ಅಲ್ಲಿ ಅಪಮಾನಿತನಾಗಬಾರದೆಂಬ ಅಭಿಪ್ರಾಯದಿಂದಲೇ ನಾವು ನಿನ್ನನ್ನಿಲ್ಲಿಗೆ ಹೀಗೆ ಬರಮಾಡಿದುದು ; ನಮ್ಮನ್ನಾಳುವ

ಶ್ರೀಮನ್ಮಹಾರಾಜ ಶ್ರೀ ಇಮ್ಮಡಿ ರಾಜ ಒಡೆಯರನ್ನು ಇನ್ನು—ಈಗಳಿಸಿಂದ ಪುಟ್ಟಸ್ವಾಮಿಯೇ ಮುಂತಾದ ಸಲ್ಗಿಯ ಅತಿಪರಿಚಯದ ಹೆಸರುಗಳಿಂದ ಸಂಬೋಧಿಸಿದರೆ...... .....ರಾಜದ್ರೋಹವೆನಿಸುವುದು !

ಬೊಮ್ಮರಸ :—(ನಸುನಗೆವೆರಸು) ಶ್ರೀಮಂತರು ಹಾಗೆ ವಿಧಿಸಿದರೆ....ಅಪ್ಪಣೆ.

ವಿಕ್ರಮರಾಯ :—ಶ್ರೀಮಂತರಿಗೂ ಅದೇ ಗತಿಯಾಗಿದೆ. ನಮ್ಮ ದಳವಾಯಿತನದ ಆಯುಸ್ಸು ನಾಳೆಗೆ ಬರಿದಾಗುವುದು.

ಬೊಮ್ಮರಸ :—(ಬಿಲ್ಲುಂಜಿರಗಾಗಿ,) ಹಾಗೆಂದರೇನು ?

ವಿಕ್ರಮರಾಯ :—ಅಹುದು, ಬೇರೆ ದಳವಾಯಿಯನ್ನಾಳುವ ಶಕ್ತಿಯು ಮಹಾಸ್ವಾಮಿಯವರಿಗೆ ಮೆಯ್ದೋರಿ ಸಿದ್ಧವಾಗಿರುವುದು... .... ಇನ್ನೆಂದರೆ, ಆಳುವ ಮಹಾಸ್ವಾಮಿಯವರು ನಾಳಿನ ಹೊತ್ತರೆಗೆಂದು ಸ್ವತಂತ್ರವಾಗಿ—ಸ್ವತಂತ್ರವಾಗಿ ನಿರ್ಣಯಿಸಿರುವ ಒಡ್ಡೋಲಗದಲ್ಲಿ ತಮ್ಮ ಅಪ್ಪಾಜಿಯವರ ಆಳ್ಕಿಗಡೆಯಿಂದ ಇಂದಿನವರೆಗೆ ನಡೆದಿರುವ ರಾಜ್ಯದಾಡಳಿತದ ಆಯವ್ಯಯದ ಲೆಕ್ಕಪತ್ರಗಳನ್ನೆಲ್ಲಾ ಕೂಲಂಕಷವಾಗಿ ಒಪ್ಪಿಸಿಕೊಳ್ಳುವರು.

ಬೊಮ್ಮರಸ :—(ಎರ್ದೆಗಲಂಕಿ,) ಅದಕ್ಕೆ ನಾವು ಅನುಗೊಂಡಿರುವೆವಷ್ಟೆ ?

ವಿಕ್ರಮರಾಯ :—ಇಲ್ಲ. ಪಂಡಿತ ಮಹೀಶೂರರಾಜವಂಶದ ಅಪ್ರತಿಹತವಾದ ಬುದ್ಧಿಶಕ್ತಿಯ ತೀಕ್ಷ್ಣತೆಯನ್ನು ನೀನು ತಿಳಿಯಲಾರೆ ; ಇಂದು ಪ್ರಾತಃಕಾಲದಲ್ಲಿಯೇ ಅವರಿಗೂ....ನಮಗೂ ಅರಿವಾಗದಂತೆ ಹಠಾತ್ತಾಗಿ ಕರಣಿಕರ ಚಾವಡಿಗೆ ನುಗ್ಗಿ, ಮುಕ್ಕಾಲು ಮೂರು ವೀಸಪಾಲು ಲೆಕ್ಕಪತ್ರಗಳನ್ನೆಲ್ಲ .... ಮಹಾಸ್ವಾಮಿಯವರು ಪರಾಂಬರಿಸಿ....ಅರ್ಥಮಾಡಿಕೊಂಡಿರುವರು.

ಬೊಮ್ಮರಸ :—(ಬಗೆಗೆಟ್ಟು,) ಹಾಗಾದರೆ ನಾನು ... ನಾನು—

ವಿಕ್ರಮರಾಯ :—ಹತ್ತೊಂಬತ್ತುವರುಷ ಎರಡು ತಿಂಗಳು ಹದಿನಾರು ದಿನಗಳಿಂದೀಚೆಗೆ ನಿನಗೆ ನಿಯೋಗಿತನವಾದ ಬಳಿಕ ವಿಶೇಷವಾಗಿ —ಮಹಾಸ್ವಾಮಿಯವರ ಅರಮನೆಯ ಬೊಕ್ಕಸದಿಂದ ನಿಷ್ಕಾರಣ

ವಾಗಿ ಮೋಸದಿಂದ ನೀನು ಪಡೆದಿರುವ ಎರಡು ಲಕ್ಷದ ನಾಲ್ವತ್ತೆಂಟು ಸಹಸ್ರದ ಮುನ್ನೂರ ಅರವತ್ನಾಲ್ಕು ದುಗ್ಗಿವರಹಗಳ ಲೆಕ್ಕವು ಮಹಾಸ್ವಾಮಿಯವರಿಗೆ ಅಳವುಗೊಟ್ಟು, ನಿರ್ಧಾರಿತವಾಗಿದೆ.

ಬೊಮ್ಮರಸ :—(ಬೆಳ್ಳಗನಾಗಿ, ಕಂಪಿಸುತ್ತ ಎದ್ದು, ಕಯ್ಗಳನ್ನು ಹೊಸೆದು ಕೊಳ್ಳುತ್ತ,) ಅಯ್ಯೋ ! ಅಯ್ಯೋ !

ವಿಕ್ರಮರಾಯ :—ನಿಯೋಗಿ ಬೊಮ್ಮರಸಪಂಡಿತ ! ಇದಕ್ಕೆ ನಿನ್ನ ಉತ್ತರ ವಾದವೇನು ?

ಬೊಮ್ಮರಸ:—(ಸುತ್ತನೋಡಿ ಗದ್ಗದಸ್ವರದಿಂದ,) ನನ್ನ ಉತ್ತರವೆ ?........ ಉತ್ತರವೆ ?—ಕಾವೇರಿಯ ....ಪ್ರವಾಹದಲ್ಲಿ ...

ವಿಕ್ರಮರಾಯ :—(ಪುರುಷಕಂಠದಿಂದ,) ಪಂಡಿತ ! ಇಲ್ಲಿ ಬಾ, ಕುಳಿತುಕೊ. ನಿನ್ನ ಮುಖದ ಬೆವರನ್ನೊರಸಿಕೊ. ಈಗ, ಸಾವಧಾನತೆಯಿಂದ ಕೇಳು; ನಾಳೆ ಬೆಳಗಾಗುತ್ತಲೇ ನೆರವೇರಬೇಕಾದ ಒಡ್ಡೋಲಗವು ನೆರೆಯುಲಾರದೆ ಹೋದರೆ. ನಿನಗೀ ವಿಪತ್ತಿನಿಂದ ವಿಮೋಚನವಾಗುವುದಿಲ್ಲವೇ ?

ಬೊಮ್ಮರಸ :—ಅಹುದು, ಅಹುದು.

ವಿಕ್ರಮರಾಯ—ಅದನ್ನು ನಿಲ್ಲಿಸಲಾರೆವೆ ?

ಬೊಮ್ಮರಸ: —(ತವಕದಿಂದ,) ಅರಮನೆಗೆ ಬೆಂಕಿಯನ್ನಿಟ್ಟು ಹೊತ್ತಿಸಿ—ಬೇಯಿಸಿಬಿಡೋಣ !

ವಿಕ್ರಮರಾಯ :—(ಮುಗುಳ್ನಗೆಯಿಂದ,) ಆಗಲೂ ನೀನು ಮಹಾಸನ್ನಿಧಾನವನ್ನು ಸಭೆಯಲ್ಲಿ ಓಲಯಲೇ ಬೇಕಾಗುವುದು; ಎಂದರೆ, ಒಡ್ಡೋಲಗವು ನಡೆಯುವುದು.

ಬೊಮ್ಮರಸ :—ಎಲ್ಲಿ ? ಹೇಗೆ ?

ವಿಕ್ರಮರಾಯ :—ಎಲ್ಲಿಯೋ ......ಒಂದು ಗುಡಿಸಲಲ್ಲಿ.

ಬೊಮ್ಮರಸ :—(ನಿರಾಶನಾಗಿ,) ಹೇಗೆ ?

ವಿಕ್ರಮರಾಯ :—ಓಲಗಗುಡಲು ತಾವೇ ನಿಶ್ಚಯಿಸಿ, ನೇಮಿಸಿ, ಸಾಧಿಸಿಯೇಬಿಡಬೇಕೆಂಬ ಆರ್ಯ—ಅವರು ನೀನಿಡುವ ಬೆಂಕಿಯಿಂದ ಮೆಯ್ದುಪ್ಪಿಸಿಕೊಂಡರೆ ?

ಬೊಮ್ಮರಸ :—(ಯೋಚಿಸುತ್ತಿದ್ದು,) ಅಹುದು, ಅವರು ಓಲಗವೀಯು ಲಾಗದು ಅಷ್ಟೇ ! (ವಿಕಾರವಾಗಿ ಗಹಗಹಿಸಿ,) ನಾಳಿನ ದಿವಸಕ್ಕೆ ಮಹಾ ಸ್ವಾಮಿಯವರು ಇಂದಿನ ಆಯಾಸದಿಂದಲೇ ಏಳಲಾರದಷ್ಟು ಅಸ್ವಸ್ಥರಾಗುವರು.

ವಿಕ್ರಮರಾಯ :—ನಿನ್ನಾ ಮದ್ದಿನ ಗುಣವು ತೀರಿದ ಬಳಿಕ, ಅವರು ಎಚ್ಚರಗೊಂಡೇಳುವರಷ್ಟೆ ; ಆಗಳಾದರೂ ಈ ವಿಚಾರಣೆಯು ತಪ್ಪುವಂತಿಲ್ಲ.

ಬೊಮ್ಮರಸ :—(ಬೆದರಿ, ದುಮ್ಮಾನದಿಂದಿದ್ದು, ಕ್ಷೀಣಕಂಪಿತಸ್ವರದಿಂದ,) ಇಂದಿನ ಆಯಾಸದಿಂದ ಅವರಿಗೆ ಮನೋವೈಕಲ್ಯವು, ಆಜೀವನವೂ-- ಹುಚ್ಚು ಬಂದಡಸಿದರೋ ?

ವಿಕ್ರಮರಾಯ :—ಅವರ ಆಪ್ತರು ಮಿತ್ರರು ಬಾಂಧವರು ಕಿಸುರ್ವೇರಿನ ನಿನ್ನನ್ನು ಸುಮ್ಮನೆ ಬಿಡುವರೇನು ?

ಬೊಮ್ಮರಸ :—(ಕಳೆಗೆಟ್ಟು,) ....ಮುಂ....ಮುಂದಣದು.... ಎಂತಹ ಮಹಾಪಾತಕ !

ವಿಕ್ರಮರಾಯ :—ಅಹುದು, ಪಂಡಿತ. ಒಂದು ಸುಳ್ಳನ್ನು, ದುಷ್ಕೃತ್ಯ ವನ್ನು, ಅಪರಾಧವನ್ನು ಮುಚ್ಚಿ ಗೆಲ್ಲುವುದಕ್ಕೆ, ಸಮರ್ಥಿಸಿ ಸಾಧಿಸಿ ಜೀರ್ಣಿಸಿಕೊಂಡು ಬದುಕುವುದಕ್ಕೆ ಅಂತಹವು—ಇನ್ನೂ ಉತ್ಕಟ ವಾದವು—ಹತ್ತು....ನೂರು.......ಸಾವಿರದ ಗಣನೆಗಳಲ್ಲಿ ಹುಟ್ಟಿ ಒದವಬೇಕು.

ಬೊಮ್ಮರಸ :—(ಥಿಗ್ಗನೆದ್ದು, ದ್ರುತಗತಿಯಿಂದ ಹೊರಟು ಹೋಗುವನು)

ವಿಕ್ರಮರಾಯ :—(ಸ್ವಲ್ಪ ಹೊತ್ತಿಗೆ,) ಅಳಗರಾಜ !

(ಅಳಗರಾಜಯ್ಯನ ಪ್ರವೇಶ)

ಅಳಗರಾಜಯ್ಯ :—(ವಿಕ್ರಮರಾಯನಿಗೆ ನಮಿಸಿ ನಿಲ್ಲುವನು.)

ವಿಕ್ರಮರಾಯ :—ಅಳಗರಾಜ, ಬೊಮ್ಮರಸ ಪಣ್ಡಿತನು ಅರಮನೆ ಯೊಳಕ್ಕೆ—ಹೊಸತಿಲನ್ನು ದಾಂಟಿದ ಆ ಕ್ಷಣವೇ ನಾವದನ್ನು ತಿಳಿಯಬೇಕು.

ಅಳಗರಾಜಯ್ಯ :—ಅಪ್ಪಣೆ. (ವಂದಿಸಿ ಹೊರಡುವನು.)

ಪ್ರವೇಶ ೪

[ಸ್ಥಾನ :—ಶ್ರೀರಂಗಪಟ್ಟಣ, ಅರಮನೆಯೊಳಗೆ ನಾಟ್ಯ ಶಾಲೆ.]

(ಮಹಾಮಾತೃಶ್ರೀ ತಿಮ್ಮಾಜಮ್ಮಣ್ಣಿಯು ಮಹಾರಾಜನ ಸಜ್ಜೆಯಲ್ಲಿ ಅವನ ತಲೆಯನ್ನು ತನ್ನ ತೊಡೆಯಮೇಲಿರಿಸಿಕೊಂಡು ಕುಳ್ಳಿರುವಳು. ಮಹಾರಾಣಿಯವರು—ವೇಂಕಟಾಜಮ್ಮಣ್ಣಿ ನಂಜಮ್ಮಣ್ಣಿಯವರು—ಅವನ ಪಾದದೆಡೆಯಲ್ಲಿ ಕುಳಿತು, ಆಲವಟ್ಟಗಳಿಂದ ಅವನಿಗೆ ಮೆಲ್ಲನೆ ಬೀಸುತ್ತಿರುವರು. ಚೆಂದವ್ವೆಯೂ ರುದ್ರವ್ವೆಯೂ ಮನಗದಡಿ, ಮ್ಲಾನವದನೆಯರಾಗಿ, ದೂರದಲ್ಲಿ ನಿಂತಿರುವರು.)

ಮಹಾಮಾತೃಶ್ರೀ—(ಈಷತ್ಕಾಲದ ತರುವಾಯ, ಶಿರವೆತ್ತಿ, ಅಕ್ಷಮಸ್ವರದಿಂದ,) ಏನಾ ಪಂಡಿತನು ಬರುವುದೇ ಇಲ್ಲವೇನು ? ಎಲೆ, ಚೆಂದವ್ವೆ, ನೀನು ಅವನ ಮನೆಗಾದರೂ ಹೋಗಿ ವಿಚಾರಿಸಿಕೊಂಡು ಬೇಗನೆ ಬಾ, ಹೋಗು.

ಚೆಂದವ್ವೆ :—(ಹೋಗುವಳು.)

(ಅನತಿಕಾಲದಲ್ಲಿಯೇ ಚೆಂದವ್ವೆಯ ಬೊಮ್ಮರಸಪಂಡಿತನ ಪ್ರವೇಶ.)

ಮಹಾಮಾತೃಶ್ರೀ :—(ತಲೆಯೆತ್ತಿ,) ಪುಟ್ಟಸ್ವಾಮಿ—ಯವರಿಗೆ....ಮಹಾರಾಜರಿಗೆ ಅಸ್ವಸ್ಥತೆಯೆಂದು ಈ ರುದ್ರವ್ವೆಯು ನಿಮಗೆ ತಿಳುಹಿ ಎಷ್ಟು ಹೊತ್ತಾಯ್ತು ?

ಬೊಮ್ಮರಸ :—(ಕಿರುದನಿಯಿಂದ,) ಆಗಳೇ—

ಮಹಾಮಾತೃಶ್ರೀ :—ಮೊಗಗೊಟ್ಟು ಮಾತನಾಡಿ, ಪಂಡಿತರೆ !

ಬೊಮ್ಮರಸ :—(ಅಧೋವದನನಾಗಿ,) ಅರಮನೆಯ ಇದಿರಿಗೆ ಕರಾಟದ ನೆನೆಪುಂಟಾಗಿ, ಹಿಂದಿರುಗಿ ಹೋಗಬೇಕಾಯ್ತು.

ಮಹಾಮಾತೃಶ್ರೀ :—ಇರಬಹುದು. ನಿಮ್ಮ ಈ ಅಕ್ಷಮ್ಯವಾದ ಕಾಲ ವಿಳಂಬದ ವಿಷಯವನ್ನು ಮಹಾರಾಜರೇ ಎದ್ದಬಳಿಕ ವಿಚಾರಿಸಿಕೊಳ್ಳುವರು. ಈಗ ಮಹಾಸ್ವಾಮಿಯವರಿಗೇನಾಗಿದೆ. ? ನೋಡಿ.

ಬೊಮ್ಮರಸ :—(ಮುಂದುವರಿದು, ಕ್ರಮಪ್ರಕಾರ ನಾಡಿ ಗಂಡಸ್ಥಲ ಕಯ್ಕಾಲ್ಗಳು ಮುಂತಾದುವನ್ನು ಮುಟ್ಟಿ ಹಿಡಿದು ಪರಿಕಿಸುತಿದ್ದು, ಹೃದಯದ ಮೇಲಣ

ಬಟ್ಟೆಗಳನ್ನು ಬಿಚ್ಚಿ ಸರಿಯಿಸಿ,) ಅಲ್ಲಿ ಕಿವಿಗೊಟ್ಟಾಲಯಿಸಿ, ತಲೆಯನ್ನಲ್ಲಾಡಿಸುತ್ತ ಎದ್ದು, ಚೆಂದವ್ವೆಯನ್ನು ಕುರಿತು,) ಬೇಗನೆ ಸ್ವಲ್ಪ ಹಾಲನ್ನು ತೆಗೆದುಕೊಂಡು ಬಾ.

ಚೆಂದವ್ವೆ :—(ಚೆಚ್ಚರದಿಂದ ಹೋಗುವಳು.)

ಮಹಾಮಾತೃಶ್ರೀ :—(ತಲ್ಲಳದಿಂದ,) ಪುಟ್ಟಸ್ವಾಮಿಗೇನಾಗಿದೆ, ಪಂಡಿತರೆ?

ಬೊಮ್ಮರಸ :—(ದಡದಡಿಸಿ,) ಆ ಹೃದ್ರೋಗ! ನಾನು ಆದಿಯಿಂದಲೂ ಹೇಳುತ್ತಿದ್ದುದು! ಉತ್ಕಟಾವಸ್ಥೆಗೇರಿದೆ!—ಲಕ್ಷಣಗಳು ಮಂಗಳಕರವಾಗಿಲ್ಲ!

ಮಹಾಮಾತೃಶ್ರೀ :—(ಭಯಚಕಿತೆಯಾಗಿ) ಅಯ್ಯೋ!

(ಚೆಂದವ್ವೆಯು ಓಡಿಬರುವಳು)

ಬೊಮ್ಮರಸ :—(ತನ್ನ ಧೋತ್ರದೊಳಗಿಂದೊಂದು ಸಣ್ಣ ಭರಣಿಯನ್ನು ತೆಗೆದು, ಆದರೊಳಗಣ ಚೂರ್ಣವನ್ನೆಲ್ಲಾ—ಸ್ವಲ್ಪವೂ ಉಳಿಯದಂತೆ ಚೆಂದವ್ವೆಯ ಕಯ್ಯ ಹಾಲ ಬಟ್ಟಲೊಳಕ್ಕೆ ಹಾಕಿ, ಆ ಬಟ್ಟಲನ್ನೆಳೆದುಕೊಂಡು, ರಭಸದಿಂದ ಹೋಗಿ, ಅದನ್ನು ಮಹಾರಾಜನ ಬಾಯ ಸಮೀಪದಲ್ಲಿ ಹಿಡಿಯುವನು.)

ಮಹಾಮಾತೃಶ್ರೀ :—ನಿಮ್ಮ ಕಯ್ಯೇಕೆ ಹೀಗೆ ನಡುಗುತ್ತಿದೆ, ಪಂಡಿತರೆ? ನಿಮಗೆ ಚಳಿ ಬಂದಿರಬೇಕು. ಇಲ್ಲಿ ಕೊಡಿ. (ಆ ಕ್ಷೀರಪಾತ್ರವನ್ನು ಬೊಮ್ಮರಸಪಂಡಿತನ ಹಸ್ತಗಳಿಂದೀಯಿಸಿಕೊಂಡು, ಆದರೊಳಗಣದನ್ನು ಬೆರಲಿಂದ ಕಲಕುತ್ತಿರುವಳು.)

ಮಹಾರಾಜ :—(ಅಲುಗಿ, ಅಲ್ಲಾಡಿ, ನೀಳವಾಗಿ ಉಸಿರ್ಗರೆವನು.)

ಮಹಾಮಾತೃಶ್ರೀ :—(ಮಹಾರಾಜನ ಕಿವಿಗೆ ಬಗ್ಗಿ,) ಪುಟ್ಟಸ್ವಾಮಿ, ಬಾಯ್ತೆರೆ; ಔಷಧ.

ಮಹಾರಾಜ :—(ಹಾಗೆಯೇ ಮೆಯ್ಮುರಿಚಿ ಹೊರಳುತ್ತ,) ಊಂ.

ಮಹಾಮಾತೃಶ್ರೀ :—ಔಷಧ, ಕಂದ.

ಬೊಮ್ಮರಸ :—(ಮೆಯ್ನಡಗುತ್ತ, ತನ್ನ ಹಿಂದಕ್ಕೆ ತಿರುಗಿ, ಮುಖವನ್ನು ಮುಚ್ಚಿಕೊಂಡು, ನಿಲ್ಲುವನು.)

ಮಹಾರಾಜ :—(ಬಾಯ್ತೆರೆಯುವನು.)

ಮಹಾಮಾತೃಶ್ರೀ :—(ಅದನ್ನು ಮಹಾರಾಜನಿಗೆ ಈಂಟಿಸುವಳು.)

ಮಹಾರಾಜ :—(ಪರನಿಮಿಷದಲ್ಲಿ ಪವಡಿಸಿದ್ದಂತೆಯೇ ತಲೆಕಾಲ್ಗಳ ಮೇಲೆದ್ದು, ತೋಳ್ಗಳನ್ನು ವಿಕಾರವಾಗಿ ಬೀಸಿ, "ಅಮ್ಮಯ್ಯಾ !" ಎಂದು ಕೂಗುತ್ತ ಬಿದ್ದು, ನಿಶ್ಚೇಷ್ಟನಾಗುವನು.)

ಮಹಾಮಾತೃಶ್ರೀ :—ಅಯ್ಯೋ ! ಅಯ್ಯೋ ! ಇದೇನು ?

ಮಹಾರಾಣಿಯವರು :—(ದಿಗ್ಭ್ರಾಂತೆಯರಾಗಿ, ಮಹಾರಾಜನನ್ನು ಹಿಡಿದು ಕೊಳ್ವರು.)

ಚೆಂದವ್ವೆ
ರುದ್ರವ್ವೆ } :—(ಭಯವಿಹ್ವಲೆಯರಾಗಿ, ಸಮೀಪವರ್ತಿನಿಯರಾಗುವರು.)

ಮಹಾಮಾತೃಶ್ರೀ :—ಪಂಡಿತರೇ ! ಪಂಡಿತರೇ ! ನೋಡಿ, ಬನ್ನಿ ; ಇದೇನೋ ಆಯ್ತು !

ಬೊಮ್ಮರಸ:— (ಮತ್ತೆ ಹಿಂತಿರುಗಿ, ಮೆಲ್ಲಗೆ ಮುಂದಕ್ಕೆ ಬಾಗಿ, ಮಹಾರಾಜನ ಮುಖವನ್ನು ಹೊಳೆಹೊಳೆವ ದಿಟ್ಟಿಗಳಿಂದ ನಡೆನೋಡುತ್ತಿದ್ದು, ಕಟ್ಟಕಡೆಗೆ ಪಾತಾಳಸ್ವರದಿಂದ,) **ಪುಟ್ಟಸ್ವಾಮಿಯು — ಮಹಾರಾಜರು — ಸ್ವರ್ಗಸ್ಥರಾದರು.**

ಮಹಾರಾಣಿಯವರು :—**ಅಯ್ಯೋ ! ಅಯ್ಯೋ !** (ಮೂರ್ಛಿತೆಯರಾಗಿ ಬೀಳುವರು.)

ಚೆಂದವ್ವೆ
ರುದ್ರವ್ವೆ } :—(ತಮ್ಮ ಸೆರಗುಗಳಿಂದ ಮುಖಗಳನ್ನು ಮುಚ್ಚಿಕೊಂಡು, ಬಿಕ್ಕಿ ಬಿಕ್ಕಿ ಅಳುತ್ತಿದ್ದು ಕಣ್ಣೊರಸಿಕೊಂಡು, ರೋಧಿಸುತ್ತಲೇ ಹೋಗಿ, ಮಹಾರಾಣಿಯರನ್ನು ನೇರ್ಪಡಿಸುತ್ತಿರುವರು.)

ಮಹಾಮಾತೃಶ್ರೀ :—(ಮಹಾರಾಜನ ಮಸ್ತಕವನ್ನೆತ್ತಿ ಮೆಲ್ಲಗೆ ಕೆಳಗಿರಿಸಿ, ಎದ್ದು, ನಟ್ಟಾಲಿಗಳಿಂದ ತನ್ನ ಪುತ್ರನ ದೇಹದತ್ತ ಅಭೀಕ್ಷಿಸುತ್ತಿರುವಳು.)

(ಸಪರಿವಾರ ವಿಕ್ರಮರಾಯನ ಪ್ರವೇಶ)

ವಿಕ್ರಮರಾಯ :—(ಅಳುತ್ತಿರುವ ಅಪ್ಪೆಯರತ್ತ, ಮಹಾಮಾತೃಶ್ರೀಯನ್ನು, ನಿಶ್ಚೇತನೆಯಾಗಿರುವ ಮಹಾರಾಣಿಯರತ್ತ, ಮಹಾರಾಜನ ಶರೀರವನ್ನು ಚಟುಲಕಟಾಕ್ಷದಿಂದ ನೋಡಿ, ಕಡೆಗೆ ಬೊಮ್ಮರಸಪಂಡಿತನನ್ನು ತನ್ನ ತೀಕ್ಷ್ಣ ದೃಷ್ಟಿಗೆ ಸಿಕ್ಕಿಸಿಕೊಂಡು,) ನಮ್ಮನ್ನಾಳುವ ಮಹಾಸ್ವಾಮಿಯವರಿಗೆ ಬಹಳ ದೇಹಾಲಸ್ಯವಾಗಿರುವುದೆಂದು ತಿಳಿಯಿತು ; ಈಗ ಹೇಗಿದೆ, ಪಂಡಿತ ?

ಬೊಮ್ಮರಸ :—(ಅವಾಙ್ಮುಖನಾಗಿ, ನೀರವ.)

ಮಹಾಮಾತೃಶ್ರೀ :—(ಮೊಗವೆತ್ತಿ, ಸುತ್ತ ನಿಟ್ಟಿಸಿ, ಬೊಮ್ಮರಸಪಂಡಿತನತ್ತ ಬಿರುಗಣ್ಣಿಟ್ಟು, ಉತ್ಕಟಕಂಠದಿಂದ.) ಮಹಾಸ್ವಾಮಿಯವರು ಸ್ವರ್ಗಸ್ಥರಾದರು.

ವಿಕ್ರಮರಾಯ ;—ಹಾ ! (ದೀರ್ಘವಾಗಿ ಸುಯ್ದು,) ದೈವಶಾಸನ ! ......ಹುಂ (ಮಹಾರಾಜ ದೇಹದ ಸಾರ್ಕೆಗೆಯ್ದು, ಬದ್ಧಾಂಜಲಿಪುಟನಾಗಿ ಬಾಗಿ, ಮಂಡಿಗಳನ್ನೂರಿ ಕುಳಿತು, ಆ ಶಿಖಾಸರ, ಪಟ್ಟದುಂಗುರ, ಎರೆವಟ್ಟಿನ ಕತ್ತಿ ಇವನ್ನು ಎಚ್ಚರದಿಂದ ಬಿಡಿಸಿ ತೆಗೆದುಕೊಂಡು, ಎದ್ದು, ಹೊರಟು, ಬೊಮ್ಮರಸಪಂಡಿತನನ್ನುದ್ದೇಶಿಸಿ,) ಮಹಾಸ್ವಾಮಿಯವರ ಈ ಆಕಸ್ಮಿಕವಾದ ಅಕಾಲಮರಣದಿಂದೊದಗಿರುವ ರಾಜಕಾರ್ಯಗಳ ವ್ಯವಸ್ಥೆಗೋಸ್ಕರವಾಗಿ ನೆರೆಯುವ ಮಂತ್ರಾಲೋಚನ ಸಭೆಯಲ್ಲಿ ನೀನಿರಬೇಕಾಗಿದೆ. ಪಂಡಿತ ; ನಡೆ !

ಬೊಮ್ಮರಸ :—(ಹೊರಡುವನು.)

ಮಹಾಮಾತೃಶ್ರೀ :—ಇರಿ, ಪಂಡಿತರೆ !— (ಮಹಾರಾಜನ ಶರೀರದತ್ತ ಕಯ್ನೀಡಿ,) ಆ ನಿರ್ಭಾಗ್ಯನು ಇನ್ನೂ ಸತ್ತಿಲ್ಲವೆಂದು ಈ ನನ್ನ ತಾಯ ಹೊಟ್ಟೆಯೊಳಗೊಂದು ಪ್ರತ್ಯಾಶೆಯುಂಟಾಗಿರುವುದು ; ಅವನಿಗೇನಾದರೂ ಚೇತನವುಂಟಾದರೆ, ಆಗಳಿಲ್ಲಿ ಪಂಡಿತರಿಲ್ಲದಿದ್ದರೆ ಹೇಗೆ ? ಆದುದರಿಂದ, ಪಂಡಿತರು ಈಗಳೇ ಹೋಗಲಾಗದು.

ವಿಕ್ರಮರಾಯ :—(ಹುಬ್ಬುಗಂಟಿಕ್ಕಿ, ಸಪರಿವಾರನಾಗಿ ಹೋಗುವನು.)

ಮಹಾಮಾತೃಶ್ರೀ :—(ಸ್ವಲ್ಪಹೊತ್ತು ಕಳೆಯಲು, ಸಜ್ಜಿಯ ತಲೆಯೆಡೆಗೆ ಹೋಗಿ ನಿಂತು,) ಇಲ್ಲಿ ಬನ್ನಿ, ಪಂಡಿತರೆ.

ಬೊಮ್ಮರಸ :—(ಸಮೀಪಕ್ಕೇಳ್ತರುವನು.)

ಮಹಾಮಾತೃಶ್ರೀ :—ಆ ನಿಲುವುಗನ್ನಡಿಯಲ್ಲಿ ನೋಡಿ.

ಬೊಮ್ಮರಸ :—(ಕೊರಲೆತ್ತುವನು.)

ಮಹಾಮಾತೃಶ್ರೀ :—ನಿಮ್ಮ ಮುಖಕ್ಕೂ (ಬೆರಲ್ದೋರುತ್ತ,) ಈ ಶವದ ಮೋರೆಯ ಛಾಯೆಗೂ ಭೇದವೇನಿದೆ ?

ಬೊಮ್ಮರಸ :—ಅಯ್ಯೋ ! (ಹಿಂಜರಿಯುವನು.)

ಮಹಾಮಾತೃಶ್ರೀ :—..................ನನಗಿದ್ದಂತೆ ನಿಮಗೂ ಒಬ್ಬನೇ ಮಗನಲ್ಲವೆ, ಪಂಡಿತರೆ ?

ಬೊಮ್ಮರಸ :—(ಗದ್ಗದಿಕೆಯಿಂದ,) ಏಕೆ ?

ಮಹಾಮಾತೃಶ್ರೀ :—ಇಲ್ಲಿ ಬನ್ನಿ, ಪಂಡಿತರೆ.

ಬೊಮ್ಮರಸ :—ಏತಕ್ಕೆ ?

ಮಹಾಮಾತೃಶ್ರೀ :—ಮುಂದಕ್ಕೆ ಬರುವಿರೇ ?—ಇಲ್ಲವೇ ?

ಬೊಮ್ಮರಸ :—(ಭಯಾರ್ತನಾಗಿ, ಎಡಬಲಹಿಂದುಮುಂದುಗಳನ್ನಾರಯ್ವನು.)

ಮಹಾಮಾತೃಶ್ರೀ :—ಚೆಂದವ್ವೆ ! ರುದ್ರವ್ವೆ ! ಅವರನ್ನು ಬಿಟ್ಟು ಏಳಿ ; ಹೋಗಿ ಬಾಗಿಲ ಸಮೀಪದಲ್ಲಿ, ನಿಲ್ಲಿರಿ.

ಚೆಂದವ್ವೆ, ರುದ್ರವ್ವೆ :—(ಕಣ್ಣಳನ್ನೊರಸಿಕೊಳ್ಳುತ್ತ ಹೋಗಿ, ಕದದ ಎರಡೂ ಕಡೆಗಳಲ್ಲಿ ನೆಲೆಗೊಳ್ವರು.)

ಮಹಾಮಾತೃಶ್ರೀ :—ಚೆಂದವ್ವೆ, ಈ ಪಂಡಿತರು ನನ್ನ ಸಮ್ಮತಿಯಿಲ್ಲದೆ ಹೊರಗೆ ಹೋಗುವುದಕ್ಕೆ ಕಾಲ್ತೆಗೆದರಾದರೆ, ಒಡನೆಯೇ ನಿನ್ನ ಮಡಿಲಲ್ಲಿರುವ ಕಿಗ್ಗಠಾರಿಯಿಂದ ಇವರನ್ನು ಇರಿದು ಕೊಂದಬಿಡು.

ಚೆಂದವ್ವೆ :—ಅಪ್ಪಣೆ. (ತನ್ನ ಸೋಗಿಲೊಳಗೆ ಕಯ್ಯಿಟ್ಟುಕೊಳ್ಳುವಳು)

ಮಹಾಮಾತೃಶ್ರೀ :—ಈಗ, ಪಂಡಿತರೆ, ಅರ್ಥವಾಯ್ತೊ ?

ಬೊಮ್ಮರಸ :—(ಉನ್ಮತ್ತನಂತೆ ಸುತ್ತ ಕಣ್ಗೆಯ್ದು,) ಏನು ?

ಮಹಾಮಾತ್ಯಶ್ರೀ :—ಬನ್ನಿ ಇಲ್ಲಿ, ಅತ್ತ—ಅಲ್ಲಿ ಕುಳಿತುಕೊಳ್ಳಿ........ ಕುಳಿತುಕೊಳ್ಳಿ ? .. ....ಆ ಶವದ ಕಾಲ್ಗಳನ್ನು ಮುಟ್ಟಿ ಹಿಡಿದು ಕೊಳ್ಳಿರಿ. ಇಷ್ಟವಿಲ್ಲವೇನು ? ......ಚೆಂದವ್ವೆ !

ಚೆಂದವ್ವೆ :—ಏನು ?

ಮಹಾಮಾತ್ಯಶ್ರೀ :—ಏನೂ ಇಲ್ಲ, ಅಲ್ಲಿಯೇ ಇರು—ಸರಿ, ಪಂಡಿತರೆ ; ಈಗ ಹೇಳಿರಿ ; ಈ ಇಮ್ಮಡಿ ರಾಜ ಒಡೆಯರ ಹೆಣದ ಸಾಕ್ಷಿಯಾಗಿ, ನಿಮ್ಮ ಒಬ್ಬನೇ ಪುತ್ರನ ಸಾಕ್ಷಿಯಾಗಿ, ಅರುಹಂತನ ಸಾಕ್ಷಿಯಾಗಿ, ನೀವು ಇಂದೀಗ ಪುಟ್ಟಸ್ವಾಮಿಗೆ ಔಷಧವೆಂದು ವಿಷದ ಚೂರ್ಣ ವನ್ನು ಕೊಟ್ಟುದು ಉಂಟೇ ? ಇಲ್ಲವೇ ?

ಬೊಮ್ಮರಸ :—(ಸಿಡಿದೇಳುವನು.)

ಮಹಾಮಾತ್ಯಶ್ರೀ :—(ಕರ್ಕಶವಾಗಿ ನಕ್ಕು,) ಚೆಂದವ್ವೆ, ಪಂಡಿತರು ಮುದುಕ ರಾದರೂ—ಜೋಕೆ ! ....ಇನ್ನು, ಪಂಡಿತರೆ, ದಶದಿಕ್ಕುಗಳನ್ನು ನೋಡುವುದರಿಂದ ಆವ ಪ್ರಯೋಜನವೂ ಇಲ್ಲ. ನೀವು ಹಾಗೆ ಪ್ರತಿಜ್ಞೆ ಮಾಡದಿದ್ದರೆ, ಇಲ್ಲಿಂದ ಪಾರಾಗಿ ಉಳಿಯಲಾರಿರಿ.

ಬೊಮ್ಮರಸ :—(ಸಂದೇಹಿಸುತ್ತಿದ್ದು, ಕಡೆಗೆ ದೊಪ್ಪನೆ ಕುಕ್ಕರಿಸಿಕೊಂಡು, ಮಹಾರಾಜನ ತಣ್ಣಡಿಗಳನ್ನೆಟ್ಟಿ ಹಿಡಿದು, ಕಣ್ಮುಗಿದುಗೊಂಡು, ಕ್ಷೀಣ ಗದ್ಗದ ಸ್ವರದಿಂದ,) ಈ ಮೃತನಾದ ಮಹಾರಾಜನ ಪಾದದಾಣೆಯಿಂದ, ನನ್ನ....ನನ್ನ........ಮಗುವಿನ ಸಾಕ್ಷಿಯಾಗಿ, ನಾನು ಇಂದೀಗ ಕೊಟ್ಟುದು—ಉಂಟು.

ಚೆಂದವ್ವೆ
ರುದ್ರವ್ವೆ } :—(ಸನ್ತ್ರಸ್ತೆಯರಾಗಿ,) ಶಿವಶಿವಾ! ಅಯ್ಯೋ !

ಮಹಾಮಾತ್ಯಶ್ರೀ :—(ವಿದ್ಯುಲ್ಲತೆಯ ರಭಸದಿಂದವರತ್ತ ತಿರುಗಿ, ಕೆರಳ್ದ ಸಿಂಹಿ ಯಂತೆ,) ಸದ್ದು !.... .. ಆಯ್ತು ! ಈಯಿದು ವಿಕ್ರಮರಾಯರಿಗೆ ತಿಳಿದಿದೆಯೋ ?

ಬೊಮ್ಮರಸ :—ಅವರೇ ನನಗಿದನ್ನು ಸೂಚಿಸಿ ಹೇಳಿಕೊಟ್ಟವರು.

ಪ್ರವೇಶ ೫

[ಸ್ಥಾನ :—ತೆರಕಣಾಂಬಿ, ಶ್ರೀರಣಧೀರ ಕಂಠೀರವ ನರಸರಾಜ ಒಡೆಯನ ಗರುಡಿ.)
(ರಣಧೀರನು ಹಲವು ಮಂದಿ ಮಲ್ಲರೊಡನೆ ಸಾಧಕಮಾಡುತ್ತಿರುವನು.)

ಬಸವಮಲ್ಲಯ್ಯ :—(ಈಷತ್ಕಾಲದ ಬಳಿಕ, ಬಳಲಿ ಎದ್ದು ನಿಂತು, ಆಳೈಹೊಯ್ಯುತ್ತ, ಮತ್ತಿನವರು ಶ್ರಮಮಾಡುವುದನ್ನು ನೋಡುತ್ತಿದ್ದು,) ಸಾಕ್ಷಾತ್ ಭೀಮಸೇನನೇ ಬಂದರೂ, ದಿನದಿನವೂ ಹೀಗಾದರೆ, ರಕ್ತವನ್ನು ಕಾರುತ್ತ ಸತ್ತೊರಗುವುದೆ !

ಇತರರೆಲ್ಲ :—(ಏಳುವರು.)

ಸಕ್ಕ :—ನೀನೇ ಆ ಭೀಮನಪ್ಪೆ. ಬಸವಮಲ್ಲ !—ರಣಧೀರನೇತಕ್ಕಿನ್ನು ?

ಬಸವಮಲ್ಲಯ್ಯ :—(ಕೋಪದಿಂದ) ಸಕ್ಕ !—ಮೊನ್ನೆ ಠಾಯೆಯಲ್ಲಿ ಕತ್ತರಗೊಟ್ಟುರುಳಿಸಿದುದನ್ನು ಮರೆತುಬಿಟ್ಟೆಯೋ ?

ಸಕ್ಕ :—(ನಕ್ಕು,) ಇಲ್ಲ. ಅದಕ್ಕೆ ಪ್ರತಿಯಾಗಿ ನಾಳಿನ ರಾತ್ರಿಗೆ ಡೊಕ್ಕರದ ಪಟ್ಟಿನಿಂದ ನಾವಿಬ್ಬರೂ ಇಲ್ಲಿ ಕಾಳಗಮಾಡಬೇಕೆಂಬ ರಣಧೀರನ ನಿಬಂಧನೆಯನ್ನು ನೀನು ನೆನೆದುಕೊಳ್ಳುತ್ತಿರು.

ಬಸವಮಲ್ಲಯ್ಯ :—ರಣಧೀರ, ನಾಳಿನವರೆಗೆ ಈ ನನ್ನ ವಜ್ರಮುಷ್ಟಿಗಳ ತೀಕ್ಷ್ಣೆಯನ್ನು ಅಡಗಿಸಿಟ್ಟು ಸಹಿಸಲಾರೆನು ; ಆ ಹೋರಟೆಯು ಈಗಳೇ ಆಗಬಾರದೆ ?

ರಣಧೀರ :—(ನಸುಬೆಮರ್ದ ತನ್ನ ಎದೆ ಹಣೆಗಳಿಗೆ ಅಲ್ಲಿಯ ಮಟ್ಟಿಯನ್ನೆತ್ತಿ ಒತ್ತುತ್ತ, ಒತ್ತುತ್ತ, ಸಕ್ಕನತ್ತ ತಿರುಗಿ,) ನೀನೂ ಈಗಲೇ ಸಜ್ಜಾಗಿರುವಿಯೇನು ?

ಸಕ್ಕ :—ಈ ಹುಲುಗಾಳೆಗಕ್ಕಾಗಿ ನಾನು ಸಿದ್ಧನಾಗಿರಬೇಕೆ, ರಣಧೀರ ? ಇದು ಎಂದಾವಾಗಳಾದರೂ ನನಗೆ ಸಮ್ಮತವೇ.

ನಿರೀಶ :—ಪರಿಪೂರ್ಣವಾಗಿ ಕಳಿತು, ಕಳಚಿಬೀಳುತ್ತಿರುವ ತನಿವಣ್ಣುಗಳನ್ನು ಒಡನೆಯೇ ಸವಿಯದಿದ್ದರೆ, ಅವು ಹುಳಿಯೇರುವುವು.

ಬಸವಮಲ್ಲಯ್ಯ :—(ಕಿನಿಸಿ,) ನಿನ್ನನ್ನು ಮಾತನಾಡಿಸಿದವರಾರೆಲೆ, ನಗದ ನಿರೀಶ ?

ನಿರೀಶ :—ಈ ನಿಸ್ಸಾರವಾದ ಕಲಿಯುಗದಲ್ಲಿ ಈ ಇಬ್ಬರು ಭೀಮಂದಿರು ಪಟ್ಟು ಹಿಡಿದು ಪ್ರತ್ಯಕ್ಷವಾಗಿ ಹೆಣಗುವುದನ್ನು ನೋಡುವ ಪುಣ್ಯವು ಎಲ್ಲಿ ಸಡಿಲಿ ತಪ್ಪಿಸಿಕೊಂಡೋಡಿಹೋಗುವುದೋ, ಎಂದು ನನಗೆ ಹೆದರಿಕೆ.

ಎಲ್ಲರೂ :—(ನಗುವರು.)

ಬಸವಮಲ್ಲಯ್ಯ :—ನಗದ ನಿರೀಶನೆಂದು ನಿನಗೆ ಹೆಸರಿಟ್ಟವರು ಶುದ್ಧ ಮೂಢರು ; ನಮ್ಮನ್ನೆಲ್ಲ ಹೀಗೆ ನಗಿಸಿನಗಿಸಿ ನೋಯಿಸುವ ನಿನಗೆ ಆ ಬಿರುದು ಸಲ್ಲದು.

ನಿರೀಶ :—ಇತರರಿಂದ ನಗೆಯನ್ನು ಹಿಂಡುವುದೂ ಅಷ್ಟು ಸುಲಭವಲ್ಲ. ಗೆಳೆಯ ; ಹೆರವರನ್ನು ನಗಿಸಬೇಕಾದ ನಿರ್ಭಾಗ್ಯನು ಎಷ್ಟು ಮಟ್ಟಿನ ಕಷ್ಟಗಳನ್ನು ಹಿಂಸೆಗಳನ್ನು ಜಿತೇಂದ್ರಿಯತ್ವವನ್ನು ಸಂಪಾದಿಸಿ ಪ್ರಯೋಗಿಸಿ ಬಳಲಬೇಕೆಂಬುದನ್ನು ನೀನರಿಯೆ. ಇನ್ನು ರಣಧೀರ, ಈ ಭೀಮಸೇನರ ಬಾಹುಯುದ್ಧಕ್ಕೆ ಅಪ್ಪಣೆಯೆ ?

ರಣಧೀರ :—ಆಗಬಹುದು.

ಸಕ್ಕ, ಬಸವಮಲ್ಲಯ್ಯ :—(ಒಡನೆಯೇ ಮಟ್ಟಿಗೆ ನೆಗೆದು, ತೊಡೆಗಳನ್ನು ಚಪ್ಪರಿಸಿ ತೋಳ್ಳೊಯ್ದು, ದಂಡೆಯಿಕ್ಕಿ, ಹಾರಿಯೆದ್ದು, ಪರಸ್ಪರ ಕಯ್ಗೊಟ್ಟೆಳೆದಾಡಿ ಬಿನ್ನಣದಿಂದ ಮೆಯ್ಯೊಡ್ಡಿ ನಿಂತು, ಸಂಚರಿತು ಪೊಣರ್ಕೆಗಾರಂಭಿಸುವರು.)

(ಹೊರಗೆ) :—(ಬಾಗಿಲನ್ನು ತಟ್ಟಿದ ಶಬ್ದ,)

ನಿರೀಶ :—(ಎದ್ದು ಹೋಗಿ, ಕದವನ್ನು ತೆರೆಯುವನು.)

(ತುಂಗರಾಯನ ಪ್ರವೇಶ)

ನಿರೀಶ :—(ಆಗನ್ತುಕನನ್ನು ಪಡಿಯೆಡೆಯಲ್ಲಿ ತಡೆದು) ಆರು, ನೀನು ?

ತುಂಗರಾಯ :—ಶ್ರೀಮಂತ ವಿಕ್ರಮರಾಯರ ಪರಿವಾರದವನು ; ಶ್ರೀರಂಗ ಪಟ್ಟಣದಿಂದ ಬಂದಿರುವ ಅವಸರದ ವೇಗಾಯಿಲ.

ನಿರೀಶ :—(ಹಿಂತಿರುಗಿ ಬರುತ್ತ,) ಹೋ ! ಶ್ರೀರಂಗಪಟ್ಟಣದಿಂದ ಅವಸರದ ಓಲೆಕಾರ !—ಆರಲ್ಲಿ ? ಆ ಹೋರಾಟವನ್ನೀಗ ಸಾಕುಮಾಡಿರಿ.

ಹಲವುಮಂದಿ ಜಟ್ಟಿಗರು :—(ಪುಟ್ಟಿಯ ಕಳನೊಳಕ್ಕೆ ನುಗ್ಗಿ, ಕಾದುತ್ತಿರುವ ಇಬ್ಬರನ್ನೂ ಹಿಡಿದು ಹಿರಿದಗಲ್ಚಿ, ಬೇರೆಬೇರೆ ಕರೆದುತರುವರು.)

ನಿರೀಶ :—ಹೀಗೆ ಬಾ. ವೇಗಾಯ್ಲಮಹಾಶಯ, ನಿನ್ನ ಓಲೆಯು ಆರಿಗೆ ?

ತುಂಗರಾಯ :—(ಮುಂಬರಿಯುತ್ತ,) ಶ್ರೀ ರಣಧೀರ ಕಂಠೀರವ ನರಸರಾಜ ಒಡೆಯ ಮಹಾಸ್ವಾಮಿಯವರಿಗೆ.

ಜಟ್ಟಿಗರೆಲ್ಲ :—(ಆಶ್ಚರ್ಯದಿಂದ) ಮಹಾಸ್ವಾಮಿಯವರು !

ರಣಧೀರ :—ಅದನ್ನು ತೆಗೆದುಕೊಂಡು ಓದು, ನಿರೀಶ.

ತುಂಗರಾಯ :—(ರಣಧೀರನಿಗೆ ಮಹಾರಾಜನಿಗೆಂತಂತು ಮಣಿದು ವಂದಿಸಿ, ಅವನ ಮುಮ್ಮೊಗದಲ್ಲಿ ಮಂಡಿಸಿ, ಎರಡೂ ಕಯ್ಗಳಿಂದ ಓಲೆಯನ್ನೊಪ್ಪಿಸುವನು.)

ರಣಧೀರ :—(ಅದನ್ನೆತ್ತಿ ನಿರೀಶನ ಕಯ್ಗೀವನು.)

ನಿರೀಶ :—(ಮುದ್ರೆಯೊಡೆದು ಓದುವನು.)

ನಮ್ಮ ಕಂಠೀರವ ನರಸರಾಜನಿಗೆ—ಅದಾಗಿ :

ಶ್ರೀಮನ್ಮಹಿಶೂರ ರತ್ನಸಿಂಹಾಸನಾಧೀಶ್ವರ ಶ್ರೀ ಇಮ್ಮಡಿ ರಾಜ ಒಡೆಯರು ಸ್ವರ್ಗಸ್ಥರಾದರು ; ಆದುದರಿಂದ ನಿನ್ನನ್ನು ಪಟ್ಟಕ್ಕೆ ಆಯ್ದುದಾಯ್ತು. ಈ ಸೂಚನೆಯನ್ನು ಕಂಡೊಡನೆಯೇ ನೀನು ಸಕುಟುಂಬನಾಗಿ ಮಹಿಶೂರಿಗೆ ಹೊರಟುಬರಬೇಕು. ವಿಶೇಷ ವಿಷಯಗಳನ್ನು ಮುಖತಃ ತಿಳಿಯುವೆ:

ಇಂತಿ,

ದಳವಾಯಿ ವಿಕ್ರಮರಾಯ.

ರಣಧೀರ :—(ಗಂಭಿರನಾದದಿಂದ,) ಪುನಃ ಓದು !

ನಿರೀಶ :—(ಸಾವಧಾನವಾಗಿ ಮತ್ತೆ ವಾಚಿಸುವನು.)

ರಣಧೀರ :—(ಅವಾಙ್ಮುಖನಾಗಿದ್ದು, ಎದ್ದು,) ನಿನ್ನ ಹೆಸರೇನು ?

ತುಂಗರಾಯ :—ತುಂಗರಾಯ.

ರಣಧೀರ :—ತುಂಗರಾಯ, ಸ್ವರ್ಗಸ್ಥರಾದ ನಮ್ಮ ತಮ್ಮಾಜಿಯವರು.... ಅವರಿಗೇನಾಗಿದ್ದಿತು ?

ತುಂಗರಾಯ :—ನನಗೆ ತಿಳಿಯದು, ಮಹಾಸ್ವಾಮಿ.

ರಣಧೀರ :—ನಿನಗೆ ತಿಳಿಯದು !—ಅಕಸ್ಮಾತ್ ಮರಣವೆ ! ಅವರು ಸ್ವರ್ಗಸ್ಥರಾದ ವಿಷಯವನ್ನು ನಿನಗೆ ಹೇಳಿದವರಾರು ?

ತುಂಗರಾಯ :—(ಯೋಚಿಸಿ,) ಶ್ರೀಮನ್ತ ವಿಕ್ರಮರಾಯರು, ಮಹಾಸ್ವಾಮಿ.

ರಣಧೀರ :—ನೀನು ಸತ್ಯವನ್ನು ಹೇಳುತ್ತಿಲ್ಲ.

ತುಂಗರಾಯ :—ಮಹಾಸ್ವಾಮಿ.

ರಣಧೀರ :—ನಡೆದುದನ್ನು ನುಡಿಯುಲು ಯೋಚಿಸಿದೆಯೇಕೆ ?—ಶ್ರೀಮಂತ ವಿಕ್ರಮರಾಯರು ನಿನಗೀ ವಾರ್ತೆಯನ್ನು ವ್ಯಕ್ತಗೊಳಿಸಿದಾಗ, ಇದು ಪಟ್ಟಣಿಗರಿಗೆ ಪ್ರಚಾರವಾಗಿದ್ದಿತಷ್ಟೆ ?

ತುಂಗರಾಯ :—ಇಲ್ಲ, ಮಹಾಸ್ವಾಮಿ. ಶ್ರೀಮಂತರು ನನಗಿದನ್ನು ಸೂಚಿಸಿದಾಗ ಈ ವೃತ್ತಾನ್ತವು ಅರಮನೆಯವರಿಗೇ--ಅನೇಕರಿಗೆ ತಿಳಿದಿದ್ದಿರಲಾರದು;.... ....

ರಣಧೀರ :—ಹೇಳು.

ತುಂಗರಾಯ :—ಏಕೆಂದರೆ, ಈ ವಿಷಯವು ಮೊತ್ತಮೊದಲು ಶ್ರೀಮಂತರಿಗೆ ತಿಳಿದು, ಆವ್ರೊಡನೆಯೇ ಅವರು ನನ್ನನ್ನಿಲ್ಲಿಗೆ ಅಟ್ಟಿರಬೇಕು.

ರಣಧೀರ :—ಮಹಾರಾಜನನ್ನು ನೀನು ನೋಡಿದ್ದುದಾವಾಗ ?

ತುಂಗರಾಯ :—(ಸ್ಮರಿಸಿಕೊಂಡು,) ಆರು ದಿನಗಳ ಹಿಂದೆ.

ರಣಧೀರ :—ಎಲ್ಲಿ ?

ತುಂಗರಾಯ :—ವಿಜಯದಶಮಿಯ ಮೆರವಣಿಗೆಯ ಉತ್ಸವದ ಸಮಾರಂಭ ದಲ್ಲಿ, ಆನೆಯಮೇಲೆ, ಮಹಾಸ್ವಾಮಿ.

ರಣಧೀರ :—ಆಗಳವರಿಗೇನಾದರೂ ದೇಹಯಾಸವಾಗಿದ್ದಂತೆ ತೋರು ತ್ತಿದ್ದಿತೆ ?

ತುಂಗರಾಯ :—ನಾನು ನಿಶ್ಚಯವಾಗಿ ಹೇಳಲಾರೆನು. ಮಹಾಸ್ವಾಮಿ ; ಆಗ ನಾನು ಹಿಂದಣ ಮಹಾರಾಜ—ಮಹಾಸ್ವಾಮಿಯವರನ್ನು ಸಂದರ್ಶಿಸಿದುದು ಬಹದೂರದಿಂದ.

ರಣಧೀರ :—ಬಸವಮಲ್ಲಯ್ಯ, ಹೋಗಿ ಈ ಹರಿಕಾರನಿಗೆ ಬಿಡಾರವನ್ನು ತೋರಿ, ಇತರ ಅನುಕೂಲ್ಯಗಳನ್ನು ಅನುಗೊಳಿಸಿಕುಡು.

ಬಸವಮಲ್ಲಯ್ಯ :—ನಡೆಯಿರಿ, ತುಂಗರಾಯರೆ. (ಹೊರಟು, ಹಿಂದುರುಗಿ,) ರಣಧೀರ.... ...

ನಿರೀಶ :—ಮಹಾಸ್ವಾಮಿಯವರೆಂದು ಶ್ರುತಪಡಿಸು, ಬಸವಮಲ್ಲ.

ಬಸವಮಲ್ಲಯ್ಯ :—ನಮಗೂ !

ನಿರೀಶ :—ನಮಗೆಂದರೆ ! ನಮ್ಮಲ್ಲಿ ಆವನೇ ಆದರೂ, ಮಹೀಶೂರದೇಶ ವನ್ನು—ನಮ್ಮ ಮಾತೃಭೂಮಿಯನ್ನು ಆಳುವ ಶ್ರೀಮನ್ಮಹಾರಾಜ ರವರಿಗೆ ಪ್ರಥಮತಃ ಪ್ರಜೆಯು; ಆ ತರುವಾಯ ಒಡನಾಡಿ, ಗೆಳೆಯ, ಬೇಕಾದ ಸಲ್ಗೆಯವನು. ತಿಳಿಯಿತೆ ?

ಸಕಲರೂ :—(ರಣಧೀರನಿಗೆ ನೀಡುಂಗಯ್ಯಳಿಂದ ಬಾಗಿ ವಂದಿಸಿ,) ಮಹಾ ಸ್ವಾಮಿಯವರಿಗೇ ಜಯವಾಗಲಿ !

ರಣಧೀರ :—(ನಕ್ಕು,) ನಮಗಿನ್ನೂ ಪಟ್ಟಾಭಿಷೇಕವೇ ಆಗಿಲ್ಲವಲ್ಲ, ನಿರೀಶ.

ನಿರೀಶ :—ಆ ವಿಷಯವನ್ನು ಅನಂತರದಲ್ಲಿ ಬಿನ್ನಯ್ಸಿಕೊಳ್ವೆನು. ಮಹಾ ಸ್ವಾಮಿ, ಈಗ—(ತುಂಗರಾಯನನ್ನೂ ಬಸವಮಲ್ಲಯ್ಯನನ್ನೂ ನೋಡು ವನು.)

ಬಸವಮಲ್ಲಯ್ಯ
ತುಂಗರಾಯ } :—(ಹೋಗುವರು.)

ರಣಧೀರ :—(ಚಿಂತಾಕ್ರಾಂತನಾಗಿದ್ದು,) ನಿರೀಶ, ವಿಕ್ರಮರಾಯನ ಅರ್ಥವನ್ನು ನೀನು ಮನಗಂಡುದಾಯ್ತೆ ?

ನಿರೀಶ :—ಆಯ್ತು.

ರಣಧೀರ :—ರಾಜ್ಯವು ನೀನೂಹಿಸಿಕೊಂಡಿರುವಷ್ಟು ಸುಲಭಸಾಧ್ಯವಾಗಿರುವಂತೆ ತೋರುವುದಿಲ್ಲ.

ನಿರೀಶ :—ಕಟ್ಟೆದ ದಟ್ಟೆಚಲ್ಲಣದ ಉಟ್ಟ ಮಲ್ಲಪಳಿಯು ಈ ವೇಷದಿಂದ ಕೆಮ್ಮಣ್ಣುಮಟ್ಟೆಯಲ್ಲಿ ವೀರಾಸನದಲ್ಲಿ ಕುಳ್ಳಿರುತ್ತ, ಆ ಪಟ್ಟಿನ ಕದನವನ್ನು ಮಹಾಸ್ವಾಮಿಯವರು ಪರಾಂಬರಿಸುತ್ತಿದ್ದ ಸಮಯಕ್ಕೆ ಈ ವೃತ್ತಾಂತವು ತಿಳಿಯೆಬಂದುದರಿಂದ—ದುಷ್ಟನಿಗ್ರಹವು ವಿಶೇಷವಾಗಿ, ಮಹಾಸ್ವಾಮಿಯವರ ಆಳ್ಕೆಯಲ್ಲಿ ರಾಜ್ಯವು ನಿಷ್ಕಣ್ಟಕವಾಗುವುದೆಂದು ಸೂಚನೆ.

ರಣಧೀರ :—(ಮಂದಸ್ಮಿತವದನನಾಗಿ,) ರಾಜಧಾನಿಗೆ ಇಷ್ಟು ದೂರದಲ್ಲಿ ಹೀಗೆ ಇಷ್ಟುಬೇಗನೆ ಹೊಗಳುವ ಭಟ್ಟನೊಬ್ಬನು ಆವಿರ್ಭವಿಸಬಲ್ಲನೆಂಬುದು ನಮಗೆ ತಿಳಿದಿರಲಿಲ್ಲ.

ನಿರೀಶ :—ಮತ್ತೆ, ದುರುಭಿಸಂಧಿಯು ಧೂರ್ತದಳವಾಯಿಯೊಬ್ಬನ ಸೊಕ್ಕನ್ನಿಳಿಹಿ, ಮಹೀಶೂರರತ್ನಸಿಂಹಾಸನವನ್ನು ಸತ್ತ್ವತಃ ಸ್ವತಂತ್ರ ಮಾಡಲು, ಮಹಾಸ್ವಾಮಿಯವರಂತಹ ಸಾಹಸಾಂಕನ—ಶಕ್ತಿ ಪ್ರಯೋಗದಲ್ಲಿ ಕುಶಲಯೋಗಿಯ — ಆವಶ್ಯಕತೆಯುಂಟಾಗಿರುವುದೆಂಬುದು.

ರಣಧೀರ :—ಅದು ಸ್ವಲ್ಪ ನಿಜ ನಿರೀಶ; ಮಕ್ಕಳಾಗಿರುವ ಉತ್ತರಾಧಿಕಾರಿಗಳನ್ನು ಬಿಟ್ಟು ಸ್ವರ್ಗಸ್ಥರಾಗುವ ಪ್ರತಾಪಿರಾಜರ ರಾಜ್ಯಗಳು-ಅವಕ್ಕೆ ಅಡಸದ ಕಷ್ಟಕ್ಲೇಷಗಳಿಲ್ಲ.

ನಿರೀಶ :—ಹಾಗೆ ದುಃಖಕ್ಕೆ ಕೋಟಲೆಗಳಿಗೆ ಪಕ್ಕಾದ ಅಂತಹ ರಾಜ್ಯಗಳನ್ನು ಹಾಳಾಗದಂತೆ ಸಕಾಲದಲ್ಲಿ ಉದ್ಧರಿಸಿ ಸಲಹುವುದಕ್ಕೆ

ನಿಪುಣರಾದ ಸತ್ತ್ವಯುಕ್ತಪ್ರತಿಭಾಶಾಲಿಗಳನ್ನು ಸರ್ವಕರ್ತಾರನು ಸೃಷ್ಟಿಸದೆಯೂ ಇಲ್ಲ, ಮಹಾಸ್ವಾಮಿ.

ರಣಧೀರ :—(ಬಗೆಯುತ್ತಿದ್ದು) ನಿರೀಶ, ಆ ದಳವಾಯಿಯ ಲೇಖನವನ್ನು ಪುನಶ್ಚ ಓದು.

ನಿರೀಶ :—(ನಿಲ್ಲಿಸಿ ನಿಲ್ಲಿಸಿ, ಪರಿಸ್ಫುಟವಾಗಿ ಪಠಿಸುವನು.)

ರಣಧೀರ:—(ಬದ್ಧಭ್ರುಕುಟಿಯಾಗಿ,) ಬರೆದಿರುವುದು ವಂಶಕ್ಕೆ ಯಜಮಾನರಾಗಿರುವ ಅಪ್ಪಾಜಿಯವರಿಗಲ್ಲ ; ನನಗೆ !—ಏಕವಚನದಲ್ಲಿ !

ಮಲ್ಲಹನುಮ :—ವಿಕ್ರಮರಾಯರು ಮಹಾಸ್ವಾಮಿಯವರಿಗೆ ಅಣ್ಣಂದಿರಲ್ಲವೆ ?

ನಿರೀಶ :—ಭಂಗಾರದವರ ಮಗನು ಧರ್ಮಪತ್ನಿಯವರ ಮಕ್ಕಳಿಗೆ ಹೇಗೆಯೂ ಅಣ್ಣನಲ್ಲ. ಅಷ್ಟೇ ಅಲ್ಲದೆ, ಮಹಿಶೂರದೇಶದ ರತ್ನ ಸಿಂಹಾಸನಕ್ಕೇರುವ ಶ್ರೀಮನ್ನಾರಾಯಣಾಂಶರನ್ನು ಏಕವಚನದಲ್ಲಿ ಎಳೆದಾಡುವುದಕ್ಕಾರಿಗೂ ಅಧಿಕಾರವಿಲ್ಲ.

ರಣಧೀರ :—ನಮ್ಮನ್ನು ಪಟ್ಟಕ್ಕೆ "ಆಯ್ದುದಾಯ್ತು" ಎಂಬುದೂ ಅರ್ಥವತ್ತಾಗಿದೆ, ನಿರೀಶ.

ನಿರೀಶ :—ಅಹುದು, ಮಹಾಸ್ವಾಮಿ ; ಈವರಿನವರಿಬ್ಬರಂತೆ ಮುಂದಣ ಮಹಾರಾಜರೂ ತನ್ನ ಕಯ್ಯಾಟದ ಬೆರ್ಚು ಮಾತ್ರವಾಗಿರಬೇಕೆಂಬುದು ಅದರ ಭಾವ.

ರಣಧೀರ :—ವಿಕ್ರಮರಾಯ ! ನನ್ನನ್ನು ! ಪಟ್ಟಕ್ಕೆ ! ಆಯ್ದುದಾಯ್ತು! ಆಯ್ದನು !—ಆಯ್ದನೆ ?

ಸಕ್ಕ :—ಎಂಟೆದೆಯ ಕೆಚ್ಚಿನ ಖುಲ್ಲನವನು !

ನಿರೀಶ :—(ಜನಾಂತಿಕದಲ್ಲಿ,) ಸಕ್ಕ, ಇನ್ನಿಂದಿನಿಂದ ಮಹಾಸ್ವಾಮಿಯವರ ಸನ್ನಿಧಾನದಲ್ಲಿ ಅವರ ಅಪ್ಪಣೆಯಿಲ್ಲದೆ ಏನನ್ನೇ ಆದರೂ ಹೀಗೆ ಮಾತುಗುಟ್ಟಲಾಗದು.

ಸಕ್ಕ :—(ವ್ಯಗ್ರನಾಗುವನು.)

ರಣಧೀರ :—......... ......ನಿರೀಶ ; ಇದರೊಳಗೆಲ್ಲಾ ಏನೋ ಕೃತ್ರಿಮ ಸನ್ನಾಧನವಿರುವಂತಿದೆಯಲ್ಲವೆ ?

ನಿರೀಶ :—(ಪ್ರಕಾಶ,) ಮಹಾಸ್ವಾಮಿಯವರು ಶ್ರೀ ರಣಧೀರ ಕಣ್ಠೀರವ ನರಸರಾಜ ಒಡೆಯರೆಂಬುದನ್ನು ಮರೆಯದಿರಬೇಕು.

ರಣಧೀರ :— .... ಅದನ್ನಿತ್ತ ಕುಡು, ನಿರೀಶ ; ಅಪ್ಪಾಜಿಯವರಿಗೀ ವಿವರಗಳನ್ನು ಒಕ್ಕಣಿಸಿ, ಅವರ ಮನೋಗತವನ್ನೂ ಆಶೀರ್ವಾದವನ್ನೂ ಆಶ್ರಯಿಸುವೆವು. (ಆಪೋಲೆಯನ್ನು ಕಯ್ಗೊಂಡು, ಹೊರಡುವನು.)

ಸಮಸ್ತರೂ :—(ನಮಸ್ಕರಿಸುವರು.)

ರಣಧೀರ :—(ನಿಷ್ಕ್ರಮಿಸುವನು.)

ನಿರೀಶ :—(ಹಿಂದಿರುಗಿ ನಿಂತು,) ಸಹಯೋಗಿಗಳೆ ! ಇಂದುವರೆಗೆ ನಾವು ಆವನ ಸಹಪಾಠಿಗಳಾಗಿ ಒಡನಾಡಿಗಳಾಗಿ ನೇಹಿಗರೆನಿಸಿದ್ದೆವೋ, ಆತನು ಇನ್ನು ನಮಗೆ—ವಿಶೇಷತಃ ನಮಗೆ ನಮ್ಮನ್ನಾಳುವ ಮಹಾರಾಜ ಮಹಾಸ್ವಾಮಿಯವರೆಂಬುದನ್ನು ನಮ್ಮಲ್ಲಿ ಆರೂ ಮರೆಯಕೂಡದು. ಇಷ್ಟುಕಾಲವೂ ಆವಾತನಿಂದ ಪರಿಪೋಷಿತರಾಗಿ, ಆರ ನಿಷ್ಕಪಟವಾದ ಪವಿತ್ರ ಮೈತ್ರಿಗೆ ಭಾಜನರಾಗಿ, ಆವ ದೀವಸಿಗನ ಆಟಪಾಟ ಕೂಟಗಳಲ್ಲಿ ಕಲೆತು, ಆ ನಿಶ್ಚಿಂತಸ್ಥಿತಿಯ ಉತ್ಸವದ ಆನನ್ದದ ಅನ್ತಸ್ಸತ್ತ್ವದಿಂದ ಜೀವಿಸಿದ್ದೆವೋ, ಆ ಕಂಠೀರವನು ಈ ತೆರಕಣಾಂಬಿಯ ಪಂಜರದಿಂದ ತಪ್ಪಿಸಿಕೊಂಡು, ತನ್ನ ಸ್ವಭಾವಪ್ರಪಂಚವಾದ ರಾಜ್ಯದಾಡಳಿತಗಳಿಗೆ ನುಗ್ಗಿ ಅರಸುಗೆಯ್ಯು ಲೊಪ್ಪಿ ಬದುಕಿಕೊಂಡನು ; ಆದರೆ, ಮಿತ್ರರೇ, ಅಲ್ಲಿ ... .ಅರಮನೆಯೊಳಗೂ ಆತನಿಗೆ ಕಷ್ಟಗಳು, ಶತ್ರುತ್ವವು, ಕಣ್ಟಕಗಳು, ವಿಪತ್ತಿಗಳು ಹೊಂಚುತ್ತಿವೆ. ರಣಧೀರನಿಗೆ—ನಮ್ಮ ರಣಧೀರನಿಗೆ ಆವುದಪಾಯವಾದರೂ ನಿಳ್ಕಿಮುಟ್ಟದಂತು ಆವಾಗಳೂ

ಸಿದ್ಧತೆಯಿಂದ ಕಯ್ದುವೊಡ್ಡಿ ಕೊಂಕದಿರುವ ಧನ್ಯತೆಯು ಆತನ ಗರುಡಿಗೆ ಅಪಮಾನವನ್ನೊದವಿಸದ ನಮ್ಮೆಲ್ಲರ ಒಂದೇ ಕರ್ತವ್ಯ. ಬಸವಮಲ್ಲನನ್ನುಳಿದರೆ, ನಾವು ಇಪ್ಪತ್ತುನಾಲ್ಕು ಜನರಿರುವೆವು ; ಈ ನಮ್ಮ ಸಂಘವು ನಮ್ಮ ರಣಧೀರನಿಗೆ.......ಬಹಿರಾಡಂಬರಗಳ ನ್ನೊಲ್ಲದ ವಿಶ್ವಾಸದ ಮೆಯ್ಗಾವಲರಾಗಿರೋಣ. ನಿಮ್ಮ ಅಭಿಪ್ರಾಯವೇನು ?

ಎಲ್ಲರೂ :—(ಏಕಕಂಠರಾಗಿ,) ನಮ್ಮನಿಬರಿಗೂ ಅದು ಒಪ್ಪುಗೆ.

ನಿರೀಶ :—ನಾವೆಲ್ಲ ಒಂದೇ ಭಾಷೆಯ ಕಟ್ಟಾಳ್ಗಳಾಗಿರುವುದರಿಂದ ಶಪಥ ಮುಂತಾದುವು ಬೇಕಾಗಿಲ್ಲ. ಇನ್ನು, ನಮ್ಮೀದಳಕ್ಕೆ ದಳಪತಿ ಯೊಬ್ಬನು ಆವಶ್ಯಕ. ಅಂತಹ ಅಮಿತವಾದ ಅಧಿಕಾರಿಶಕ್ತಿಗಳ ನ್ನೊಬ್ಬನಿಗೊಪ್ಪಿಸಿ ನಾವು ಅವನಿಗೆ ಬಾಗುವುದಕ್ಕೆ ಮೊದಲು ವಿಚಾರಿಸಿ—

ಮಲ್ಲರೆಲ್ಲ :—ನೀನೇ ನಮ್ಮ ದಳಪತಿ !

ನಿರೀಶ :—ಪೂರ್ವಾಪರಗಳನ್ನಾಲೋಚಿಸದೆ ಹೀಗೆ—

ಸರ್ವರೂ :—ನೀನೇ ! ನೀನೇ !

ನಿರೀಶ :—(ಅವನತೋತ್ತಮಾಂಗನಾಗಿ,) ಅಪ್ಪಣೆ ; ನಿಮ್ಮೆಲ್ಲರ ವಿಶ್ವಾಸ ಪ್ರೇಮಗಳನ್ನು ಶಿರಸಾವಹಿಸಿದೆನು. (ಅನತಿಕಾಲಾನಂತರ,) ನೀವೀ ದಳದ ವಿಷಯವನ್ನೊಂದು ತಿಂಗಳವರೆಗೆ ಆರಿಗೂ ಹೇಳಲಾಗದು. ಮಹಾಸ್ವಾಮಿಯವರು ಎಷ್ಟೇ ಬಲಾತ್ಕರಿಸಿ, ಏನೆಂದೇ ಹೇಳ ಬಹುದಾದರೂ, ನಮ್ಮ ದಳದವನಾವನೂ ಅವರೊಡನೆ ಮಹಿಶೂರಪುರಕ್ಕೆ ಹೊರಡದಿರಿ ; ಅವರು ತೆರಕಣಾಂಬಿಯಿಂದ ತಳರ್ದ ಅಯ್ದುಗಳಿಗೆಗಳ ಪರ‍್ಯಂತ ನಮ್ಮಲ್ಲಿ ಒಬ್ಬನೂ ಕೋಟೆಯ ಹೊರ ಗಣ್ಗೆ ಅಲ್ಲಾಡಬಾರದು. ಆ ಬಳಿಕ, ಒಬ್ಬೊಬ್ಬನಾಗಿ—ಇಬ್ಬಿಬ್ಬ ರಾಗಿ ಸಂಶಯಕ್ಕಾಸ್ಪದವಾಗದಂತೆ ಗುಟ್ಟಾಗಿ ಹೊರಟು, ಮೈಸೂರ ದಾರಿಯಲ್ಲಿ ಇಲ್ಲಿಂದೆರಡು ಹರಿದಾರಿಗಳು ತೀರಿದ ತರುವಾಯ

ಬಲಕ್ಕಿರುವ ಮಾಂದೋಟಿನಲ್ಲಿ ಸೇರಿ ನೀವೆಲ್ಲರೂ ನಿಶ್ಶಬ್ದರಾಗಿರಬೇಕು. ಹೋಗಿ.

ಮಲ್ಲಹನುಮ :—ಅಲ್ಲಿಂದ ಮಹಿಶೂರಿಗೆ ಪಯಣವೇನು ?

ನಿರೀಶ :—ಆ ಮಾತು ಈಗಳೇಕೆ ?

ಮಲ್ಲಹನುಮ :—ಹಾಗಿದ್ದರೆ, ನಾವು ನಮ್ಮ ಬುತ್ತಿ ಬಟ್ಟೆ ಮುಂತಾದುವನ್ನು ಮರಿಸಿಕೊಂಡು, ಕತ್ತಿಕುದಿರೆಗಳನ್ನೊಳಗೊಂಡು, ಸನ್ನದ್ಧರಾಗಿರಬೇಕಾಗುವುದು.

ನಿರೀಶ :—(ಮಲ್ಲಹನುಮನ ಮುಯ್ಯಿನ ಮೇಗೆ ಕಯ್ಯಿಟ್ಟು,) ದಳಪತಿಯು ನಾನಲ್ಲವೆ, ಮಿತ್ರನೆ ?—ಆ ಗೊಡವೆಗಳು ನಿಮಗೇಕೆ ? ಹೋಗು.

ಎಲ್ಲರೂ :—(ಹೋಗುತಿರುವರು.)

ಸಕ್ಕ :—(ನಿರೀಶನ ನೆರೆಯಲ್ಲಿ ಎಡೆಯಾಡುತ್ತಿರುವನು.)

ನಿರೀಶ :—ಅದೇನು, ಸಕ್ಕ?

ಸಕ್ಕ :—ಒಂದೆರಡು ಸಂದೇಹಗಳಿದ್ದರೆ, ಕೇಳಬಹುದೆ ?

ನಿರೀಶ :—ಕೇಳು.

ಸಕ್ಕ :—ರಣಧೀರನು—

ನಿರೀಶ :—ಮಹಾಸ್ವಾಮಿಯವರು—

ಸಕ್ಕ :—ಅಹುದು, ಮಹಾಸ್ವಾಮಿಯವರು—ಬಸವಮಲ್ಲನನ್ನು ಆಗಳೇ ಕಳುಹಿಬಿಟ್ಟರೇಕೆ ? ಆತುರವಾಯಿನ ಇಲ್ಲಿಯ ಮಾತುಕತೆಗಳನ್ನವನು ಕಿವಿಗೇಳಬಾರದೆಂದೆ ?

ನಿರೀಶ :—ಸಕ್ಕ, ಅರ್ಥಮಾಡಿಕೊಳ್ಳವರು ಆಡಬಾರದು.

ಸಕ್ಕ :—...................ರಾಜಧಾನಿಯು ಶ್ರೀರಂಗಪಟ್ಟಣವಾಗಿರುವಾಗ ವಿಕ್ರಮರಾಯರು ಬರೆದಿರುವುದೂ,..................ಮಹಾಸ್ವಾಮಿಯವರು ಹೋಗುವುದೂ, ಮಹಿಶೂರಿಗೆ, ಅದೇನು ?

ನಿರೀಶ :—ಈಗ ರಾಜಧಾನಿಯು ಶ್ರೀರಂಗಪಟ್ಟಣವಾಗಿರುವುದಾದರೂ, ಮಹಿಶೂರದೇಶದ ಮಹಾರಾಜರಿಗೆ ಶಾಸ್ತ್ರೋಕ್ತವಾಗಿ ಪಟ್ಟಾಭಿಷೇಕವಾಗುವುದು ಮಹಿಶೂರಪುರದಲ್ಲಿ.

ಪ್ರವೇಶ ೬.

[ಸ್ಥಾನ :—ಶ್ರೀರಂಗಪಟ್ಟಣದ ಅರಮನೆ, ಅನ್ತಃಪುರ.]

(ರುದ್ರವ್ವೆಯು ಚವುರಿಯನ್ನು ಹಿಕ್ಕಿ ತಿದ್ದುತ್ತಿರುವಳು.)

(ಚೆಂದವ್ವೆಯ ಪ್ರವೇಶ.)

ಚೆಂದವ್ವೆ :—ಬುದ್ಧಿಯವರೆಲ್ಲಿ, ರುದ್ರವ್ವೆ !

ರುದ್ರವ್ವೆ :—ಸಜ್ಜೆಯ ಕೋಣೆಯೊಳಗೆ.

ಚೆಂದವ್ವೆ :—ನಿದ್ದೆಯೇನು ?

ರುದ್ರವ್ವೆ :—ಅಲ್ಲ, ಚಿತ್ರಕ ಚಾಮಪ್ಪನೂ ಇದ್ದಾನೆ.

ಚೆಂದವ್ವೆ :—ಚಿತ್ರಕ ಚಾಮಪ್ಪನೆಂದೆಯ !

ರುದ್ರವ್ವೆ :—ಅಹುದು. ಬುದ್ಧಿಯವರ ತೂಗುಮಂಚದ ಕಾಲತ್ತ ವಿಕ್ರಮ —ವಿಕ್ರಮರಾಯರ ಚಿತ್ತಾರವನ್ನು ಚಿತ್ರಿಸಬೇಕೆಂದು ಕಟ್ಟು ಮಾಡಿರುವರು.

ಚೆಂದವ್ವೆ :—ಹಾ ! ಹಾ !

ರುದ್ರವ್ವೆ :—ನಾನು ಏತಕ್ಕೆಂದು ಕೇಳಿದುದಕ್ಕೆ ಬುದ್ಧಿಯವರು ಅವನಾ ಪಿಶಾಚಮುಖವನ್ನು ಮರೆಯದೆ ನಿರಂತರವೂ ಜ್ಞಾಪಿಸಿಕೊಳ್ಳುತ್ತಿರುವುದಕ್ಕೆ—ಎಂದು ಹೇಳಿದರು ; ನನಗೆ ತಿಳಿಯಲಿಲ್ಲ.

ಚೆಂದವ್ವೆ :—...... ....ಏನು?

ರುದ್ರವ್ವೆ :—ನಮ್ಮ ಮಕ್ಕಳನ್ನು ಕೊಂದ ಮಹಾಪಾತಕನು ವಾಸವಾಗಿರುವ ಊರನ್ನೇ ತೊರೆದುಹೋಗಿ ಅವನನ್ನು ಮರೆತುಬಿಡದೆ, ಅವನ ಸುಟ್ಟ ಮುಖವನ್ನು ಆವಾಗಲೂ ನೋಡುತ್ತಿರುವುದೇಕೆ ?

ಚೆಂದವ್ವೆ :—(ಸುಯ್ದು,)...... ....ಬುದ್ಧಿಯವರು ಅತ್ತರೇನು ?

ರುದ್ರವ್ವೆ :—ಇಲ್ಲ.

ಚೆಂದವ್ವೆ :—ಕಣ್ಣೊರಸಿಕೊಳ್ಳಲಿಲ್ಲವೆ ?

ರುದ್ರವ್ವೆ :—ಇಲ್ಲ.

ಚೆಂದವ್ವೆ :—ಒಮ್ಮೆಯಾದರೂ ನಿಟ್ಟುಸಿರ್ಗರೆದರೆ ?

ರುದ್ರವ್ವೆ :—ಇಲ್ಲ.

ಚೆಂದವ್ವೆ :—ದೇವಾಲಯಕ್ಕೆ ಹೋಗಲಿಲ್ಲವೆ ?

ರುದ್ರವ್ವೆ :—ಇಲ್ಲ—ಅಂದಿನಿಂದ ಪ್ರತಿದಿವಸವೂ ಹೀಗೇಕೆ ಮತ್ತೆ ಮತ್ತೆ ಕೇಳುತ್ತಿರುವೆ, ಚೆಂದವ್ವೆ ? ನಿನಗೆ ಬೇಸರೇ ಆಗುವುದಿಲ್ಲವೆ ?

ಚೆಂದವ್ವೆ :—..........ಬುದ್ಧಿಯುವರ ಕಣ್ಣುಗಳಲ್ಲಿ ಒಂದೇ ಹನಿಯಾದರೂ ನಿರೂರಿದರೆ, ಅವರು ಉಳಿದುಕೊಳ್ಳರು.

ರುದ್ರವ್ವೆ :—(ಆಶ್ಚರ್ಯದಿಂದ,) ಅದೇನು ?

ಚೆಂದವ್ವೆ :—ಏನೂ ಇಲ್ಲ, ಸುಮ್ಮನಿರು ; ಬುದ್ಧಿಯುವರು ಬರುತ್ತಿದ್ದಾರೆ.

(ಮಹಾಮಾತೃಶ್ರೀ ತಿಮ್ಮಾಜಮ್ಮಣ್ಣಿಯ ಪ್ರವೇಶ.)

ಮಹಾಮಾತೃಶ್ರೀ :—ಏನೆ, ಚೆಂದವ್ವೆ ? ನೀನು ಹೋಗಿದ್ದ—ಅದು ಏನಾಯಿತು ?

ಚೆಂದವ್ವೆ :—ಹಣ್ಣು.

ಮಹಾಮಾತೃಶ್ರೀ :—(ಸನ್ತೋಷದಿಂದ,) ಎಂದು ಬಂದರು ?

ಚೆಂದವ್ವೆ :—ನಿನ್ನಿನ ಅಪರಾಹ್ಣಸಮಯದಲ್ಲಿ.

ಮಹಾಮಾತೃಶ್ರೀ :—ಒಬ್ಬರೇಯೆ ?

ಚೆಂದವ್ವೆ :—ಸಕುಟುಂಬರಾಗಿ.

ಮಹಾಮಾತೃಶ್ರೀ :—ಭಾವಾಜಿಯುವರೂ ಬಂದಿರುವರೆ ?

ಚೆಂದವ್ವೆ :—ಇಲ್ಲ.

ಮಹಾಮಾತೃಶ್ರೀ :—(ಚಿಂತಿಸಿ,) ಮಹಿಶೂರಿಗೆ ಬಂದೊಡನೆಯೇ ರಣಧೀರನು ಏನು ಮಾಡಿದನು ?

ಚೆಂದವ್ವೆ :—ತಮಗೋಸ್ಕರವಾಗಿ ಏರ್ಪಟ್ಟಿದ್ದ ಬೀಡಾರದ ಬಾಗಿಲಲ್ಲಿ ಕುದುರೆಯಿಂದ ಇಳಿದರು.

ಮಹಾಮಾತೃಶ್ರೀ :—ಬೀಡಾರವೆಂದರೆ, ಅರಮನೆಯಲ್ಲವೇನೆ ?

ಚೆಂದವ್ವೆ :—ನನಗೆ ತಿಳಿಯದು ; ಈ ವಿವರಗಳನ್ನು ಕಂಡು ನನಗೆ ಹೇಳಿದವರು ಇನ್ನೇನನ್ನೂ ಅರಿಯರು.

ಮಹಾಮಾತೃಶ್ರೀ :—ನಾಡಿದ್ದು ರಾತ್ರಿಗೆ ನಾವು ಮಹಿಶೂರಿಗೆ ಹೊರಡುವೆವು.

ರುದ್ರವ್ವೆ :—(ಬೆಚ್ಚಿ,) ಮಹಿಶೂರಿಗೆ !

ಮಹಾಮಾತೃಶ್ರೀ :—ಚೆಂದವ್ವೆ, ಇದು ಗೋಪ್ಯವಾಗಿ ನಡೆಯಬೇಕು.

ಚೆಂದವ್ವೆ :—ಅಪ್ಪಣೆ.

ಪ್ರವೇಶ ೭.

[ಸ್ಥಾನ :—ಮಹಿಶೂರಪುರ, ಒಂದು ಬೀದಿ.]

(ಜನರು ಪಂಗಡಪಂಗಡವಾಗಿ ನಿಂತು, ಗುಜುಗುಜಿಸುತಿರುವರು.)

ಒಬ್ಬನು :—ಆಹಾ ! ಸನ್ದೇಹವೇನದಕ್ಕೆ ? ಇಪ್ಪತ್ತು ವರುಷಗಳ ಹಿಂದೆ—ನಮ್ಮ ರಾಜಒಡೆಯರು ಆಳುತ್ತಿದ್ದ ಆಗ ಯಾವ ಗದ್ದೆಗೆ ನಾನು ಎರಡುವರೆ ಹಣವನ್ನು ಬೆಳೆಗೆಯ್ಪಿರಿಗೆಯಾಗಿ ಕೊಡುತ್ತಿದ್ದೆನೋ, ಅದಕ್ಕೇ ನಾನು ಈಗ ಉಣ್ಡೆಯಾಗಿ ಎರಡು ದುರ್ಗೀವರಹಗಳನ್ನು ತೆರುತ್ತಿದ್ದೇನೆ ; ಇದೂ ಕಾಲದ ಅದ್ಭುತಮಹಿಮೆಯೇ ಅಲ್ಲವೆ ?

ಎರಡನೆಯವನು :—ಅದು ನೊಂದವರ ನ್ಯಾಯವಾದ ಮಾತಯ್ಯ ; ಆದರೆ,.......

ಮೂರನೆಯವನು :—ಆಗ ನಮ್ಮ ಹೊಟ್ಟೆ ಬಟ್ಟೆಗಳನ್ನು ನೋಡಿ ಮರುಗುತ್ತಿದ್ದ ನಮ್ಮಪ್ಪ—ಮಹಾರಾಜರ ರಾಜ್ಯ ; ಈಗ ಎಷ್ಟು ನುಂಗಿದರೂ ಅಜೀರ್ಣವಾಗಲಾರದ ದಳವಾಯಿಗಳ ವೃಕೋದರ ಸಾಮ್ರಾಜ್ಯ.

ಎರಡನೆಯವನು :—ನಾನು ಅದನ್ನಲ್ಲವಯ್ಯ, ಹೇಳಿದ್ದು ; ನಮ್ಮ ಮುಂದಣ ಮಹಾರಾಜರು ತಮ್ಮ ಪಟ್ಟಾಭಿಷೇಕಕ್ಕೆಂದು ಇಲ್ಲಿಗೆ ಬಂದರಲ್ಲಯ್ಯಾ, ಅವರ ಪುರಪ್ರವೇಶೋತ್ಸವದ ವೈಭವವನ್ನು.

ನಾಲ್ಕನೆಯವ :—ಅದೇನು ?

(ನಿರೀಶ ಸಕ್ಕ ಮುಂತಾದ ನಾಲ್ಕಯ್ವರ ಪ್ರವೇಶ)

ಆಗತರು :—(ಬಂದು, ಆ ಪಂಗಡದ ಹಿಂದೆ ನಿಂತು, ಕಿವಿಗುಡುವರು.)

ಎರಡನೆಯವನು :—ಈ ನಮ್ಮ ಮಹಾರಾಜರು ಬರುತ್ತಿದ್ದಾರೆಂಬುದನ್ನು ಕೇಳಿದೊಡನೆ ದಳವಾಯಿಯ ಸೈನ್ಯವು ಹೋಗಿ, ಇದಿರ್ಗೊಂಡು ಕರೆದುತಂದಿತು. ಹೀಗೆ ಪಟ್ಟಾಭಿಷೇಕಕ್ಕೆ ಬರುವ ಮಹಾರಾಜರನ್ನು ಸ್ವಾಗತಮಾಡುವುದಕ್ಕೆ ಲಕ್ಷಣವಾಗಿ ಕಳಶ ಕನ್ನಡಿ ಫಲ ಪುಷ್ಪ ದೇವತಾಪ್ರಸಾದ ಮುಂತಾದುವುಗಳಿಂದೊಪ್ಪುವ ಸುವಾಸಿನಿಯರೂ, ವೈದಿಕಮಣ್ಡಲಿಯೂ, ಪಂಚಮಹಾವಾದ್ಯಗಳೂ, ಬಿರುದು

ಗಳೂ, ದಾಳದಮಾಣಗಳೂ, ವೇಶ್ಯಾಸ್ತ್ರೀಯರೂ, ಪಟ್ಟದ ಆನೆ ಕುದುರೆಗಳೂ, ಸತ್ತಿಗೆಸೂರೆಪಾನಗಳೂ ಹೋಗಿ, ಆರತಿ ಅಕ್ಷತೆ ನಡೆಯುವುದು ಹಾಗಿರಲಿ ; ಸದ್ದಿಲ್ಲದೆ ಸರ್ವಾಯುಧ ಸಜ್ಜಿತವಾದ ದೊಡ್ಡ ಸೈನ್ಯವೊಂದು ಕಾಣಿಸಿಕೊಂಡು, ಅವರನ್ನೂ ಅವರ ಅಂತಃಪುರದ ಅಂದಳಗಳನ್ನೂ ಸುತ್ತುವರಿದು, ಬಂದಿಗಳನ್ನೆಂಬಂತೆ ಅರಮನೆಗೆ ನಡೆಯಿಸಿಕೊಂಡು ಹೋದರು ! ವಿಕ್ರಮರಾಯನ ಇಬ್ಬರಾಳುಗಳು ಮಹಾರಾಜರ ಕುದುರೆಯ ಎರಡು ಪಕ್ಕಗಳಲ್ಲಿಯೂ ಕಡಿವಾಣದ ಒಂದೊಂದು ಬಾರನ್ನು ಹಿಡಿದುಕೊಂಡು, ತಾವೇ ಚಕ್ರವರ್ತಿಗಳೆಂಬಂತೆ ಉಬ್ಬಿ ಮೆರೆಯುತ್ತಿದ್ದದ್ದನ್ನು ನಾನೇ ಈ ಕಣ್ಣಾರೆ ನೋಡಿದೆನಯ್ಯ ! ಆಗ ನನಗೆ—

ಸಕ್ಕ :—(ಕ್ರೋಧದಿಂದ ಹಲ್ಮೊರೆದು,) ಕುನ್ನಿಗಳು !

ಪೌರರೆಲ್ಲ :—(ಸಕ್ಕನತ್ತ ತಿರುಗಿ, ಕುತೂಹಲದಿಂದ ನೋಡುತ್ತಿರುವರು.)

ನಿರೀಶ :—(ಜನಾಂತಿಕದಲ್ಲಿ,) ಸಕ್ಕ !— ಮಾತನಾಡಬೇಡ, ಜೋಕೆ ! (ಪ್ರಕಾಶ,) ಏನು, ಸ್ವಾಮಿ, ಆಗ ನಿಮ್ಮ ಮಹಾರಾಜರು ಬೆದರಿ ಬೆಂಡಾಗಿ ಬೆವರಿ ಬೆಳರಿ ಇಳಿದುಹೋದರಷ್ಟೆ ?

ಎರಡನೆಯವನು :—ಹಾಗೆಂದರೇನಯ್ಯ ? ಹುಚ್ಚರಂತೆ ಒದರಿಕೊಳ್ಳುವಿರಿ ! —ನೀವು ಯಾವ ಊರಿನವರಯ್ಯ ?

ನಿರೀಶ :—ನಮ್ಮ ಸ್ಥಳವು ತಿರುಮಕೂಡಲು ನರಸೀಪುರ, ಸ್ವಾಮಿ.

ಮೂರನೆಯವನು :—ಅಲ್ಲಿಯ ಕಾವೇರೀ ಕಪಿಲಾ ಸಂಗಮದಲ್ಲಿ ನೀವು ಅನುದಿನವೂ ಸ್ನಾನವನ್ನು ಮಾಡಿಮಾಡಿ ಮಿಾಯುವುದರಿಂದ ನಿಮ್ಮ ತಲೆಯೊಳಗಿದ್ದ ಬುದ್ಧಿಯನ್ನೆಲ್ಲಾ ಆ ಪ್ರವಾಹದಲ್ಲಿ ಕೊಚ್ಚಿಸಿ ಬಿಟ್ಟು ಬಂದಿರಬೇಕು.

ಮೊದಲನೆಯವನು :—ಪಾಪ ! ಹಳ್ಳಿಗಾಡಿನವರೆಂದೇ ತೋರುತ್ತಿದೆ.

ನಿರೀಶ :—ಹಾಗೆಂದುದರಿಂದ ಈ ಸುಸ್ವಾಗತದ ಉತ್ಸವವು ನಿಮ್ಮ ಮಹಾರಾಜರಿಗೆ ಹೇಗೆ ರುಚಿಸಿತೆಂಬುದನ್ನು ನೀವಾರಾದರೂ ಹೇಳಿದಂತಾಯ್ತೆ ?

ಒಬ್ಬ ಯುವಕಪೌರ :— ಈ ಧೂರ್ತನಿಗೆ ಒಳ್ಳೆಯದೊಂದೊದೆಯನ್ನು ಕೊಡಲೆ ?

ನಾಲ್ಕನೆಯವನು :—ಚಿಃ ! ಸುಮ್ಮನಿರು ; ಅವರು ಯಾರೋ, ಏನೋ?

ಎರಡನೆಯವನು :— ರುಚಿಸುವುದೇನಿರಯ್ಯ ? ಅಸಡ್ಡೆಯ ಅಲಕ್ಷ್ಯದ ಉಪೇಕ್ಷೆಯ ಉದಾಸೀನಭಾವದ ತಿರಸ್ಕಾರದ ಕಿರುನಗೆಯು ಆಗ ಅವರ ಮುಖಮಣ್ಡಲದಲ್ಲಿ ತಾಂಡವವಾಡುತ್ತಿದ್ದಿತು.

ನಿರೀಶ :—ಹೇಗೆಯೋ ಆದರೂ ತಾನು ಸಿಂಹಾಸನದ ಮೇಲೆ ಸ್ಥಾಪನವಡೆದರೆ, ಇನ್ನು ತನ್ನ ಹೊಟ್ಟೆಯು ಅನವರತವೂ ತೀವಿತುಂಬಿ ಬೀಗಿ ತೇಗನ್ನೇರಿಸುವ ಆ ನೆಮ್ಮಿಗೆಯ ಪದವಿಯು ಇಷ್ಟು ನಿರಾಯಾಸವಾಗಿ ದೊರೆಕೊಂಡುದೆಂಬ ಆನನ್ದವು ಆ ಮುಗುಳ್ನಗೆಯ ಅರ್ಥವೋ ?

ಪಟ್ಟಣಿಗರೆಲ್ಲ :—(ಕನಲ್ದು, ಮೊರೆಯುವರು.)

ಯುವಕಪೌರ :—ಏನೋ ? ನಮ್ಮ ಮಹಾರಾಜರನ್ನು ಹೇಡಿಯೆಂದು ತಿನಾಳಿಯೆಂದು ಬಯ್ಯುವೆ ! (ಮುಷ್ಟಿಯನ್ನೆತ್ತುವನು.)

ನಾಲ್ಕನೆಯವನು :—(ಯುವಕಪೌರನ ಕಯ್ಯನ್ನು ಹಿಡಿದೆಳುಹಿ, ತಡೆದು ನಿಲ್ಲಿಸಿಕೊಳ್ವನು.)

ನಿರೀಶ :—(ಅಲ್ಲಾಡದೆ, ಪ್ರಶಾನ್ತನಾಗಿಯೇ,) ಅಂತಾದರೆ, ನಿಮ್ಮ ಮಹಾರಾಜರು ವೀರನೂ ಅಹುದೇನು ?

ಸಕ್ಕ ಮುಂತಾದವರು :—(ಚಮತ್ಕೃತರಾಗುವರು.)

ಅಯ್ದನೆಯವನು :—ನಮ್ಮ ಮಹರಾಜರನ್ನು ಜರೆದು ಜಂಕಿಸಿ ಅಣಕವಾಡಿ ನಗುತ್ತಿರುವ ಇವನ ಬಾಯಲ್ಲಿ ದುಂಡುಮಲ್ಲಿಗೆಯ ಮೊಗ್ಗೆಗಳಂತಿರುವ ಮೂವತ್ತೆರಡು ಹಲ್ಲುಗಳನ್ನೂ ಆರೂ ಉದಿರಿಸಿಬಿಡರಲ್ಲ !

ಮೊದಲ ಆತನು :—ಏಳಿರೊ ! ಆಳಿಗೊಂದೊಂದು ಗುದ್ದನ್ನೇ ಕೊಟ್ಟು ಈ ದುಷ್ಟಜನ್ತುವನ್ನು ತೀರಿಸಿಯೇ ಬಿಡೋಣ.

ಸಕ್ಕ ಮುಂತಾದವರು :—(ನಿರೀಶನ ರಕ್ಷಣಕ್ಕೆ ಅನುವಾಗಿ ನಿಲ್ಲುವರು.)

ನಾಲ್ಕನೆಯವನು :—(ಏಕ್ಕಟಿಯಲ್ಲಿ,) ಇನ್ನು ಬೀದಿಗಲಹಕ್ಕೆ ಪ್ರಾರಂಭವಾಯ್ತು ; ಇದೆಲ್ಲಿಯ ಪ್ರಾರಬ್ಧ, ನನಗೇನು ಬೇಕು? (ಹೋಗುವನು.)

ಯುವಕಪೌರ :—ಬನ್ನಿರೋ ! (ನಿರೀಶನತ್ತ ನುಗ್ಗುವನು.)

ಎರಡನೆಯವನು :—(ತನ್ನವರನ್ನೆಲ್ಲ ಇದಿರಿಸಿ ಅಡ್ಡಯಿಸಿ,) ಅಯ್ಯ, ತಡೆಯಿರಿ ! ಹಳ್ಳಿಗಾಡವನೊಬ್ಬನು ಅರಿಯದೆ ಬಗುಳಿಕೊಂಡರೆ, ನಾವೆಲ್ಲಾ ಹೀಗೆ ಕಯ್ಮಾಡುವುದೇಸಿರಯ್ಯ ? ದುಡಕಬೇಡಿ.

ಸಕ್ಕ :—(ಕೆಳದರ್ುಪ,) ನಾವು ಹಳ್ಳಿಗಾಡಿನವರಲ್ಲ ಕಣಾ! ನಿನ್ನಂತಹ ......

ನಿರೀಶ :—(ಜನಾನ್ತಿಕದಲ್ಲಿ,) ಶ್ ಶ್ ಶ್ !—ಸಕ್ಕ ! ಇಲ್ಲಿ ನೀನಿನ್ನೊಂದೇ ಮಾತನ್ನಾಡಿದರೂ, ನಮ್ಮ ಗರುಡಿಯ ಮೇಲಣ ಆಣೆಯಿದೆ !

ಸಕ್ಕ :—(ಅಧೋಮುಖನಾಗುವನು.)

ಎರಡನೆಯವನು :—ತಡೆ ; ನಮ್ಮ ಮಹಾರಾಜರ ಪುರ್ಶ್ವೋತ್ತರ—ನೀವೇನನ್ನು ಬಲ್ಲಿರಯ್ಯ ?

ನಿರೀಶ :—(ಪ್ರಕಾಶ,) ಅವರ ಅಣ್ಮಿನ ಶೌರ್ಯ ಪ್ರತಿಷ್ಠೆಗಳನ್ನೆಲ್ಲಾ ನೀವು ಇಂದೀವರಿಗೆ ಹೊಗಳಿ ಹಾಡಿದರಲ್ಲ !

ಎರಡನೆಯವನು :—ಕೇಳಯ್ಯ ; ನೀನು ಅದೇ ಸ್ವರದಲ್ಲಿ ಹೀಗೆಯೇ ಗಳಹುತಿದ್ದರೆ, ಇಲ್ಲಿಂದ ಸತ್ಯವಾಗಿ ಬದುಕಿಹೋಗಲಾರೆ.

ನಿರೀಶ :—ಎಂದರೆ, ನಿಮ್ಮ ಮಹಾರಾಜರು ಹಿಂದೆಂದೋ ಶೂರರಾಗಿದ್ದರೇನು ?

ಆರನೆಯವನು :—(ಆಶ್ಚರ್ಯದಿಂದ,) ಎಂತಹ ಜಡಮೂಢತೆ ! (ನಿರೀಶನನ್ನುದ್ದೇಶಿಸಿ,) ಹಾಗಾದರೆ, ನಮ್ಮ ಮಹಾರಾಜರ ವಿಷಯವು ನಿನಗೆ ಏನೇನೂ ತಿಳಿಯದು ?

ನಿರೀಶ :—ಇಲ್ಲ. ಹೇಳಿ, ಸ್ವಲ್ಪ ಕಲ್ತುಕೊಳ್ವೆನು.

ಆರನೆಯವನು :—ನಮ್ಮ ಮಹಾರಾಜರಿಗೆ “ರಣಧೀರ” ಎಂಬ ವ್ಯಕ್ತವಾದ ಬಿರುದಿದೆ !

ನಿರೀಶ :—ಬರಿಯ ಬಿರುದೆ ?

ಯುವಕಪೌರ :—(ಕುಪಿತನಾಗಿ,) ಹೇಳುವುದನ್ನು ಕೊನೆಯವರೆಗೆ ಕೇಳಿ, ಅನಂತರ ಮಾತನಾಡು.

ಮೂರನೆಯವನು :—ತಿರುಚನಾಪಳ್ಳಿಯ ಆ ಜಗಜಟ್ಟಿಯನ್ನು ಗೆದ್ದು ಕೊಂದುಬಂದ ನಮ್ಮ ಮಹಾರಾಜರ ತೋಳಬಲ್ಮೆಯನ್ನು ಈ ಪ್ರಾಣಿಯ ನೆತ್ತಿಗೇರುವಂತೆ ತಿಳಿಯಹೇಳು, ಮಾವ.

ಆರನೆಯವನು :—ನಾನೂ ಅದನ್ನೇ ಹೇಳುತ್ತಿದ್ದೆನು ; ನೀವಾರೂ ಗಲಭೆ ಮಾಡಬೇಡಿ. (ನಿರೀಶನತ್ತ ತಿರುಗಿ,) ಕೇಳಪ್ಪ; ನಮ್ಮ ಮಹಾರಾಜರು ಇನ್ನೂ ಹುಡುಗರಾಗಿದ್ದಾಗ ತೆರಕಣಾಂಬಿಯಲ್ಲಿದ್ದರು.

ನಿರೀಶ :—ಇರಬಹುದು.

ಯುವಕಪೌರ :—(ನಕ್ಕು,) ತೆರಕಣಾಂಬಿಯೆಂ ವರೇನೆಂಬುದನ್ನು ವಿವರಿಸಿ ಹೇಳಬೇಕಂತೆ !

ಆರನೆಯವನು :—ಕಾಶಿ ರಾಮೇಶ್ವರ ಮುಂತಾದ ಪುಣ್ಯಸ್ಥಳಗಳಿಗೆ ಯಾತ್ರಾರ್ಥಿಯಾಗಿ ಹೋಗಿದ್ದ ಬ್ರಾಹ್ಮಣನೊಬ್ಬನು ಆ ತೆರಕಣಾಂಬಿಯೆಂಬ ಊರಿಗೆ ಬಂದನು. ಯಾತ್ರಿಕರು ಹೇಳುವ ಕತೆಗಳನ್ನು ಮೆಚ್ಚಿ ಕೇಳುವುದಕ್ಕೆ ತರುಣರಿಗೆ ಬಹಳ ಆಶೆಯಷ್ಟೆ. ಆಗ ಚಿಕ್ಕವರಾಗಿದ್ದ ನಮ್ಮ ಮಹಾರಾಜರು ಆ ಯಾತ್ರಿಕ ಬ್ರಾಹ್ಮಣನು ಹೇಳುತ್ತಿದ್ದ ಕಥೆಗಳನ್ನೆಲ್ಲ ಅತ್ಯಾದರದಿಂದ ಉತ್ಸಾಹದಿಂದ ಕೇಳುತ್ತಿದ್ದರು.

ಎರಡನೆಯವನು :—(ಜನಾನ್ತಿಕದಲ್ಲಿ ನಿರೀಶನನ್ನು ತೋರುತ್ತ,) ನೋಡಿರಯ್ಯ, ಅವನ ಮುಖವು ಹೇಗೆ ಕಳೆಗೆಡುತ್ತಿದೆಯೆಂಬುದನ್ನು ; ನಮ್ಮ ಮಹಾರಾಜರ ಪರಾಕ್ರಮವೆಂದರೆ, ಅಂತಹುದು !

ಪೌರರು :—ಅಹುದು, ಅಹುದು.

ಆರನೆಯವನು :—ಆ ಬ್ರಾಹ್ಮಣನ ಕಥೆಗಳಲ್ಲಿ ಒಂದು ನಮ್ಮ ಮಹಾರಾಜರ ಉದ್ದಾಮಶೂರ ಹೃದಯದಲ್ಲಿ ನಾಟಿಕೊಂಡಿತು.

ಏಳನೆಯವನು :—ಆ ತಿರುಚನಾಪಳ್ಳಿಯ ಜಟ್ಟಿಯ ವಿಷಯ !

ಮೊದಲನೆಯವನು :—ಅದೇಯೆ.

ಆರನೆಯವನು :—ತಿರುಚನಾಪಳ್ಳಿಯ ಪಾಳೆಯಗಾರನ ಆಸ್ಥಾನದಲ್ಲಿ ಇದ್ದ ಒಬ್ಬ ಜಟ್ಟಿಯನ್ನು ಕದನಮಾಡಿ ಗೆಲ್ಲುವವರು ಈ ಪ್ರಪಂಚದಲ್ಲಿ ಯಾರೂ ಇರಲಿಲ್ಲವೆಂದೂ; ಹಾಗೆಂದುಕೊಂಡು, ಆ ಜಟ್ಟಿಗನು ಕೊಬ್ಬಿ ಉಬ್ಬಿ, ಉಕ್ಕಿ ಸೊಕ್ಕಿ, ತನ್ನ ದಟ್ಟಿಚಲ್ಲಣಗಳನ್ನು ಆ ತಿರುಚನಾಪಳ್ಳಿಯ ಹೊರಗೋಟೆಯ ನಾಲ್ಕು ಬಾಗಿಲುಗಳಿಗೂ ಮೇಲೆ ತೋರಣಗಳಂತೆ ಕಟ್ಟಿಸಿ, ಅದರ ಕೆಳಗೆ....ಎಂದರೆ, ತನ್ನ ಕಾಲ ಕೆಳಗೆ—ಎಲ್ಲ ಜನರೂ ನಡೆದಾಡಬೇಕೆಂದು ಆ ಪಾಳೆಯಗಾರನ ನ್ನೊಪ್ಪಿಸಿ................

ಎರಡನೆಯವನು :—(ಪ್ರಕಾಶ) ಹಾಗಲ್ಲವಯ್ಯ; ಅವನ ಆ ದಟ್ಟಿಚಲ್ಲಣಗಳನ್ನು ಕಟ್ಟಿಸಿದುದು ಮೂರೇ ಬಾಗಿಲುಗಳಿಗೆ; ಬ್ರಾಹ್ಮಣರೂ ಜಂಗಮರೂ ಮಾತ್ರವೇ ಸಂಚಾರಮಾಡಬೇಕಾಗಿದ್ದ ಒಂದು ದಿಡ್ಡಿಯ ಮೇಲೆ ಹಾಕಿಸಿರಲಿಲ್ಲವಂತೆ.

ಯುವಕಪೌರ :—ನಮ್ಮ ಅಜ್ಜನು ಹೇಳಿದ್ದರಲ್ಲಿ, ಆ ಜಟ್ಟಿಯು ತಿರುಚನಾಪಳ್ಳಿಯ ಕೋಟೆಯ ಮೈಸೂರತ್ತಣ ಶ್ರೀದ್ವಾರವೊಂದಕ್ಕೇ ತನ್ನ ಚಲ್ಲಣವನ್ನು ಕಟ್ಟಿಸಿದನಂತೆ; (ಹಲ್ಮೊರೆಯುತ್ತ,) ಆ ಧೂರ್ತ!

ಆರನೆಯವನು :—ಈ ವೃತ್ತಾಂತವನ್ನು ಕೇಳಿದೊಡನೆ ಆಗ ಬಹಳ ಚಿಕ್ಕವರಾಗಿದ್ದ ಈ ಮಹಾಜರಿಗೆ ಕೋಪದ ಈರ್ಷ್ಯೆಯಿಂದ—ಅವರ ರಕ್ತವೆಲ್ಲಾ ಕುತಕುತನೆ ಕುದಿಯತೊಡಗಿತು.

ನಿರೀಶ :—ಪಾಪ! ಅವರ ಆ ಜ್ವರಕ್ಕೆ ಔಷಧವು ಲಭಿಸಿತಷ್ಟೆ?

ಯುವಕಪೌರ :—ನನ್ನ ತಲೆಬುರುಡೆಯು ಈ ನನ್ನ ಮುಷ್ಟಿಗಿಂತ ಗಟ್ಟಿಯಾಗಿರುವುದಷ್ಟೆ?

ಮೊದಲನೆಯವನು :—ಆವಾಗಳೂ ಹೀಗೆಯೇ ಗಲಭೆ!...........ತಿರುಮಕೂಡಲು—ನರಸೀಪುರದ ಮನುಷ್ಯವಿಶೇಷವೇ! ಇನ್ನೊಂದೇ ಮಾತನ್ನೂ ಆಡದೆ, ನಮ್ಮ ಮಹಾರಾಜರ ಆ ಸಾಮರ್ಥ್ಯವನ್ನು ಕಡೆಗೂ ಕೇಳದಿದ್ದರೆ, ನೀನುಳಿಯುವಂತಿಲ್ಲ.

ನಿರೀಶ :—ಆಗಬಹುದು.

ಆರನೆಯವನು :—ತರುವಾಯ ನಮ್ಮ ತರುಣ ಮಹಾರಾಜರು ಆ ಯಾತ್ರಿಕ ಬ್ರಾಹ್ಮಣನನ್ನೊಡಗೊಂಡು, ಅವರ ತಂದೆಗೂ ಹೇಳದೆ —ಗುಟ್ಟಾಗಿ—ತಿರುಚನಾಪಳ್ಳಿಗೆ ಹೋಗಿ, ಆವೂರ ಕೋಟೆಯು ಮಹಿಶೂರಿನತ್ತಣ ಬಾಗಿಲ ಮೇಲಿದ್ದ ಆ ಮಲ್ಲನ ದಟ್ಟಿಚಲ್ಲಣ ಗಳನ್ನು ತಮ್ಮ ಕೀಳಾಳ ಕಯ್ಯ ಕೋಲಿಂದ ತೆಗೆಯಿಸಿ ಬೀಸಾಡಿಸಿ, ಆ ದಿಡ್ಡಿಯಿಂದಲೇ ಒಳಗೆಹೋದರು. ಈ ಮೂದಲೆಯಿಂದ ಕುಪಿತ ನಾದ ಆ ಜಟ್ಟಿಯು ಅಲ್ಲಿಯ ಪಾಳೆಯಗಾರನ ಆಜ್ಞೆಯಂತೆ.... ತಾವಾರೆಂಬುದನ್ನು ಹೇಳದ.... ನಮ್ಮ ಮಹಾರಾಜರೊಡನೆ ಆ ಊರ ಮಲ್ಲಕಳದಲ್ಲಿ ಹೋರಿ ಹೊಯ್ದಾಡಿ ಹೆಣಗಿ ಸೋತು ಸತ್ತನು.

ಎರಡನೆಯವನು :—ಕೇಳಯ್ಯ, ಹೇಗೆಂಬುದನ್ನು ; ನಮ್ಮ ಮಹಾರಾಜರಿಗೆ "ವಿಜಯನಾರಸಿಂಹ" ಎಂಬ ಅದ್ಭುತವಾದದ್ದೊಂದು ಕತ್ತಿಯಿದೆ. ಅದನ್ನು ಉಗ್ರನರಸಿಂಹದೇವರು ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ, ನಮ್ಮ ಮಹಾರಾಜರಿಗೆ ಕೊಟ್ಟದ್ದು. ಥಳಥಳಿಸುತ್ತ ನಮ್ಮ ಮಹಾರಾಜರು ಬಯಸಿದ ಹಾಗೆ ಎಳೆಯ ಬಳ್ಳಿಯಂತೆ ಬಳುಕುವ ಆ ವಿಜಯನಾರ ಸಿಂಹನೆಂಬ ಕತ್ತಿಗೆ ಎರಡು ಅಲುಗುಗಳಿರುವುವು. ಈಗ ಹೇಳಯ್ಯ ; ಎಂತಹ ಕಲ್ಲನ್ನಾದರೂ ಎರಡಾಗಿ ತುಂಡಿಸಿಯೂ ಮುಕ್ಕಾಗದ ಅಂತಹ ತೀಕ್ಷ್ಣವಾದ ಎರಡು ಅಲುಗುಗಳನ್ನುಳ್ಳ ಒಂದು ದೊಡ್ಡ ಕತ್ತಿಯನ್ನು ಹೆಂಗುಸರು ಒಡ್ಯಾಣವನ್ನು ತೊಟ್ಟು ಬಿಗಿಯುವಂತೆ ನಡುವಿನಲ್ಲಿ ಧರಿಸಿಕೊಳ್ಳುವ ಧೈರ್ಯವು ನಿನಗುಂಟೇನಯ್ಯ ?........ ಇಲ್ಲವೆನ್ನು. ನಮ್ಮ ಮಹಾರಾಜರು ತಮ್ಮ ವಿಜಯನಾರಸಿಂಹನನ್ನು ಹಾಗೆ ನಡುವ ಪಟ್ಟಿಯಂತೆ ಕಟ್ಟಿಕೊಂಡಿರುವುದು ಅವರ ದಿನ ಚರ್ಯೆಯ ಒಂದಂಗವಾಗಿ ಹೋಗಿದೆ. ಅದಕ್ಕೆ—ಎಂದರೆ, ಆ ವಿಜಯನಾರಸಿಂಹನೆಂಬ ಕತ್ತಿಗೆ—ಕಾಂಚೀಪಟ್ಟಿಕೆಯ ಆಕಾರ ದಲ್ಲಿರುವ ಉಕ್ಕಿನ ಒರೆಯೇನೋ ಇದೆ ; ಆದರೆ ನಮ್ಮ ರಣಧೀರ ಮಹಾರಾಜರು ಆ ಒರೆಯನ್ನು ಹೆಚ್ಚಾಗಿ ಉಪಯೋಗಿಸುವುದಿಲ್ಲ. ಅರ್ಥವಾಯ್ತೇನಯ್ಯ ? ನಮ್ಮ ಮಹಾರಾಜರ ಹೊರಗಣ ಸೌಮ್ಯ

Vijaya ... Library
Bangalore ...
6998

ವೇಷವನ್ನು ನೋಡಿ, ಅವರು ನಿರಾಯುಧರೆಂದೋ ನಿಸ್ಸಹಾಯಕರೆಂದೋ ಕಲ್ಪಿಸಿಕೊಂಡು, ನೀನವರನ್ನು ಕೆಣಕುವಷ್ಟೇನಾದರೂ ಹುಚ್ಚುಸಾದೆಯಾದರೆ, ರೆಪ್ಪೆಮುಚ್ಚಿ ತೆರೆಯುವುದರೊಳಗಾಗಿ ವಿಜಯನಾರಸಿಂಹನು ಪ್ರತ್ಯಕ್ಷನಾಗಿ, ಬಳ್ಳಿಮಿಂಚಿನಂತೆ ಝಳಪುಗೊಂಡು, ತನ್ನ ಸುಳಿವಿನ ಗಾಳಿಯಿಂದ ನಿನ್ನ ಮೂಗನ್ನು ಕತ್ತರಿಸಿ, ಮೂರ್ಛೆ ಕೆಡಹಿಬಿಡುವುದು. (ಜ್ಞಾಪಿಸಿಕೊಂಡು,) ಹಾ! ಆ ತಿರುಚನಾಪಳ್ಳಿಯ ಜಟ್ಟಿಯೊಡನೆ ಕಾಳಗಮಾಡುತ್ತಿದ್ದಾಗ, ತಮ್ಮ ಬಟ್ಟೆಯೊಳಗೆ ನಡುಪಟ್ಟಿಯಂತೆ ಮೊದಲೇ ತಕ್ಕಂತೆ ಕಟ್ಟಿ ಸಿದ್ಧಮಾಡಿರಿಸಿಕೊಂಡಿದ್ದ ವಿಜಯನಾರಸಿಂಹನಿಂದ—ತಮ್ಮ ಸಾಧಕಹಸ್ತಲಾಘವ ಚಮತ್ಕಾರದಿಂದ ಆ ದುಷ್ಟಜಟ್ಟಿಯ ಕೊರಲನ್ನರಿದುಬಿಟ್ಟರು. ಆಗ ನಡೆದದ್ದೊಂದು ಅದ್ಭುತವನ್ನು ಕೇಳಯ್ಯ. ನಮ್ಮ ಮಹಾರಾಜರು ತಮ್ಮ ಬಿನ್ನಣದ ಕಯ್ಚಳಕದ ಕುಶಲತೆಯಿಂದ ಆ ಜಟ್ಟಿಗನ ಕತ್ತನ್ನು ಒಂದು ಕಡೆಯಿಂದ ಮತ್ತೊಂದು ತುದಿಗೆ ಸಂಪೂರ್ಣವಾಗಿ ಕತ್ತರಿಸಿಬಿಟ್ಟದ್ದರೂ, ಆ ಜಟ್ಟಿಯ ಕೊರಲಿಂದ ಒಂದೇ ಹನಿಯ ರಕ್ತವೂ ಹೊರಡದೆ, ಅವನ ರುಣ್ಡವು ಕಳಚಿಕೊಂಡು ಕೆಳಕ್ಕೆ ಬೀಳದೆ ಅಲ್ಲಾಡದೆ ಅವನ ಕತ್ತಿನಮೇಲೆ ನಿಂತಿದ್ದಿತು ; ಎಂದರೆ, ನಮ್ಮ ಮಹಾರಾಜರು ಸಾಧಿಸಿದ್ದ ಈ ಕಾರ್ಯಭಾಗವು ನೋಡುತ್ತಿದ್ದ ಜನರಾರಿಗೂ........ಆ ಪಾಳೆಯಗಾರನಿಗೂ ತಿಳಿಯಲೇ ಇಲ್ಲ. ನಮ್ಮ ಮಹಾರಾಜರ ಸಾಮರ್ಥ್ಯವೆಂದರೆ, ಅದು! ತಿಳಿಯಿತೇನಯ್ಯ?........ ಹೀಗಾದ ಬಳಿಕ, ಆ ಜಟ್ಟಿಯ ಹೆಣವು ಅಲ್ಲಾಡದೆ ಕಂಭದ ಹಾಗೆ ನಿಂತಿದ್ದುದನ್ನೂ, ನಮ್ಮ ಮಹಾರಾಜರು ಆ ಮಲ್ಲರಂಗದ ನಡುವೆ ಅವಸರವಿಲ್ಲದವರಂತೆ ವಿಶ್ರಮಿಸಿಕೊಳ್ಳುತ್ತಿದ್ದ ಸಮಾಚಾರವನ್ನೂ ನೋಡಿ, ಆ ತಿರುಚನಾಪಳ್ಳಿಯ ಪಾಳೆಯಗಾರನು ಅದೇಕೆಂದು ಕೂಗಿ ಕೇಳಿದನು. ಆಗ ನಮ್ಮ ರಣಧೀರ ಮಹಾರಾಜರು ನಸುನಕ್ಕು ಒಂದು ಬೆತ್ತವನ್ನು ತರಿಸಿಕೊಂಡು, ಅದರಿಂದ, ಆ ಜಟ್ಟಿಯ ಹೆಣದ ಮುಖದ ಮೇಲೆ ಹೀಗೆ ತಿವಿದರು. ಆಕ್ಷಣವೇ ಆ ಶವದ ರುಂಡವು ಕೆಳಕ್ಕೆ ಬಿದ್ದುರುಳಿ ಕುಣಿದಾಡಿತು.

ಮೂರನೆಯವನು :—ನಮ್ಮ ರಣಧೀರ ಮಹಾರಾಜರಿಗೆ ಅಂತಹ ಮೋಸದ ವಿದ್ಯೆಯು ಯಾವ ಕನಸಿನಲ್ಲಿಯಾದರೂ ಬೇಕಾಗಿಲ್ಲ, ಅವರು ಪಟ್ಟು ಗಳನ್ನರಿತು ಹಿಡಿದು, ಧರ್ಮಕ್ಕೆ ಹಾನಿಯಾಗದಂತೆ ಕಾಳಗ ಮಾಡಿಯೇ ಆ ವೀರಮಲ್ಲನೆಂಬ ದಿಟ್ಟಜಟ್ಟಿಗನನ್ನು ಗೆದ್ದು ಕೊಂದರು.

ಆರನೆಯವನು :—ಹೇಗೇ ಆದರೂ, ನಮ್ಮ ಈ ಮಹಾರಾಜರು ಆ ಜಟ್ಟಿ ಯನ್ನು ಸಂಹಾರ ಮಾಡಿದರು. ಆಗ ತಿರುಚನಾಪಳ್ಳಿಯ ಪಾಳೆಯ ಗಾರನು ಗೆದ್ದವರು ನಮ್ಮ ಮಹಾರಾಜರೆಂಬುದನ್ನರಿಯದೆ, ಇಂತಹ ಅಮಾನುಷವಾದ ಭುಜಶಕ್ತಿ ಪರಾಕ್ರಮಗಳನ್ನುಳ್ಳ ಮಲ್ಲನಿಗೆ ಉಚಿತವಾಗಿ ಸನ್ಮಾನಮಾಡಿ ತನ್ನ ಆಸ್ಥಾನದಲ್ಲಿ ಇರಿಸಿಕೊಳ್ಳ ಬೇಕೆಂದಿದ್ದನು ; ಆದರೆ, ನಮ್ಮ ಮಹಾರಾಜರು ಅದಕ್ಕೆ ಸಿಕ್ಕದೆ, ...“ಮಹಿಶೂರ ದೇಶದಿಂದ ಯಾರೋ ಬಂದು ಇಂತಹ ಶಕ್ತಿಪರಾಕ್ರಮಗಳನ್ನಾಡಿ ತೋರಿದರು”.... ....ಎಂಬುದೊಂದು ಒಕ್ಕಣೆಯನ್ನು ಆ ಪಾಳೆಯಗಾರನ ಕಯ್ಗೆ ದೊರೆವಡುವಂತೆ ಬರೆ ದಿಟ್ಟು ಬಿಟ್ಟು, ಹಿಂದಿರುಗಿ ಹೊರಟು, ಗುಟ್ಟಾಗಿ ಬಂದು ತೆರಕಣಾಂಬಿ ಯನ್ನು ಸೇರಿದರು.

ನಿರೀಶ :—.......ನಿಮ್ಮ ಮಹಾರಾಜರ ಪನ್ನತಿಕೆಯ ಮೆಯ್ಸ್ಪರ್ಚಿನ ಸಾಹಸಕೃತಿಗಳನ್ನೆಲ್ಲಾ ಬಿತ್ತರಿಸಿದಿರಾಯ್ತೊ ?

ಮೊದಲನೆಯವನು :—ನಿನಗೆ ಅಷ್ಟೇ ಸಾಕು.

ಯುವಕಪೌರ :—ಆದರೇನು ?

ನಿರೀಶ :—ನೀವು ಬಣ್ಣಿಸಿದವೆಲ್ಲ ಅಮಾನುಷವಾದುದೆಂದು ನೀವೇ ಒಪ್ಪಿ ಕೊಂಡಿರಷ್ಟೆ ?

ಮೂರನೆಯವನು :—ಆದರಿಂದಲೇ ನಮ್ಮ ಮಹಾರಾಜರು ಅಮಾನುಷ ಶಕ್ತಿಪ್ರತಾಪಗಳನ್ನುಳ್ಳ—ಶ್ರೀಕೃಷ್ಣನ ಅವತಾರ.

ನಿರೀಶ :—ನನಗೇನೋ ಸ್ವಲ್ಪ ಸಂದೇಹ ; ಏಕೆಂದರೆ.........

ಯುವಕಪೌರ :—(ಕಂಗನೆ ಕೆರಳ್ದು,) ಏನೋ ! ನಮ್ಮ ವೀರಮಹಾರಾಜರನ್ನು ಬಯ್ಯುವುದೂ ಅಲ್ಲದೆ, ನಾವೀಗ ಇಲ್ಲಿ ಮಾತನಾಡಿದವರನ್ನಿಬ್ಬರನ್ನೂ ಸುಳ್ಳರೆಂದು ಕಿರುಕುಳರೆಂದು ಕೂಗುವೆ ?—ಜೋಕೆ !

ಪಟ್ಟಣಿಗರೆಲ್ಲ :—(ಕ್ರುದ್ಧರಾಗಿರುವರು.)

ನಿರೀಶ :—(ಸಮಸ್ತರನ್ನೂ ಪರಿಕಿಸುತಿದ್ದು,) ಮಹನೀಯರೆ, ನಿಮ್ಮಂತಹ ಸದ್ಗೃಹಸ್ಥರ ಮಾತುಗಳನ್ನು ಕಟ್ಟುಕವೆಂದು ಕೀಳ್ಪಡಿಸಲು ನನಗಿಷ್ಟವಿಲ್ಲ ; ನಿಮ್ಮ ಮಹಾರಾಜರು ನೀವು ಕೀರ್ತಿಸಿದಂತಹವರೇ ಆಗಿರುವುದಾದರೆ, ನೀವು ಬಹಳ ಪುಣ್ಯವಂತರು.

ಪೌರರು :—(ಕಳಿಯೇರುವರು.)

ಯುವಕಪೌರ :—(ಪ್ರಸನ್ನನಾಗಿ,) ಹಾಗೆ ಮಾತನಾಡು.—ಈಗಳೀಗ ನೀನೊಂದು ಮನುಷ್ಯನಾದೆ.

ನಿರೀಶ :—ಅಯ್ಯಾ, ಶ್ರೀಮನ್ಮಹಿಶೂರಮಹಾರಾಜ ಶ್ರೀ ರಣಧೀರ ಕಂಠೀರವ ನರಸರಾಜ ಒಡೆಯರ ಪ್ರಜೆಗಳಾಗಿರುವ ಸೌಭಾಗ್ಯರೆ !—ಅಷ್ಟು ಹೊತ್ತಿನಿಂದ ನಿಮ್ಮ ಮಹಾರಾಜರನ್ನು ನಾನು ಅವಹೇಳನ ಮಾಡುತ್ತಿದ್ದ ನನ್ನ ಮಹಾಪರಾಧವನ್ನು ನೀವೆಲ್ಲರೂ ಕೃಪೆಮಾಡಿ ಕ್ಷಮಿಸಬೇಕೆಂದು ಪ್ರಾರ್ಥಿಸಿಕೊಳ್ವೆನು. (ಕಯ್ಮುಗಿದು ನಮಿಸುವನು.)

ಅಯ್ದನೆಯುವನು :—ಭಾಪು !

ಮೊದಲನೆಯುವನು :—ಒಳ್ಳೆಯ ಹುಡುಗ.

ಎರಡನೆಯುವನು :—ಪಾಪ !

ಆರನೆಯುವನು :—ಹೆದರಿಬಿಟ್ಟನು, ಆಹುದು.

ಮೂರನೆಯುವನು :—(ಜನಾನ್ತಿಕದಲ್ಲಿ,) ಇಲ್ಲ, ಮಾವ ; ಅವನ ಮುಖವನ್ನು ನೋಡು ; ಹೆದರಿದವರ ಮುಖದಲ್ಲಿ ಆ ಗಾಂಭೀರ್ಯವೂ ಆ ತೇಜಸ್ಸು ಇರುವುವೆ ?

ಯುವಕಪೌರ :—(ಸನ್ತೋಷದಿಂದ,) ಅಯ್ಯಾ, ನರಸೀಪುರದ ಮಿತ್ರನೆ! ನಿನ್ನ ಆ ಮಹಾಪರಾಧಕ್ಕೆ ಪ್ರಾಯಶ್ಚಿತ್ತವಾಗಿ ನಿನ್ನೆರಡು ಕೆನ್ನೆಗಳಿಗೂ ನೀನೇ ಬೆಚ್ಚಗೆ ಹೊಡೆದುಕೊ, ನೋಡೋಣ!

ನಿರೀಶ :—(ತನ್ನೆರಡೂ ಕೆನ್ನೆಗಳಿಗೂ ಹೊಡೆದುಕೊಂಡು,) ಪುಣ್ಯಶಾಲಿಗಳಿರಾ! ನಿಮ್ಮ ರಣಧೀರಮಹಾರಾಜರು ನೀವು ಸೂಚಿಸಿದಂತೆ ಅಂತಹ ಶೂರಪರಾಕ್ರಮಿ ಸೋಲವೆಡೆಗಿಡಿಸದ ಸಾಹಸಿಯು ಆಗಿರುವುದುಂಟಾದರೆ, ಅಜ್ಞಾತಕುಲಗೋತ್ರನಾದ ದಳವಾಯಿಯೊಬ್ಬನು ಅವರನ್ನು ಇಷ್ಟು ಸುಲಭವಾಗಿ ಹಿಡಿದು, ಕಯ್ಸೆರೆಯ ಬಂದಿಯನ್ನೆಂಬಂತೆ ಅರಮನೆಯೊಳಗೆ ಕೂಡಿಸಿ, ಕಾವಲಿಡುವುದು ಸಾಧ್ಯವಾಗುತ್ತಿದ್ದಿತೆ?—ಎಂದು ನನಗೆ ಸಂಶಯವುಂಟಾಗಿದ್ದಿತು.

ಪೌರರೆಲ್ಲ :—ಹಾ!

ಎರಡನೆಯವನು :—ಅರಮನೆಯ ಒಳಗೆ ಅಲ್ಲವಯ್ಯಾ; ಅಲ್ಲಿಯ ಹೊರಗಣ ಅಂಗಳದಲ್ಲಿ.

ಯುವಕಪೌರ :—ಆ ದಳವಾಯಿ! ರಾಕ್ಷಸ ವಿಕ್ರಮರಾಯ!

ಅಯ್ದನೆಯವನು :—ನಮ್ಮ ಮಹಾರಾಜರನ್ನು ಪಟ್ಟಾಭಿಷೇಕಕ್ಕೆಂದು ಈ ಮಹಿಶೂರಪುರಕ್ಕೆ ಕರೆಯಿಸಿ, ಅವರಿಲ್ಲಿಗೆ ಬಂದೊಡನೆ ತಾನು—ಇಲ್ಲಿಯೇ ಇದ್ದು ಅವರ್ಗೆ ಕಯ್ಗಾಣ್ಕೆಯನ್ನೊಪ್ಪಿಸದೆಯೇ—ಅವಸರದ ರಾಜಕಾರ್ಯಕ್ಕೆಂದು ಕನ್ನಂಬಾಡಿಯತ್ತ ಹೊರಟು ಹೋದನು. ಆದರರ್ಥವು ನಿಮಗೆಲ್ಲ ತಿಳಿದುದೇನು?

ಪಟ್ಟಣಿಗರು :—ಧೂರ್ತ! ಧೃಷ್ಟದಳವಾಯಿ!

ಅಯ್ದನೆಯವನು :—ಹೀಗೆಯೇ ತನ್ನ ದುರಧಿಕಾರವು ಬಳೆದಂತೆ ಪಟ್ಟಕ್ಕೇರುವ ಮಹಾರಾಜರ ವಿಷಯದಲ್ಲಿ ಅಲಕ್ಷ್ಯ ಉಪೇಕ್ಷೆ ಕೃತ್ರಿಮ ವಂಚನೆ ದ್ರೋಹ ಇವನ್ನು ಕಯ್ಕೊಗ್ಗಡಿಸಿಕೊಳ್ಳುತ್ತಿದ್ದು, ಕಟ್ಟಕಡೆಗೆ, ಸಮಯವಳವಟ್ಟು ಬಂದಾಗ, ಮಹಿಶೂರದೇಶದ ರತ್ನಸಿಂಹಾಸನವನ್ನು ಈ ದಳವಾಯಿ ವಿಕ್ರಮರಾಯನು ಏರಿ, ನಮ್ಮ ಮಹಾರಾಜನಾಗಬೇಕೆಂದಾಲೋಚಿಸಿ ಹೊಂಚುತ್ತಿದ್ದಾನೆ.

ಪೌರರು :—ಅಯ್ಯೋ ! ಅವನು ನೆಗೆದುಬೀಳ !
ಆ ಚಣ್ಡಾಲನು ಸತ್ತು ಹಾಳಾಗಲಿ :
ಅವನು ಉರಿದು ಬಿದ್ದುಹೋಗಲಿ !
ಅಯ್ಯೋ ! ಅವನು ನಾಶವಾಗ !

ಅಯ್ದನೆಯುವನು :—ಆದರೆ, ಹಾಗಾಗಬೇಕಾದರೆ, ಈ ದಳವಾಯಿಯು ....ಈ ಗಾಂಧರ್ವಪುತ್ರನು.........ಈ ವಿಕ್ರಮರಾಯನು ರಕ್ತ ಸಮುದ್ರಗಳನ್ನೀಸಿ, ಮನುಷ್ಯರ ಅಸ್ಥಿಪಂಜರಗಳ ಸೇತುವೆಯ ಮೇಲೆ ನಡೆದು, ಮಾಡಬಾರದ ಕೊಲೆಗಳನ್ನು ಮಾಡಿ, ತನ್ನಿಂದ ಹತಾಹತರಾದವರು ನರಲುವ ಗೋಳಿಟ್ಟಳುವ ಧ್ವನಿಗಳೇ ಮನ್ತ್ರಗಳೂ ಶುಭವಾದ್ಯಗಳೂ ಆಗಿ ಘೂರ್ಣಿಸುತ್ತಿರಲು—ಅಂತವರ ದುಃಖದ ಕಣ್ಣೀರ ಧಾರೆಗಳಿಂದ ತಾನು ಪಟ್ಟಾಭಿಷೇಕ ಮಾಡಿಕೊಳ್ಳಬೇಕಾಗುವುದು !

ಪೌರರು :—(ವಿವರ್ಣರಾಗಿ,) ದೆವ್ವ ! ಪಿಶಾಚ !

ನಿರೀಶ :—ಆಗಳ್ಗೆ ನಿಮ್ಮ ವಿಕ್ರಮರಾಯನಿಗೆ—

ಯುವಕಪೌರ :—(ಕ್ರೋಧೋದ್ವೇಗದಿಂದ,) ನಮ್ಮ ವಿಕ್ರಮರಾಯನಲ್ಲ ! ನರಕದ ವಿಕ್ರಮರಾಯ !

ನಿರೀಶ :—ಆಗಳ್ಗೆ ಹಾಗೆ ಶ್ರೀರತ್ನಸಿಂಹಾಸನಾರೋಹಣ ಮಾಡಿ ಮಹಿಶೂರದೇಶಕ್ಕೆ ಮಹಾರಾಜನಾಗಲು ಆಳವಡುವ ವಿಕ್ರಮರಾಯನಿಗೆ ನೆರವಾಗಿ, ಈ ಸ್ವಾಮಿದ್ರೋಹಿಯ ಬಲ್ಪಿನ ಸ್ವಾರ್ಥಪರತ್ವಕ್ಕೆ ಬಲಿಯಾಗುವ ಜನರ ಜಂಗುಳಿಯು ಪ್ರಜಾವಳಿಯು ಸೈನ್ಯವು ಮಹಾಪಾತಕರ ಸನ್ತೆಯಾಗಿ........ತಮ್ಮನ್ನು ಸೃಷ್ಟಿಸಿದ ಬ್ರಹ್ಮನಿಗೆ, ರಕ್ಷಿಸುವ ಶ್ರೀಮನ್ಮಹಾವಿಷ್ಣುವಿಗೆ, ತಾವು ಪ್ರವೇಶಿಸಬೇಕಾದ ಮೃತ್ಯುಮುಖಕ್ಕೂ ಒಂದಪಮಾನವನ್ನೊದಗಿಸುವಂತಹವರಲ್ಲವೇನು ?

ಪಟ್ಟಣಿಗರು :—ಅಹುದು ! ಅಹುದು ! ಅಹುದು !

ಅಯ್ದನೆಯುವನು :—ಇಂದೀಗ ಕವಡನ್ನರಿಯದೆ ಬಂದ ನಮ್ಮ ಶೂರ ಮಹಾರಾಜರನ್ನು ಹೀಗೆ ಅರಮನೆಯ ಹೊರವಳಯದಲ್ಲಿ—ಪ್ರತ್ಯಕ್ಷ

ವಾಗಿ ಸೆರೆಗೊಂಡು, ತನ್ನ ಸೊಕ್ಕಿನ ಅಧಿಕಾರದ ಉದ್ಧತಿಯ ಪರಾಕಾಷ್ಠತೆಯನ್ನು ಪ್ರಕಟಿಸುವುದಕ್ಕೋಸ್ಕರವಾಗಿ ಕನ್ನಂಬಾಡಿಗೆ ಹೊರಟು ನಡೆದ ಆ ದ್ರೋಹಿ ದಳವಾಯಿಗೆ ನಾವು ಅನುವರ್ತಿಗಳಾಗಿ ಮೆಯ್ಯಾರದ ಮಾನವಿಲ್ಲದೆ ಕುರುಡ ಕೀಟಗಳಾಗಿದ್ದೇವೆ.

ಪೌರರು :—ಇಲ್ಲ ! ಇಲ್ಲ ! ಇಲ್ಲ !

ಯುವಕಪೌರ :—(ಮಾಮುಸಗಿ, ರೋಷಗದ್ಗದಕಂಠದಿಂದ,) ಹೇಗೆ ?

ಅಯ್ದನೆಯುವನು :—ನಮ್ಮ ರಣಧೀರಮಹಾರಾಜರನ್ನು ಬಿಡಿಸಿಕೊಳ್ಳದೆ, ಆ ಧೂರ್ತ ಪಾಮರದಳವಾಯಿಯು ಅವರನ್ನು ತನ್ನ ಕಾಲಕೆಳಗೆ ಸಿಕ್ಕಿಸಿಕೊಂಡು ಹೊಸೆದಾಡುತ್ತಿದ್ದರೂ, ಕುರಿಗಳಂತೆ ಸುಮ್ಮನಿರುವ ನಾವು ನರಕದ ಹನ್ದಿಗಳಲ್ಲದೆ—ಬೇರೇನು ?

ಪಟ್ಟಣಿಗರು :—ಅಯ್ಯೋ !

ಯುವಕಪೌರ :—ಹೋ ! ನಮ್ಮ ಮಹಾರಾಜರನ್ನೀಗಳೇ ನಾವು ಬಿಡಿಸಿಕೊಳ್ಳಬೇಕು !

ನಿಂಶ :—ಒಂದು ದೇಶದ ಪ್ರಜಾಲೋಕದ ಐಶ್ವರ್ಯವು ಮಾನವು ಗೌರವವು ಧರ್ಮವು ಶಕ್ತಿಯು ಸತ್ತ್ವವು ಕಲಿತನವು ಸ್ವತಂತ್ರತೆಯು ಅದರ ರಾಜನಲ್ಲಿ ಮೆಯ್ಗೊಂಡಿರುವುವು ; ಆ ರಾಜನಿಗಡಸಿದ ಭಂಗವು ದುಃಖವು ಸಂಕಟವು ಅಪಮಾನವು ಆ ಪ್ರಜಾವಳಿಗಾದಂತೆ. ಅಹುದು ; ಇಂದು ಆ ವಿಕ್ರಮರಾಯನು ಕಾವಲೊಳಿರಿಸಿ ಲೆಕ್ಕಿಸದಿರುವುದು ಶ್ರೀ ರಣಧೀರ ಕಣ್ಠೀರವ ನರಸರಾಜ ಒಡೆಯರನ್ನಲ್ಲ ಮಹಿಶೂರದೇಶದ ಪ್ರಜೆಗಳನ್ನು !

ಪೌರರು :—ಹೋ ! ನಡೆಯಿರಿ ! ನಮ್ಮ ಮಹಾರಾಜರನ್ನು ಬಿಡಿಸಿಕೊಳ್ಳೋಣ !

ಬನ್ನಿ, ವಿಕ್ರಮರಾಯನ ಮನೆಗೆ ಬೆಂಕಿಯನ್ನಿಡುವ !

ಹೋ ! ಅವನ ಸೈನ್ಯದವರನ್ನೂ ತತ್ತರದರಿಂದೇ ತರಿಸೋಣ !

ಹೊರಡಿರಿ, ಕನ್ನಂಬಾಡಿಗೇ ಹೋಗೋಣ.

ಅಲ್ಲಿ ಆ ದ್ರೋಹಿಯನ್ನು ಸೀಳಿ, ಅವನ ಹೆಣವನ್ನು ಕಾವೇರಿಗೆ ಬಿಸಾಡಿ ಬರುವಣ !
ಕಾವೇರಿಗೆ ಬೇಡ !
ಇರಿ !
ಕಡಿ !
ಹೊಯ್ !
ಕೊಲ್ಲು !
ಹೋ !

ಯುವಕಪೌರ :—(ಕಯ್ಗಳನೆತ್ತಿ) ನಮ್ಮ ಮಹಾರಾಜರಿಗೆ ಜಯವಾಗಲಿ ! ವಿಕ್ರಮರಾಯನು ನಾಶವಡೆಯಲಿ ! ಅಹೋ ! ಜಯಜಯ ರಣಧೀರ !

ಪೌರರು :—ಮಹಿಶೂರಿಗೆ ಗೆಲುವಾಗಲಿ !
ದ್ರೋಹಿ ವಿಕ್ರಮರಾಯನು ನಿರ್ಮೂಲವಾಗಲಿ !
ಜಯ ಮಹಾರಾಜ !

ಮಹಿಶೂರ್ಗೆ—ರಣಧೀರನಿಗೆ ಜಯವೊಸೆಯಲಿ ! (ಕೋಲಾಹಲಿಸುತ್ತಿರುವರು.)

(ಚೆನ್ನ ರಂಗರ ಪ್ರವೇಶ.)

ಯುವಕಪೌರ :— ದ್ರೋಹಿ ವಿಕ್ರಮರಾಯನ ಪರಿವಾರದವರು ! ಅವರ ಕುಡುತೆಯನ್ನು ನೋಡು ! ಅವರನ್ನು ಹಿಡಿದು ಪುಟವೇರಿಸೋಣ ! (ಚೆನ್ನರಂಗರತ್ತ ನುಗ್ಗುವರು.)

ನಿರೀಶ :—(ಯುವಕಪೌರನನ್ನು ತಡೆದು ನಿಲ್ಲಿಸಿ, ಗಂಭೀರಭಾವದಿಂದ,) ನೀವು ಹೀಗೆ ವ್ಯರ್ಥವಾಗಿ ಬಲಪ್ರಯೋಗಕ್ಕೆ ಆತುರಿಸಲಾಗದು. ನಿಮ್ಮ ಮಹಾರಾಜರನ್ನು ಆ ಕಾರಾಗೃಹದಿಂದ ಬಿಡಿಸಿಕೊಳ್ಳುವ ಆಶೆಯು ನಿಮಗೆ ನಿಶ್ಚಯವಾಗಿಯೂ ಇದ್ದರೆ,........

ಪಟ್ಟಣಿಗರು :—ಇದೆ ! ಇದೆ !

ಚೆನ್ನ
ರಂಗ } :—(ಹೋಗುವರು.)

ನಿರೀಶ :—.......ಹೀಗಾಡದಿರಿ. ನಿಮ್ಮ ಮುಂದಾಳುಗಳು ಆದ್ಯಂತವಾಗಿ ವಿಚಾರಿಸಿ ಆಲೋಚಿಸಿ ನಿರ್ಣಯಿಸಿದಂತೆ ನೀವೆಲ್ಲರೂ ತಪ್ಪದೆ ಆಚರಿಸ ಬೇಕು.

ಅಯ್ದು ನೆಯುವವನು :—(ನಿರೀಶನನ್ನೇ ನೋಡುತ್ತಿದ್ದು.) ನಮ್ಮಲ್ಲಿ ಅಂತಹ ಮೊದಲಿಗರಾರೂ ಈಗ ಇಲ್ಲ, ಸ್ವಾಮಿ ; ನೀವೇ ನಮಗೆ ದಿಕ್ ಪ್ರದರ್ಶಕರಾಗಿ........

ಪೌರರು :—ಅಹುದು, ನೀವೇ ನಮ್ಮ ಹೆಗ್ಗಡೆ !

ನಿರೀಶ :—(ಹಿಮ್ಮೆಟ್ಟಿ,) ಶ್ರೀ ಚಾಮುಂಡೇಶ್ವರೀ ರಥೋತ್ಸವದ ಜಾತ್ರೆ ಗೆಂದು ಇತ್ತ ಬಂದಿದ್ದ ನನಗೆ........ನಿಮ್ಮಾ ದಳವಾಯಿಪ್ರಜೆಗಳ ಯುದ್ಧದ ಕೋಟಲೆಯೇಕೆ ? ಈ ರಾಜಕೀಯವಾದ ಜಂಜಡ— ತೊಡಕುಗಳು ನನಗೆ ಬೇಕಾಗಿಲ್ಲ. (ಹೊರಡುವನು.)

ಪೌರರು :—(ನಿರೀಶನ ಸುತ್ತ ಬಳಸಿಕೊಂಡು ನಿಂತು,) ಇಲ್ಲ ! ಅದಾಗುವುದಿಲ್ಲ ! ನೀವೇ ನಮ್ಮ ಮುಖ್ಯಸ್ಥ ! ಈಗಳೇನು ಮಾಡಬೇಕು ? ಹೇಳಿ !

ನಿರೀಶ :—ಈಗ ಹೀಗೆ ಒಡಂಬಡುವಿರಿ ; ಆ ಬಳಿಕ—

ಪಟ್ಟಣಿಗರೆಲ್ಲ :—ಇಲ್ಲ ! ಇಲ್ಲ ! ಇಲ್ಲ ! ನಾವೆಲ್ಲಾ ನೀವು ಹೇಳಿದ ಹಾಗೆ ನಡೆದುಕೊಳ್ಳುವೆವು !

ನಿರೀಶ :—ಆದರೂ,........

ಪೌರರು :—ದೇವರಾಣೆ !

ನಮ್ಮಯ್ಯನಾಣೆ !
ನಮ್ಮ ಮಾತೃಪಾದ ಸಾಕ್ಷಿಯಾಗಿ !
ನಮ್ಮ ಗುರುಪಾದ ಸಾಕ್ಷಿಯಾಗಿ !
ನಮ್ಮ ರಣಧೀರ ಮಹಾರಾಜರ ಪಾದದಾಣೆ !

ರಾಕ್ಷಸ—ವಿಕ್ರಮರಾಯನ ಆತ್ಮಸಾಕ್ಷಿಯಾಗಿ !

ನನ್ನಾಣೆಗೂ !

ನನ್ನ ಮಕ್ಕಳಾಣೆ !—

ನಿರೀಶ :—(ಹುಬ್ಬುಗಂಟಿಕ್ಕಿ, ನಿಷೇಧದ ಕಯ್ಯನ್ನೆತ್ತಿ,) ಈಗ ಈ ಕ್ಷಣವೇ ನೀವನಿಬರೂ ಮಹಿಶೂರ ಇತರ ಸುಭಟಪೌರರೊಡಗೂಡಿ, ಕೆರೆಯ ಮುಂದಣ ತಪ್ಪಲ ಪಸಲೆಯಲ್ಲಿ ನೆರೆಯಬೇಕು. ಅಲ್ಲಿ ನಮ್ಮ ಸ್ಥಿತಿಗತಿಗಳನ್ನೆಲ್ಲ ಸಮಾಲೋಚಿಸಿ, ನಮ್ಮ—ನಮ್ಮ ಶ್ರೀರಣಧೀರ ಮಹಾರಾಜರಿಗೆ... ....ಎಂದರೆ, ಈ ಮಹಿಶೂರದೇಶದ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ಪುನಃ ಪಡೆದುಕೊಳ್ಳುವುದಕ್ಕೆ ತಕ್ಕ ಸಾಧನ ಸನ್ನಾಹಗಳನ್ನು ಉಪಾಯಗಳನ್ನು ನಿಶ್ಚಯ ಮಾಡಿಕೊಂಡು, ಅದರಂತೆ ಉಜ್ಜುಗಿಸಿ ನಮ್ಮ ಕುರಿತ ಫಲವನ್ನು ಸಾಧಿಸೋಣ ; ಹಾಗಾಗದೆ, ನಮ್ಮ ಪುಣ್ಯಪ್ರಯತ್ನಗಳೆಲ್ಲಾ ಬಯಲಾಗುವುದೇ ಸಿದ್ಧಿಯಾದರೆ, ನಮ್ಮ ಏಕಾಗ್ರತೆಯ ಉದ್ದಾಮತ್ವದಿಂದ ನಮ್ಮೆದೆಯ ಬಿಸುನೆತ್ತರನ್ನು ಬಸಿದು, ಆ ಗಭೀರಪ್ರವಾಹದೊಳಗೆ ನಮ್ಮ ರಣಧೀರ ಮಹಾರಾಜರ ಸೆರೆಮನೆಯ ನಾಲ್ಕೂ ಗೋಡೆಗಳನ್ನು ಮುಳುಕಿಸಿ ಕೆಡಹಿ ಕೊಚ್ಚಿಸಿ ಕೃತಾರ್ಥರಾಗೋಣ ! ನಡೆಯಿರಿ !

ಯುವಕಪೌರ :—(ಮುಂದಕ್ಕೆ ಹಾರಿ, ನಿರೀಶನನ್ನು ಗಾಢಾಲಿಂಗನ ಮಾಡಿಕೊಳ್ಳುವನು.)

ಪೌರರು :—ನಮ್ಮ ಮಹಾರಾಜರಿಗೆ ಜಯವಾಗಲಿ !

ಮಹಿಶೂರಿಗೆ ಜಯಜಯ !

ಹೋ ! ದಳವಾಯಿ ವಿಕ್ರಮರಾಯನು ಹಾಳೇರಿಹೋಗಲಿ !

ಜಯಜಯತು ರಣಧೀರ !

ಮಹಿಶೂರಿಗೆ ಮಂಗಳವಾಗಲಿ !

ಪ್ರವೇಶ ೮.

[ಸ್ಥಾನ :—ಕನ್ನಂಬಾಡಿ, ಗೋಪಾಲಕೃಷ್ಣಸ್ವಾಮಿಯ ದೇವಸ್ಥಾನದ ಹೆಬ್ಬಾಗಿಲು.]

(ಆ ಗ್ರಾಮದ ಗೌಡ ಕರಣಿಕ ಪುರೋಹಿತ ಮುಂತಾದವರೂ ಊರುಗರೂ

ಫಲಪುಷ್ಪಾದಿಗಳೊಡನೆ ಸಿದ್ಧರಾಗಿ ನಿಂತಿರುವರು.)

(ಹೊರಗೆ) :—(ರಾಜವಾದ್ಯಗಳು ಭೋರ್ಗರೆಯುವುವು.)

(ಮಹಾರಾಜವೈಭವದಿಂದ ಸಪರಿವಾರ ವಿಕ್ರಮರಾಯನ ಪ್ರವೇಶ.)

ತಕ್ಕವರು :—(ವಿಕ್ರಮರಾಯನಿಗೆ ಕಯ್ಮುಗಿದು ಬಾಗುವರು)

ಪುರೋಹಿತ :—(ಅವನಿಗೆ ಆಶೀರ್ವದಿಸಿ, ಫಲಪುಷ್ಪಾದಿಗಳನ್ನು ಸಮರ್ಪಿಸುವನು.)

ವಿಕ್ರಮರಾಯ :—ಗೌಡನಾವನು ? ನೀನೊ ?

ಗೌಡ :—(ಮುಂದೆಯ್ದಿ ಬಂದು, ವಂದಿಸಿ,) ಅಹುದು, ಶ್ರೀಮಂತರ ಸೇವಕನು ನಾನು;

ವಿಕ್ರಮರಾಯ :—ಈವೂರ ಹಿಂದಣ ವರುಷದ ಕರದ ಉಳಿಕೆ—ಇನ್ನೂರ ಎಪ್ಪತ್ತೊಂಬತ್ತು ವರಹ ಆರು ಹಣಗಳು ಇನ್ನೂ ಬಂದಿಲ್ಲವೇಕೆ ?

ಗೌಡ :—ಇನ್ನೆಂಟುದಿನಗಳೊಳಗಾಗಿ ಅಷ್ಟನ್ನೂ ಅರಮನೆಯ ಭಣ್ಡಾರಕ್ಕೆ ಸಲ್ಲಿಸಿ, ಶ್ರೀಮಂತರಿಗೆ ಭಿನ್ನವಿಸುವೆನು.

ವಿಕ್ರಮರಾಯ :—ಒಳ್ಳೆಯದು. ಇಲ್ಲಿಯ ಕೆರೆಯೇಕೆ ನೀರು ನಿಲ್ಲದಷ್ಟು ಕೆಟ್ಟು—ಹಾಗಿದೆ.

ಗೌಡ :—ಒಕ್ಕಲರು ಬಿಟ್ಟಿ ಕೆಲಸಕ್ಕೆ ಸಿಕ್ಕದೆ ತಪ್ಪಿಸಿಕೊಳ್ಳುತ್ತಿದ್ದಾರೆ ; ಶ್ರೀಮಂತರು ದಯೆಗೆಯ್ದು, ಅರಮನೆಯಿಂದ ಸಾಕಾಗುವಷ್ಟು ಹಣವನ್ನು ಕೊಡಿಸಿದರೆ, ...

ವಿಕ್ರಮರಾಯ :—(ಹುಬ್ಬು ಗಂಟಿಕ್ಕಿ) ಒಡೆದು ಶಿಥಿಲವಾಗಿರುವ ಚಿಕ್ಕದೊಂದು ಕೆರೆಯನ್ನು ಪುನಃ ಕಟ್ಟಿಸಿ ನೇರ್ಪಡಿಸಿಕೊಳ್ಳದೆ, ಮುಂದಣ ಹಿಂಗಾರಿಗೆ ಬೆಳೆಯಾಗಲಿಲ್ಲವೆಂದೂ, ಅದರಿಂದ ರಾಜಾರ್ಥವನ್ನು

ಕುಡಲಾರೆನೆಂದೂ ಈ ಗ್ರಾಮಸ್ಥರು ಗೊಣಗಿದರೆ, ಅದು ಪ್ರಯೋಜನಕಾರಿಯಲ್ಲ.

ಗೌಡ :—ಅಪ್ಪಣೆ ; ಆದರೆ, ಸಿದ್ದಾಯವನ್ನು ಅರಮನೆಗೆ ತೆಗೆದುಕೊಳ್ಳುವ ಸುಗ್ಗಿಯ ಸಮಯಕ್ಕೆ—ಶ್ರೀಮಂತರು ಆರಮನೆಯ ಪೌಜಿನ ಚಿಕ್ಕ ದಳವೊಂದನ್ನಿಲ್ಲಿಗೆ ಕಳುಹಿಸಿಕೊಟ್ಟರೆ, ನನ್ನ ಆ ಉದ್ಯೋಗವು ಸುಲಲಿತವಾಗಿ ನೆರವೇರುವುದು.

ವಿಕ್ರಮರಾಯ :—ನಮಗದು ಅರ್ಥವಾಗುವುದಿಲ್ಲ; ಖಣ್ಡಣೆಯಾಗಿರುವಂತೆ ರಾಜಾಯದ ಹಣವನ್ನೆಲ್ಲಾ ನೀನೇ ಸಕಾಲದಲ್ಲಿ ಸಲ್ಲಿಸದಿದ್ದರೆ, ಅರಮನೆಯವರು ನಿನ್ನ ಸರ್ವಸ್ವವನ್ನೂ ತೆಗೆದುಕೊಳ್ವರು.

ಗೌಡ :—ಆಗಬಹುದು. ಕುರಿಯು ತೊಣ್ಡುಮೇದ ದವಸವನ್ನು ಕುರುಬನಿಂದ ಹೊಡೆದು ಕಾರಿಸಿದಂತೆ !

ವಿಕ್ರಮರಾಯ :—ಮಿತಿಮೀರಿ ಗಳಿಸಿಕೊಂಡಿರುವ ಧನದ ಬಲದಿಂದ ಗೌಡಂದಿರು ಕೊಬ್ಬಿ ಸೊಕ್ಕಿರುವಿರಿ ; ಶ್ರೀಮನ್ಮಹಾರಾಜರು ನಿಮ್ಮ ವಿಷಯವನ್ನು ಬೇಗನೆಯೇ ವಿಚಾರಿಸಿ, ನಿಮಗೆ ಬುದ್ಧಿಗಲಿಸುವರು.

ಗೌಡ :—ಶ್ರೀಮನ್ತರಿಗೆ ಯಾವುದೂ ಅಸದಳವಲ್ಲ.

ವಿಕ್ರಮರಾಯ :—ನಾವು ಹೇಳಿದುದು ಶ್ರೀಮನ್ಮಹಾರಾಜರೆಂದು ! ಈಗಲಾದರೂ ಕಿವಿಗೊಟ್ಟೆಯಷ್ಟೆ ?

ಗೌಡ :—ಕೇಳಿಸಿತು, ಮಹಾಸ್ವಾಮಿ !

ವಿಕ್ರಮರಾಯನ ಪರಿವಾರದವರು :—(ನಗುವರು)

ವಿಕ್ರಮರಾಯ :—(ಅಸಮಾಧಾನದಿಂದ ಸುತ್ತ ಅಭೀಕ್ಷಿಸುವನು.)

ಸಮಸ್ತರೂ :—(ಗಂಭೀರಮುದ್ರೆಯನ್ನು ತಾಳುವರು.)

(ತುಂಗರಾಯನ ಪ್ರವೇಶ.)

ವಿಕ್ರಮರಾಯ :—ಏನದು, ತುಂಗ ?

ತುಂಗರಾಯ :—(ವಿಕ್ರಮರಾಯನಿಗೆ ವಂದಿಸಿ,) ನಾನು ಬರುತ್ತಿರುವುದು ಅಲ್ಲಿಂದ.

ವಿಕ್ರಮರಾಯ :—(ಕಯ್ಸನ್ನೆ ಮಾಡುವನು.)

ಇತರರೆಲ್ಲ :—(ದೂರಕ್ಕೆ ಹೋಗಿ ನಿಲ್ಲುವರು.)

ತುಂಗರಾಯ :—ಶ್ರೀಮನ್ಮಹಾರಾಜರವರು ಸುರಕ್ಷಿತರಾಗಿರುವರು.

ವಿಕ್ರಮರಾಯ :—ಹುಂ.

ತುಂಗರಾಯ :—ಅವರಿಗೆ ಬಹಳ ಅಸಮಾಧಾನವಾಗಿರುವಂತಿದೆ.

ವಿಕ್ರಮರಾಯ :—ಹೇಳು.

ತುಂಗರಾಯ :—ಶ್ರೀಮನ್ತರು ಏರ್ಪಡಿಸಿಕೊಟ್ಟಿರುವ ಬೀಡಾರ ಊಳಿಗದವರು ಕಾವಲರು ಮುಂತಾದ ವಿಷಯಗಳಲ್ಲಿ.

ವಿಕ್ರಮರಾಯ :—ಹಾಗೆಂದನೇನು ?

ತುಂಗರಾಯ :—ಇಲ್ಲ ; ಆದರೆ ಅವರ ಅಸಮಾಧಾನವು ಅತೃಪ್ತಿಯು ಅವರ ನಡೆವಳಿಯಲ್ಲಿ–ಪ್ರತಿಯೊಂದು ಅಂಗಚಲನದಲ್ಲಿಯೂ ಸ್ಪಷ್ಟವಾಗುತ್ತಿರುವುವು.

ವಿಕ್ರಮರಾಯ :—ಹುಂ

ತುಂಗರಾಯ :—ಅವರು ತಮ್ಮ ಸ್ವಾತಂತ್ರ್ಯವನ್ನು ರಾಜ್ಯಾಧಿಪತ್ಯವನ್ನು ಸಾಧಿಸಿಕೊಳ್ಳುವುದಕ್ಕೋಸ್ಕರವಾಗಿ ಪ್ರಯತ್ನಿಸಬಹುದೆಂದು ತೋರುವುದು.

ವಿಕ್ರಮರಾಯ :—(ಬದ್ಧಭ್ರುಕುಟಿಯಾಗಿ,) ನಾವು—ದಳವಾಯಿ ವಿಕ್ರಮರಾಯನು—ನಾವು ತನಗೆ ಇನ್ನೂ ಪಟ್ಟಾಭಿಷೇಕವನ್ನು ನೆರವೇರಿಸಿಲ್ಲವೆಂಬುದು ಅವನಿಗೆ ಜ್ಞಾಪಕವಿರುವುದಷ್ಟೆ ?

ತುಂಗರಾಯ :—ಇರಬೇಕು.

ವಿಕ್ರಮರಾಯ :—ಇನ್ನೇನದು ?

ತುಂಗರಾಯ :—ಮಹಿಶೂರಿನ ಪೌರರು—ನಮ್ಮ ರಣಧೀರ ಮಹಾರಾಜರಿಗೆ ಜಯವುಂಟಾಗಲಿ ! ....ದ್ರೋಹಿ ವಿಕ್ರಮರಾಯನು ಹಾಳು ಹೋಗಲಿ !.... ...ಮಹಿಶೂರಿಗೆ ಗೆಲವಾಗಲಿ !" ಎಂದು ಕೂಗುತ್ತ ಕುಣಿಯುತ್ತ ಸಂಭ್ರಮಿಸುತ್ತಿದ್ದಾರೆ.

ವಿಕ್ರಮರಾಯ :—ಬರಿಯ ಹುಯ್ಯಲೆ ?

ತುಂಗರಾಯ :—ತೆಂಕಣ ವೈಹಾಳಿಯ ಮಾಳದಲ್ಲಿ ಪೌರರೆಲ್ಲ ಸಭೆಗೂಡಿ ವಿಶ್ವಪ್ರಯತ್ನಗಳಿಂದ ತಮ್ಮ ಮಹಾರಾಜರನ್ನು ಸೆರೆಯಿಂದ ಬೀಳ್ಕೊಳಿಸಬೇಕೆಂದೂ, ದಳವಾಯಿ ವಿಕ್ರಮರಾಯನನ್ನು ಸಜೀವವಾಗಿ ಹಿಡಿದು ಮಹಿಶೂರದೇಶದ ಸ್ವಾತಂತ್ರ್ಯಕ್ಕೆ ಬಲಿಗುಡಬೇಕೆಂದೂ ನಿರ್ಣಯಿಸಿಕೊಂಡರು.

ವಿಕ್ರಮರಾಯ :—ಮುಂದಾಳಾರವನು ?

ತುಂಗರಾಯ :—ತಿರುಮಕೂಡಲು–ನರಸೀಪುರದವನಂತೆ.

ವಿಕ್ರಮರಾಯ :—ಹೆಸರು ?

ತುಂಗರಾಯ :—ಆರಿಗೂ ತಿಳಿದಿಲ್ಲ.

ವಿಕ್ರಮರಾಯ :—ಆಗ ನಮ್ಮ ಸೈನ್ಯವದೇನಾಗಿದ್ದಿತು ?

ತುಂಗರಾಯ :—ಆ ನೆರವಿಗರ ಸಂತೆಯನ್ನು ಚೆದುರಿಸಲು ಸೈನ್ಯವು ಪ್ರಯತ್ನಿಸಿದುದು ಸಾರ್ಥಕವಾಗಲಿಲ್ಲ.

ವಿಕ್ರಮರಾಯ :—ಆ ದ್ರೋಹಿಗಳನ್ನು ತರಿದಿರಿದೊಟ್ಟದೆ ಬಿಟ್ಟರೇಕೆ ?

ತುಂಗರಾಯ :—ಆಗಳೇ ಶ್ರೀಮಂತರ ಅಪ್ಪಣೆಯನ್ನರಿಯದುದರಿಂದ.

ವಿಕ್ರಮರಾಯ :—ನೀನೀಗ ಹೀಗೆಯೇ ಹಿಂದಿರುಗಿ ಹೋಗಿ, ನಾವು ಸಂಜೆಯೊಳಗಾಗಿ ಅಲ್ಲಿಗೆ ಬರುವೆವೆಂದು ಡಂಗುರಬಡಿಯಿಸಿ, ವ್ಯಕ್ತವಾಗಿ ಪ್ರಕಟಿಸು. ತ್ರಿಣಯನೇಶ್ವರ ದೇವಸ್ಥಾನದಲ್ಲಿ ಇಂದು ಪ್ರದೋಷದ ಸೇವೆ ತೀರಿದೊಡನೆ ನಾವು ನರಸರಾಜನನ್ನು ನೋಡುವುದಾಗಲಿ.

ತುಂಗರಾಯ :—ಅಪ್ಪಣೆ. (ಹೋಗುವನು.)

ಪ್ರವೇಶ ೯.

[ಸ್ಥಾನ :—ಮಹಿಶೂರ ಅರಮನೆ, ಹೊರಗಣ ಅಂಗಳ]

(ಶ್ರೀ ರಣಧೀರ ಕಣ್ಠೀರವ ನರಸರಾಜ ಒಡೆಯ—ಸಿಂಹಾಸನದಲ್ಲಿ ಒರಗಿ, ಕಣ್ಮುಗಿದು, ಚಿನ್ತಾಪರವಶನಾಗಿರುವನು.)

ಚೆನ್ನ
ರಂಗ } :—(ಬಾಗಿಲೆಡೆಯಲ್ಲಿ ನಿಂತು ಗುಸುಗುಸನೆ ಕಿವಿಗಚ್ಚಿ ಮಾತನಾಡಿಕೊಳ್ಳುತ್ತಿದ್ದು, ಮೆಲ್ಲಗೆ ಪಡಿಯನ್ನು ತೆರೆಯುವರು.)

ರಂಗ:—(ಹೋಗುವನು.)

ಚೆನ್ನ:—(ಕದವನ್ನು ರಂಯ್ಯನೆ ನೂಂಕಿ, ಅಗುಳಿಯನ್ನು ಬಲವಾಗಿ ಹಾಕಿಬಿಟ್ಟು, ಬಳಿಕ ಸುತ್ತ ನೋಡಿ, ಹಠಾತ್ತಾಗಿ ಅತ್ಯುಚ್ಚಕಣ್ಠದಿಂದ ಹಾಡಲು ಮೊದಲ್ಗೆಯ್ವನು.)

(ಚೌಪದಿ)

ಸಕುನಗಾರರೆ, ಜೋಯಿಸರೆ, ಸುಮ್ಮಗಿಹುದು ; ।
ಉಳಿಗನೇ, ಉಸಿಕನಿರು; ಗಣ್ಟೆ, ಬಿನ್ನನಿರು ; ॥
ತವಕಿಗನ ಬಲಹೆಗಲು ಕಣ್ಣು ಹುಬ್ಬುಗಳೆ,।
ಕುಣಿಕುಣಿದು ಹಾರದಿರಿ ; ನಿಮ್ಮೆಸಗು ಬೇಡ ॥
ಆರ ಹಂಗಿಗುಮೆರಗದುಚ್ಚಕದ ಪದೆಪಿಂ ।
ದೊಸೆಗೆ ನಮ್ಮೊಡೆಯಬಂಚದ ಗಣ್ಡಗಲಿಯು ॥
ದಕ್ಕುಗೊಳ್ವುದು ನನ್ನಿ—ದೇವದುನ್ದುಭಿಯೆ, ।
ಮೊಳಗದಿರು ಮೊಳಗದಿರು ; ನಿನ್ನೆಸಗು ಬೇಡ ॥

ರಣಧೀರ :—(ಕಣ್ದೆರೆದು, ಅಪ್ರತಿಭನಾದ, ಚೆನ್ನನನ್ನೀಕ್ಷಿಸುತ್ತಿದ್ದು,) ನಮಗೆ ಹಗಲಿರುಳೂ ಹೀಗೆ ನಿದ್ರೆಗೂ ಅವಕಾಶವನ್ನೀಯದಿರಬೇಕೆಂಬುದು ನಿಮ್ಮ ಶ್ರೀಮನ್ತರ ಕಠಿನಾಜ್ಞೆಯೇನು ?

ಚೆನ್ನ :—(ಕಳವಳಗೊಂಡು,) ಅಲ್ಲವು, ಬುದ್ಧಿ ; ನಾವು ಹೀಗೆ ಮಾಡಿಕೊಳ್ಳದೇಯಿದ್ದರೆ, ನಮಗೆ ಉಳಿವಿಲ್ಲ, ಮಾಸ್ವಾಮಿ.

ರಣಧೀರ :—ಹಾಗೆಂದರೇನು ?

(ಆರೋ ಒದೆದಂತೆ ಕವಾಟವು ಅಲ್ಲಾಡುವುದು.)

ಚೆನ್ನ :—(ಮಾತಿಲ್ಲದೆ ಕದವನ್ನು ತೆರೆಯುವನು.)

(ರಂಗನ ಪ್ರವೇಶ)

ರಂಗ :—ಮಾಸ್ವಾಮಿಯವರನ್ನ ಕಾಣಬೇಕೆನ್ನುತ್ತ ಮೂವರು ಹೆಣ್ಮಕ್ಕಳು ಹೊರಗೆ ನಿಂದಿದ್ದಾರೆ, ಮಾಸ್ವಾಮಿ

ರಣಧೀರ :—ಹೆಂಗುಸರೆ ?

ರಂಗ :—ಹೌದು, ಮಾಸ್ವಾಮಿ.

ರಣಧೀರ :—ಎಲ್ಲಿಯವರು ?

ರಂಗ :—ಅದೊಂದನ್ನು ಹೇಳಲೊಲ್ಲರು, ಮಾಸ್ವಾಮಿ ; ಮೊಕದ ಮೇಗೆ ಮುಸುಕೆಳೆದು ಮುಚ್ಚಿಕೊಂಡಿದ್ದಾರೆ.

ರಣಧೀರ :—ಅವರನ್ನು ಕರೆದುಕೊಂಡು ಬಾ.

ರಂಗ :—ಅಪ್ಪಣೆ, ಮಾಸ್ವಾಮಿ.

ರಂಗ, ಚೆನ್ನ :—(ಒಬ್ಬರ ಮುಖವನ್ನೊಬ್ಬರು ನಿಟ್ಟಿಸಿ, ತಮ್ಮ ಕೊನ್ತಗಳನ್ನೆಡಗಯ್ಯಲ್ಲಿಯೂ, ಒರೆಗಳಿಂದ ಹಿಂದೆತ್ತಿದ ಕತ್ತಿಗಳನ್ನು ಬಲಗಯ್ಯಲ್ಲಿಯೂ ಹಿಡಿದುಕೊಳ್ಳುವರು.)

ರಂಗ :—(ಅಲ್ಲಿಯೆಲ್ಲೆಡೆಗಳಲ್ಲಿಯೂ ಕಣ್ಣೊಳಲಿಸಿ, ತೃಪ್ತಿಯ ತಲೆದೂಕದಿಂದ ಚೆನ್ನನನ್ನೆಚ್ಚರಿಸಿ, ಹೋಗುವನು.)

ರಣಧೀರ :—ಯುದ್ಧಕ್ಕೆಂಬಂತೆ ಅನುವಾಗಿ ನಿಂತಿರುವೆ ; ಇದರರ್ಥ ವೇನು ?

ಚೆನ್ನ :—ಬುದ್ದಿಯವರು ಅದನ್ನ ಕೇಳಬಾರದು.

(ಅವಕುಣ್ಠಿತೆಯರಾದ ಮೂವರ—ರಂಗನ ಪ್ರವೇಶ.)

ರಣಧೀರ :—ಆರು ನೀವು ?

ಹೆಂಗುಸರು :—(ತಮ್ಮ ಮುಖಾವರಣಗಳನ್ನೆಳೆದು ಕಳೆಯುವರು,)

ರಣಧೀರ :—(ಕಟ್ಟಚ್ಚರಿಯಿಂದೇಳುತ್ತ,) ಚಿಕ್ಕಮ್ಮಯ್ಯ!

ಮಹಾಮಾತೃಶ್ರೀ ತಿಮ್ಮಾಜಮ್ಮಣ್ಣಿ :—ಅಹುದು, ಕಂದ, ನಿರ್ಭಾಗ್ಯೆಯಾದ ನಾನು.

ರಣಧೀರ :—(ಆಕೆಗೆ ನಮಸ್ಕರಿಸುವನು.)

ಮಹಾಮಾತೃಶ್ರೀ :—(ರಣಧೀರನ ನಿರಿಗುರುಳ ಮೇಲೆ ಕಯ್ಯಿರಿಸಿ) ರಣಧೀರ, ನೀನಾದರೂ ನಿನ್ನ ದಳವಾಯಿಯ ವಿಷಚೂರ್ಣಕ್ಕೆ ಸಿಲ್ಕದೆ ಮಹಿಶೂರ ಉದ್ದಾಮಯದುವಂಶದ ಅಭಿಮಾನ ಗೌರವ ಸ್ವತಂತ್ರ ಸ್ಥಿತಿ ಮರ್ಯಾದೆ ತೇಜಸ್ವಿತ ಶಕ್ತಿಗಳನ್ನು ಕೊರತೆಯಿಲ್ಲದಂತೆ ರಕ್ಷಿಸಿ, ಚಿರಾಯುರಾರೋಗ್ಯೈಶ್ವರ್ಯಗಳಿಂದ ಯಶಸ್ವಿಯಾಗೆಂದು ಆಶೀರ್ವದಿಸುವೆನು.

ರಣಧೀರ :—(ನೆಗೆದೆದ್ದು ನಿಂತು, ವಿವರ್ಣನೂ ವಿಸ್ಫಾರಿತನೇತ್ರನೂ ಆಗಿ,) ವಿಷಚೂರ್ಣವೆ?

ಮಹಾಮಾತೃಶ್ರೀ :—(ಕರ್ಕಶವಾಗಿ ನಕ್ಕು ಬಿರುದನಿಯಿಂದ,) ಅಹುದು, ಕಂದ; ನೋಡು; ಇದೇ ಕಯ್ಯಾರೆ ನಾನೇ—ವಿಕ್ರಮರಾಯನು ಕಳಿಹಿದ ವಿಷವನ್ನು ನನ್ನ ಪುಟ್ಟಸ್ವಾಮಿಗೆ ಕುಡಿಯಿಸಿದೆನು.

ರಣಧೀರ :—ಅಯ್ಯೋ! (ಅವಾಙ್ಮುಖನಾಗುವನು.)

ಚೆಂದವ್ವೆ
ರುದ್ರವ್ವೆ } :—(ಬಿಕ್ಕಿ ಬಿಕ್ಕಿ ಅಳುತ್ತಿರುವರು.)

ಮಹಾಮಾತೃಶ್ರೀ :—(ಆಕೆಗಳತ್ತ ತಿರುಗಿ) ಚೀಃ! ಇದೆಷ್ಟು ಗಲಭೆ, ಚೆಂದವ್ವೆ? —ನೀವು ನನಗೆ ತಕ್ಕ ಅವ್ವೆಯರಾಗುವುದೆಂದಿಗೆ?

ರಣಧೀರ :—(ಬಾಗಿಲಪಡಿಯನ್ನಾತುರತೆಯಿಂದ ಮುಚ್ಚುತ್ತಿರುವ ಚೆನ್ನರಂಗರನ್ನು ಕಂಡು, ವಿಜಯನಾರಸಿಂಹನನ್ನು ಬಿಚ್ಚಿ ನಡುವಿನ ಪಟ್ಟಿಯ ಒರೆಯೊಳಗಿಂದ ಬರಸೆಳೆದುಕೊಂಡು ಝಳಪಿಸುತ್ತ, ಅವರೆಡೆಗೆ ಹಾಯುತ್ತ,) ನಿಲ್ಲಿರಿ! ಇದರರ್ಥವೇನು? ಸ್ತ್ರೀಜನರು ಒಳವಂದತರುವಾಯ, ಒರೆಗಳೆದ ಖಡ್ಗಗಳು—ಅವನ್ನನುವುಮಾಡಿಕೊಂಡು ಹೀಗೆ ಬಾಗಿಲನ್ನು ಬನ್ಧಿಸುತ್ತಿರುವಿರೇಕೆ?

ಚೆನ್ನ
ರಂಗ }:—(ಮಾರ್ನುಡಿಯಿಲ್ಲದೆ ತಾಳನ್ನೇರಿಸಿ ಬಲವಾಗಿ ಬೆಟ್ಟುತ್ತಿರುವರು.)

ರಣಧೀರ :—ಒಡನೆಯೇ ಉತ್ತರವೀಯದಿದ್ದರೆ, ಸಂಹೃತರಾಗುವಿರಿ ! (ವಿಜಯನಾರಸಿಂಹನನ್ನೆತ್ತುವನು.)

ಚೆನ್ನ
ರಂಗ } (ತಮ್ಮ ಕತ್ತಿ ಕೊಂತ ಹರಿಗೆ ಬಿಲ್ಲು ಬತ್ತಳಿಕೆಗಳನ್ನೆಲ್ಲ ರಣಧೀರನ ಪಾದಪ್ರದೇಶದಲ್ಲಿರಿಸಿ, ಸಾಷ್ಟಾಂಗವಾಗಿ ಅಡ್ಡಬೀಳುವರು.)

ರಣಧೀರ :—(ಸನ್ದೇಹದಿಂದ,) ಇಂತಿದೇಕೆ ?

ಚೆನ್ನ
ರಂಗ } :—(ಎದ್ದು ಕಯ್ಮುಗಿದುಕೊಂಡು ವಿನಯಮಿತರಾಗಿ ನಿಲ್ವರು.)

ಚೆನ್ನ :—ಬುದ್ಧಿಯವರು ನಮ್ಮನ್ನ ಕೋಪ ಮಾಡಬಾರದು. ನಾವಿಬ್ಬರೂ ಅಣ್ಣ ತಮ್ಮಂದಿರು, ಮಾಸ್ವಾಮಿ. ನನ್ನ ಹೆಸರು ಚೆನ್ನ ; ಅವನ ಹೆಸರು ರಂಗ, ಬುದ್ಧಿ.

ರಣಧೀರ :—ಆದರೇನು ?

ಚೆನ್ನ :—ನಮ್ಮಜ್ಜ ಬೆಟ್ಟದ ಚಾಮರಾಜೊಡೆಯರ—ಎಂದರೆ, ನಿಮ್ಮಯ್ಯನವರ — ಕಯ್ಯಾಳಿಗದ ಜೀತಗಾರನಾಗಿದ್ದನುಂಟು, ಬುದ್ಧಿ, ಆನಾಟೆ ; ಆ ನಾಟೆಯ ಮಗ ನಮ್ಮಯ್ಯ, ಚುಂಚ...ಮಾರಾಜರು ರಾಜೊಡೆಯರ ಸೆಜ್ಜೆಯಲಿ ಕಾವಲಿರುತ್ತಿದ್ದ, ಮಾಸ್ವಾಮಿ.

ಮಹಾಮಾತ್ಯಶ್ರೀ :—(ತಲೆಯೆತ್ತಿ,) ನೀವು ಚುಂಚನ ಮಕ್ಕಳೆ ?

ಚೆನ್ನ
ರಂಗ }:—ಹೌದು, ಬುದ್ಧಿ,

ಚೆನ್ನ :—ನಾವಿಬ್ಬರುವೆ ಚಾಮರಾಜೊಡೆಯರನ್ನ ಆಡಿಸಿ, ಸಾಕಿದವರು, ಬುದ್ಧಿ.

ರಣಧೀರ :—ಅದರಿಂದೇನಾಗಬೇಕು ?

ರಂಗ :—ಮಾಸ್ವಾಮಿಯವರು ದಳವಾಯಿಗಳ್ಗೆ ಹಗೆತನದ ಒಂದೇ ಮಾತನ್ನ ಆಡಿದರೂ ನಾವು ನಿಮ್ಮನ್ನ—ಮಾಸ್ವಾಮಿಯವರನ್ನ....... (ಗಡಗಡನೆ ನಡಗುತ್ತ ಅಧೋಮುಖವಾಗುವನು.)

ರಣಧೀರ:—(ತನ್ನನ್ನೇ ನಡೆದಿಟ್ಟಿಸುತ್ತಿರುವ ಮಹಾಮಾತೃಶ್ರೀಯನ್ನು ನೋಡು ತ್ತಿದ್ದು,) ಈಗಳೇನನ್ನು ಮಾಡಬೇಕೆನ್ನುವಿರಿ ?

ಚೆನ್ನ:—ಬುದ್ಧಿಯವರು ನಮ್ಮನು ಸೂಲಕ್ಕೆ ಗಿಡ್ಡಂಗಿಗೆ ಹಾಕಿಸಲಿಕ್ಕಿಲ್ಲವು ಎನ್ನುತ ಹೇಳಿದರೆ, ನಾವು........ನಾವು— ಆ ದಳವಾಯಿಯನ್ನ ಹೊಡೆದು ಹಾಕಿ ತೀರಿಸಿಬಿಡುತ್ತೇವೆ.

ರಣಧೀರ:—ಈ ಸಾಹಸದ ಮಾತುಗಳು ನಮ್ಮನ್ನು ಸಿಕ್ಕಿಸಿಕೊಳ್ಳುವದ ಕ್ಕೋಸ್ಕರವಾಗಿ ಒಡ್ಡಿರುವ ಬಲೆಯಲ್ಲವಷ್ಟೆ ?

ಚೆನ್ನ } :—(ವಜ್ರಸಿರ್ಘಾತರಂತಾಗಿ) ಬುದ್ಧಿ ! ಬುದ್ಧಿ !
ರಂಗ } ಮಾಸ್ವಾಮಿ ! ಮಾಸ್ವಾಮಿ !

ಮಹಾಮಾತೃಶ್ರೀ :—ಅಲ್ಲ, ರಣಧೀರ ; ಚುಂಚನನ್ನೂ ಅವನ ಮಕ್ಕ ಳನ್ನೂ ನಾವು ಮೊದಲಿನಿಂದ ಬಲ್ಲೆವು-ಅವರ ರಾಜಭಕ್ತಿ ವಿಶ್ವಾಸ ಗಳು ಪರಿಶುದ್ಧವಾದುವು.

ರಣಧೀರ :—ನೀವು........ಈ ಪ್ರಯತ್ನವನ್ನು ಕಯ್ಕೊಳ್ಳದಿರಿ.

ಚೆನ್ನ :—ಈ ಊರಿನವರೆಲ್ಲಾ ಬುದ್ದಿಯವರನ್ನ ಇಲ್ಲಿಂದ ಬಿಡಿಸಿಕೊಳ್ಳ ಬೇಕು—ಎನ್ನುತ ಗಾವಳಿಮಾಡುತ್ತ ಇದ್ದಾರೆ, ಮಾಸ್ವಾಮಿ.

ಮಹಾಮಾತೃಶ್ರೀ :—ಎಂದರೆ, ಇದು ಸೆರೆಯೇನು ?

ರಣಧೀರ :—ಅಹುದು.

ಮಹಾಮಾತೃಶ್ರೀ :—(ಚೆನ್ನರಂಗರತ್ತ ತಿರುಗಿ, ಎದ್ದು,) ನೀವು ನಿಮ್ಮ ಕೆಲಸ ವನ್ನು ಕೊನೆಮುಟ್ಟ ನೆರವೇರಿಸಿದರೆ, ನಿಮಗೆ ಒಂದು ಲಕ್ಷ ಒಂದು ಲಕ್ಷ ವರಹಗಳನ್ನು ಸಲ್ಲಿಸುವೆವು.

ರಂಗ :—ನಾವು ದುಡ್ಡಿಗೆ ಇಂಥ ಕೆಲಸವನ್ನ ಮಾಡಲಿಕ್ಕಿಲ್ಲಾ, ಮಾಸ್ವಾಮಿ ; ನಾವು ತಲೆತಲಾಂತರದಿಂದ ಮಾರಾಜರ ಅರಮನೆ ಉಪ್ಪನ್ನ ತಿಂದದಕ್ಕೆ ಮಾಡುತ್ತೇವೆ.

(ಕದವು ಅಲ್ಲಾಡತೊಡಗುವುದು.)

ಚೆನ್ನ :—(ಅತ್ತನೋಡಿ,) ಬುದ್ದಿ ! (ಮಹಾಮಾತೃಶ್ರೀ ಚೆಂದವ್ವೆ ರುದ್ರವ್ವೆಯರನ್ನು ಕೋರಿ,) ಇವರಿಲ್ಲಿಯೆಲ್ಲಿಯಾದರೂ ಅವಿತಿರಬೇಕು.

ರಣಧೀರ :—ಆರದು ?

ಚೆನ್ನ :—ತುಂಗಪ್ಪನವರು ! (ಹೆಂಗುಸರನ್ನು ನಿರ್ದೇಶಿಸುತ್ತ,) ಇವರಾ ದೊಡ್ಡ ಕನ್ನಡಿಯ ಹಿಂದೆ ಅಡಗಿಕೊಂಡಿರಬೇಕು.

ಸ್ತ್ರೀಯರು :—(ಆ ಕನ್ನಡಿಯ ಹಿಂದಣ್ಗೆ ಹೋಗಿ ಅದೃಶ್ಯರಾಗುವರು.)

ಚೆನ್ನ :—ನಮ್ಮ ಆ ಕಯ್ಮೆಗೆ ಬುದ್ಧಿಯವರ ಅಪ್ಪಣೆ—

(ಬಾಗಿಲು ರಭಸದಿಂದ ಅಲುಗಾಡುವುದು.)

ರಣಧೀರ :—ನಾವು ಸಂಭಾಷಿಸಿದರೆ, ಬಾಗಿಲ ಹೊರಗಿರುವ—ಅವಂಗೆ ಕೇಳಿಸುವುದಿಲ್ಲವೇನು ?

ರಂಗ :—(ತಳ್ಳಂಕದಿಂದ,) ಇಲ್ಲವು, ಮಾಸ್ವಾಮಿ, ! ನಾವಿಲ್ಲಿ ಏಸು ಕೂಗಿಟ್ಟರೂ ಕದದ ಅತ್ತಲಾಗೆ ಕೇಳಿಸುವುದಿಲ್ಲವು, ಮಾಸ್ವಾಮಿ. ನಾವು ಪರೀಕ್ಸೆ ಮಾಡಿದ್ದೇವೆ.

ಚೆನ್ನ :—ಅದಕೆ ಬುದ್ಧಿಯವರ ಒಪ್ಪು...........

ರಣಧೀರ :—(ವಿಜಯನಾರಸಿಂಹನನ್ನೊರೆಯೊಳಗೆ ನೂಕಿ, ಸುಖಾಸನಕ್ಕೆ ನಡೆದು, ಅದರೊಳೊರಗಿ,) ಬಾಗಿಲನ್ನು ತೆರೆಯಿರಿ. (ಕಣ್ಮುಚ್ಚಿಕೊಳ್ಳುವನು.)

ಚೆನ್ನ }
ರಂಗ } (ಬೇಗಬೇಗನೆ ಪಡಿದೆರೆಯುವರು.)

(ಹೊರಗಾವಲ ಯೋಧರೊಡನೆ ತುಂಗರಾಯನ ಪ್ರವೇಶ.)

ತುಂಗರಾಯ :—(ಸುತ್ತ ಕಣ್ಣಾಡಿಸಿ, ಸಂಶಯದಿಂದ,) ಇಷ್ಟುಹೊತ್ತಿನವರೆಗೆ ಬಾಗಿಲನ್ನೇಕೆ ತೆರೆಯಲಿಲ್ಲ ? ಒಳಗೇನು ಮಾಡುತಿದ್ದಿರಿ ?

ಚೆನ್ನ :—ಅವರು ಹಾಂಗೆ ನಿದ್ದೆಮಾಡುತ್ತ ಗೊರಕೆಹೊಯ್ಯುತ್ತ ಇದ್ದರು ; ಈ ಕೋಣೆಯಲ್ಲಿ ಏನನ್ನಾದರೂ ಮುಚ್ಚಿಮಡಗಿದ್ದಾರು—ಎನ್ನುತ ಹುಡುಕಿನೋಡಿದೆವು ; ಉದಕದ ಅಲಸಂದೆಗೂವೆ ಒಂದು ಕಾಸಿಲ್ಲ ! ಏನು ಮಹಾರಾಜರೋ ! ನಮ್ಮನ್ನೊಂದು ಬೋಳಗುಡ್ಡವ ಕಾವಲಿರು ಎನ್ನುತ ಕಳಿಸಲಿಕ್ಕಿಲ್ಲವಾ, ಇಲ್ಲಿಗಿಂತ ?

ಚೆನ್ನ
ರಂಗ } :—(ತಮ್ಮ ಕಯ್ದುಗಳನ್ನೆತ್ತಿಕೊಳ್ಳುವರು.)

ತುಂಗರಾಯ :— (ನಂಬುಗೊಳ್ಳದೆ,) ನೀವು ಹೊರಗೆ ಹೋಗಿರಿ.

ಚೆನ್ನ
ರಂಗ } :—(ಹೋಗುವರು)

ರಣಧೀರ :—(ಕಣ್ತೆಗೆದು,) ಏನು ಗಲಭೆಯಿದು ?

ತುಂಗರಾಯ :—(ಬಾಗಿ ವಂದಿಸಿ,) ಮಹಾಸ್ವಾಮಿಯವರು ಇಂದು ಪ್ರದೋಷ ಕಾಲಕ್ಕೆ ತ್ರಿಣಯನೇಶ್ವರಸ್ವಾಮಿಯನ್ನು ಸಂದರ್ಶಿಸಬೇಕೆಂದು ಅಪ್ಪಣೆಯಾಯ್ತಂತೆ.

ರಣಧೀರ :—(ಎದ್ದು ಹೊರಟು,) ಬಲವನ್ತದ ಮಾಘಸ್ನಾನವಾದರೂ ಇದರಿಂದ ಮುಕ್ತಿಯು ದೊರಕೊಳ್ಳುವುದಾದರೆ, ನಮಗೆ ಒಪ್ಪುಗೆ.

ಪ್ರವೇಶ ೧೦.

[ಸ್ಥಾನ :—ಮಹಿಶೂರಪುರ, ತ್ರಿಣಯನೇಶ್ವರದೇವಾಗಾರದಲ್ಲಿ ವಿಮಾನದ ಹಿಂದಣ ಕಯ್ಸಾಲೆ.]

(ಶ್ರೀರಣಧೀರಕಣ್ಠೀರವನರಸರಾಜಒಡೆಯ—ವಕ್ಷಸ್ಥಳದ ಮೇಲೆ ಕಯ್ಕಟ್ಟಿಕೊಂಡು ಶತಪಥ ತಿರುಗುತ್ತಿರುವನು.)

(ಸ್ವಲ್ಪಹೊತ್ತಿನ ಬಳಿಕ, ಸರ್ವಾಯುಧಸಜ್ಜಿತನಾದ ತುಂಗರಾಯನೊಡನೆ ವಿಕ್ರಮರಾಯನ ಪ್ರವೇಶ.)

ವಿಕ್ರಮರಾಯ :—(ರಣಧೀರನಿದಿರಿಗೆ ಹೋಗಿ ನಿಂತು, ಅವನ ಮುಡುಹಿನ ಮೇಲೆ ಕಯಿಟ್ಟು, ಸಾದರನಾಗಿ,) ಆರೋಗ್ಯವೆ, ನರಸ, ಕುಶಲವೆ ?

ರಣಧೀರ :—(ಕಯ್ಬಿಚ್ಚಿ ನೆಟ್ಟಗೆ ನಿಂತು,) ಹೀಗೆಯೇ ; ಶ್ರೀ ನೃಸಿಂಹನ ಅನುಗ್ರಹ.

ವಿಕ್ರಮರಾಯ :—ಬಾ, ಕುಳಿತುಕೊ. (ಅಲ್ಲಿ ಅನುವಾಗಿರುವ ರತ್ನಗಂಬಳಿಯ ಮೇಲೆ ಕೌಳುಡೆಯನ್ನೊರಗಿ ಕುಳಿತು, ತನ್ನ ಕೆಲದ ಬೇರೊಂದನ್ನು ರಣಧೀರನಿಗೆ ಸರಿಯಿಸುವನು.)

ರಣಧೀರ :—(ಸೂಚಿತವಾದಂತೆ ಕುಳ್ಳಿರುವನು.)

ವಿಕ್ರಮರಾಯ :—ಊರಲ್ಲಿ ಎಲ್ಲರೂ ಕ್ಷೇಮಿಗಳಷ್ಟೆ ?

ರಣಧೀರ :—ನಮ್ಮ ಸೌಭಾಗ್ಯ.

ವಿಕ್ರಮರಾಯ :—ನರಸ, ಹಿಂದಣ ಮಹಾರಾಜರ ಅಕಾಲಮರಣದ ತೀವ್ರಶೋಕದಿಂದ ನೊಂದು ದಿಗ್ಭ್ರಾನ್ತರಾಗಿರುವೆವಾದರೂ, ಈಗಳೇ ನಿರ್ವಾಹವಿಲ್ಲದೆ ನಿನ್ನ ಪಟ್ಟಾಭಿಷೇಕದ ವಿಷಯವನ್ನೆತ್ತಿ ನಿರ್ಧರಿಸಿಕೊಳ್ಳಬೇಕಾಗಿದೆ.

ರಣಧೀರ :—(ಮೆಲ್ಲಗೆ,) ನನ್ನ ಅವಸ್ಥೆಯೂ ಹಾಗೆಯೇ ಆಗಿರುವುದು.

ವಿಕ್ರಮರಾಯ :—ಈ ರಾಜ್ಯಾಭಿಷೇಕವು ನಿನಗೆ ಸಮ್ಮತವೆ, ನರಸ ?

ರಣಧೀರ :—ನನ್ನನ್ನೀ ಮಹಿಶೂರರಾಜಪಟ್ಟಕ್ಕೆ ಆಯ್ದುಕೊಂಡುದಕ್ಕೋಸ್ಕರ ವಾಗಿ ನಾನು ನಿಮಗೆ ಆಜೀವನವೂ ಕೃತಜ್ಞನಾಗಿರುವೆನು.

ವಿಕ್ರಮರಾಯ :—ಮಹಿಶೂರರತ್ನಸಿಂಹಾಸನವ್ಯವಸ್ಥೆಯು ಇಂದು ಅಷ್ಟು ಸುಲಭವಾದುದಲ್ಲ.

ರಣಧೀರ :—ಶ್ರೀ ನೃಸಿಂಹನ ಪ್ರಸಾದದಿಂದ, ನಮ್ಮ ಹೆಸರ ಹಿರಿಯರ ಸುಕೃತದಿಂದ, ಆಸ್ತಿಕರ ಆಶೀರ್ವಾದದಿಂದ, ನಮ್ಮ ಮಹಿಶೂರ ರಾಜ್ಯಕ್ಕೆ ಬಂದಡಸಬಹುದಾದ ಕಣ್ಟಕಗಳನ್ನೆಲ್ಲ ಇರಿದೊಡೆದು ಸುಟ್ಟು ಕೊಂಡು, ಹಿಂದಣ ಎರವಟ್ಟಿನ ಆ ಸಮೃದ್ಧತೆಯು ಪ್ರತಾಪಪ್ರಭಾವತೆಗಳು ಒದವಿ ಮಾಸದಂತೆ ಮುದ್ರಿಸಿರಿಸಲು ಪ್ರಯತ್ನಿಸಿ—ಸಾಧಿಸುವೆನು.

ವಿಕ್ರಮರಾಯ :—ರಾಜ್ಯದ ಸುತ್ತುಮುತ್ತಣ ನರಿಗಳು ಪ್ರಬಲವಾಗತೊಡಗಿ, ಊಳ್ದು ನಮ್ಮನ್ನು ಕೆಣಕುತ್ತಿವೆ.

ರಣಧೀರ :—ಮಹಿಶೂರಮಹಾರಾಜರೇರಿರುವುದು ಸಿಂಹಾಸನವೆಂಬುದನ್ನು ಆ ಅವರಿಗೆ ಸಾಕ್ಷಾತ್ಕರಿಸಿಕುಡುವೆನು.

ವಿಕ್ರಮರಾಯ :—ಹಾಗೆಂದರೆ, ಯುದ್ಧಗಳು ಆವಶ್ಯಕವಾದುವು.

ರಣಧೀರ :—ಯುದ್ಧಗಳಿಗಾಗಲಿ, ಸ್ವತಃ ತನ್ನ ವೈಯಕ್ತಿಕ ಕ್ಷೇಮಕ್ಕೋಸ್ಕರ ವಾಗಿಯಾಗಲಿ, ಬರಿತು ನಡುಗುವ ಹೇಡಿಯು ಮಹಿಶೂರರಾಜಪಟ್ಟ—ಅದನ್ನು ಕನಸಿನಲ್ಲಿಯೂ ನೆನೆಯಲಾಗದು.

ವಿಕ್ರಮರಾಯ :—(ಮುಗುಳ್ನಗೆಗೊಂಡು,) ಭಾಪು! ನರಸ!—ಅಹುದು ಮೊಳ್ಪಡೆದು ಮೊಗದೋರುತ್ತಿರುವ ಯುದ್ಧಗಳಿನಿತಕ್ಕೂ ಬೇಕಾದಷ್ಟು ಶಸ್ತ್ರಾಸ್ತ್ರಗಳನ್ನು ತುಪಾಕಗಳನ್ನು ಫಿರಂಗಿಗಳನ್ನು ಮದ್ದು ಗುಂಡುಗಳನ್ನು ಬಾಣಗಳನ್ನು ರಣವಾದ್ಯಗಳನ್ನು ಆನೆಕುದುರೆಗಳನ್ನು ಗುಡಿಗೂಡಾರಗಳನ್ನು ಆಹಾರಪದಾರ್ಥಗಳನ್ನು ಬಟ್ಟೆ ಹಣ ಮುಂತಾದುವನ್ನು ತರಿಸಿ, ಅನುಗೊಳಿಸಿಟ್ಟಿರುವೆವು. ಸೈನ್ಯದವರ ಸಾಧಕ ಚಾತುರ್ಯ ಯುದ್ಧಕೌಶಲ್ಯ ಯೋಗ್ಯತೆಗಳಿಗೆ ತಕ್ಕ ಅಧಿಕಾರಿಗಳನ್ನು

ನಿಯಮಿಸಿ ನೇರ್ಪಡಿಸಿಕೊಂಡು ಹಗೆಗಳನ್ನು ಗೆದ್ದು ಬಾಯ್ಮುಚ್ಚಿಸಿ ಅಡಗಿಸುವುದು........ನಿನ್ನ ಕರ್ತವ್ಯ.

ರಣಧೀರ :—(ತೀಕ್ಷ್ಣದೃಷ್ಟಿಯಿಂದ ನೋಡಿ,) ಆಗಬಹುದು.

ವಿಕ್ರಮರಾಯ :—ಇನ್ನು ನಿನಗೆ ವಿನೋದಕಾಲಕ್ಷೇಪಕ್ಕೋಸ್ಕರವಾಗಿ ಪಟ್ಟಣದಲ್ಲಿ—ಅರಮನೆಗೆ ಸಮೀಪವಾಗಿಯೇ—ಮಹಾರಾಜಯೋಗ್ಯವಾದುದೊಂದು ಗರುಡಿಯ ಮನೆಯನ್ನು ಕಟ್ಟಿಸಿ, ಅಲ್ಲಿಗೆ ತಗುವ ಸಾಧನ ಸಾಮಗ್ರಿಗಳನ್ನು ಕುಂದಿಲ್ಲದಂತೆ ಸಜ್ಜುಗೊಳಿಸುತ್ತಿರುವೆವು. ಮತ್ತೆ, ಈ ಪ್ರಾಂತ್ಯದಲ್ಲಿಯೂ, ಸುತ್ತಣ ನಾಡುಗಳಲ್ಲಿಯೂ ಅರಿಕೆಗೊಂಡಿರುವ ಜಟ್ಟಿಗಳನ್ನೆಲ್ಲಾ...........ಎಷ್ಟೇ ವೆಚ್ಚವಾದರೂ........ನಿನಗೆ ಕರೆಯಿಸಿ ಕುಡುವ ಸನ್ನಾಹಕ್ಕೂ ಒಪ್ಪಿದ್ದೇವೆ.

ರಣಧೀರ :—ಹಾಗೆ ಸಿದ್ಧವಾದ ಗರುಡಿಯಿಂದ ಮಹಿಶೂರ ರತ್ನಸಿಂಹಾಸನಾಧೀಶ್ವರರಿಗೂ, ಆ ಮೂಲಕವಾಗಿ ಮಹಿಶೂರ ದೇಶಕ್ಕೂ ಮನೋವಾಕ್ಕರ್ಮಗಳಲ್ಲಿ ದ್ರೋಹವನ್ನೆಣಿಸಿ ನೆರವೇರಿಸಿದ ಆ—ದುರಾತ್ಮರವರನ್ನು ನಿಗ್ರಹಿಸಲು ಸಮರ್ಥರಾದ ಮಲ್ಲವೀರರು ಹೊರಟು ಕೃತಕೃತ್ಯರಾಗಲಿ !

ವಿಕ್ರಮರಾಯ :—(ನಕ್ಕು,) ತಥಾಸ್ತು, ನಿನ್ನ ವೀರವಿಹಾರಕಾಲಗಳನು ಕೂಲಿಸುವಂತೆ ಕಾರ್ಕೋಡಿಹಳ್ಳದ ಘಟ್ಟದ ಕೆಳಗೂ, ಹೆಗ್ಗಡದೇವನ ಕೋಟೆಯ ಕಾಡಿನೊಳಗೆಯೂ, ಬಿಳಿಗಿರಿರಂಗನ ಬೆಟ್ಟದ ಮೇಲೆಯೂ, ಹೀಗೆ ಮೂರು ಬೇಡರ ಪಾಳೆಯಗಳನ್ನೇರ್ಪಡಿಸಿ ಸಾಂಗವಾಗಿ ಕಟ್ಟಿಸುತ್ತಿರುವೆವು.

ರಣಧೀರ :—(ಮನ್ದಹಾಸದಿಂದ,) ನಿಮ್ಮ ಈ ದಯಾಮಯವಾದ ದೂರಾಲೋಚನಗಳ ಸಮಗ್ರತೆಯು ನನ್ನ ಮನಕ್ಕೂ ನಾಲಗೆಗೂ ಪರವಶತೆಯನ್ನುಂಟುಮಾಡುತ್ತಿರುವುದು ; ಅವುದನ್ನು ಹೇಗೆ ವ್ಯಕ್ತಗೊಳಿಸಬೇಕೆಂಬುದನ್ನು ನಿರ್ಣಯಿಸಲಾರದವನಾಗಿರುವೆನು.

ವಿಕ್ರಮರಾಯ :—ನಿನ್ನ ಇಷ್ಟಾನುಸಾರವಾಗಿ ಆಟವೋ, ಬೇಟೆಯೋ, ಗರುಡಿಯೋ, ಯುದ್ಧವೋ—ಅವುಗಳನ್ನು ಕಯ್ಯೂಡಿಸಿಕೊಳ್ಳುತಿರುವುದಕ್ಕೆ ನಮ್ಮ ಆಕ್ಷೇಪಣವೇನೂ ಇಲ್ಲ.

ರಣಧೀರ :—(ತಲೆವಾಗಿದ್ದು,) ಆಗಬಹುದು.

ವಿಕ್ರಮರಾಯ :—ನಾಳಿನ ಸಂಜೆಗೆ ನಿನ್ನನ್ನಿಲ್ಲಿ ಕಾಣಬೇಕಾಗಿದೆ, ನರಸ!

ರಣಧೀರ :—(ಎದ್ದು,) ಅವಶ್ಯವಾಗಿ ಬರುವೆನು. (ಹೊರಟುಹೋಗುವನು.)

ವಿಕ್ರಮರಾಯ :—ತುಂಗ, ಹೋಗಿ, ಅಲ್ಲಿಯ ಕಾವಲ್ಗೆ ನಮ್ಮ ಮೂಲ ಬಲದಿಂದಿನ್ನೊಂದು ದಳವನ್ನಾಯ್ದು ಒಡ್ಡಿ ಹುರಿಮಾಡಿ, ಎಚ್ಚರಿಂದಿದ್ದು, ನಾಳೆ ಬೆಳಗಾದೊಡನೆ ಬಂದು ನಮ್ಮನ್ನು ನೋಡು.

ತುಂಗರಾಯ :—ಅಪ್ಪಣೆ. (ಹೋಗುವನು.)

ವಿಕ್ರಮರಾಯ :—(ನಕ್ಕು,) ನಮ್ಮ ತೊಡೆಯ ಮೇಲೆ ತೊದಲುತ್ತ ಬಳೆದ ಈ ಪಿಳ್ಳೆಗೆ ನಮ್ಮೊಡನೆ ವ್ಯಂಗ್ಯಜಿಜ್ಞಾಸೆ! ಶ್ಲೇಷೆಯ ವಾಕ್ಯಾರ್ಥ! ಹುಂ............(ಹುಬ್ಬುಗಂಟಿಕ್ಕಿ,) ತಂದೆಯಂತಲ್ಲದ ಮಗನಹುದು; ಆದರೆ, ದೈವಶಾಸನ!................ಬಿತ್ತರಿಗೆಗೆ ಮುಂದಣ ಉತ್ತರಾಧಿಕಾರಿ? ಈ ಮನೆತನದಲ್ಲಿ—ರಾಜಒಡೆಯನ ಮಲತಮ್ಮನಾ ಮುಪ್ಪಿನ ದೇವರಾಜನ ಮಕ್ಕಳು; ಹಿರಿಯುವನಿಗಿನ್ನೂ ಹತ್ತುವರುಷಗಳ ವಯಸ್ಸು............ನೋಡೋಣ.

ಪ್ರವೇಶ ೧೧.

[ಸ್ಥಾನ :—ಮಹಿಶೂರು, ವಿಕ್ರಮರಾಯನ ಸೌಧದ ಮುಂದಣ ಆರಾಮ, ಪಕ್ಷದ್ವಾರದೆಡೆ.]

(ದೀವಟಿಗನೊಡನೆ ವಿಕ್ರಮರಾಯನ ಪ್ರವೇಶ.)

ದೀವಟಿಗ :— (ತಟ್ಟನೆ ನಿಂತು,) ಹೋ ! ಯಾರಲ್ಲಿ ?

ವಿಕ್ರಮರಾಯ :—(ನಿಂತು,) ಏನದು ?

ದೀವಟಿಗ :—ಸೌಧದಿಂದ ಯಾರೋ ಬರುತ್ತಿದ್ದಾರೆ–ಯಾರಲ್ಲಿ? ಹೋಯ್ !

(ಅಳಗರಾಜಯ್ಯನ ಪ್ರವೇಶ)

ವಿಕ್ರಮರಾಯ :—ಇದೇನು ಅಳಗರಾಜ ?

ಅಳಗರಾಜಯ್ಯ :—(ನಮಿಸಿ,) ಶ್ರೀಮನ್ತರನ್ನು ಅರಸುತ್ತಿದ್ದೆನು.

ವಿಕ್ರಮರಾಯ :—ನಟ್ಟಿರುಳು ಕಳಿದ ಈ ಅಸಮಯದ ಕಗ್ಗತ್ತಲೆಯಲ್ಲಿ ?

ಅಳಗರಾಜಯ್ಯ :—ಅಹುದು, ತುಂಗರಾಯನು ನನ್ನನ್ನಟ್ಟಿದನು.

ವಿಕ್ರಮರಾಯ :—ಹೇಳು.

ಅಳಗರಾಜಯ್ಯ :—ಶ್ರೀ ಮನ್ಮಹಾರಾಜರನ್ನು ದೇಗುಲದಿಂದ ಅವರ ಬಿಡಾರಕ್ಕೆ ಕರದುಯ್ಯುತ್ತಿದ್ದಾಗ ಜನರು ಸನ್ದಣಿಗೊಂಡು ಅವರಿಗೆ ಅಡ್ಡ ಬೀಳುತ್ತ, ಅವರನ್ನು ಬೇಗನೆಯೇ ಆ ಕಾರಾಗೃಹದಿಂದ ಬಿಡಿಸಿ ಅವರಿಗೆ ಪಟ್ಟಾಭಿಷೇಕವನ್ನೊಪ್ಪಿಸುವುದಾಗಿಯೂ, ಶ್ರೀಮಂತರನ್ನು ಅವರ ರಾಯತನದ ಹಾವುಗೆಯ ಮಂಗಳಕ್ಕೆ ಸೀಳ್ದಿಡುವುದಾಗಿಯೂ ಕೂಗಿ ಕಳಕಳಮಾಡಿದರು.

ವಿಕ್ರಮರಾಯ :—ಅದಕ್ಕೆ ಇವನ ಉತ್ತರವೇನು ?

ಅಳಗರಾಜಯ್ಯ :—ಏನೂ ಇಲ್ಲ—ಸುಮ್ಮನೆ ಮುಗುಳ್ನಗೆ ನಕ್ಕರು.

ವಿಕ್ರಮರಾಯ :—ಆ ಮುಗುಳ್ನಗೆಯು ಸರ್ಪಚುಂಬನದಂತೆ ವಿಷ—ವಿಷತ್ತಿಸಿದ್ಧವಾದುದೆಂಬುದು ತುಂಗನಿಗೆ ಅರ್ಥವಾಗಲಿಲ್ಲವೇನು ?

ಅಳಗರಾಜಯ್ಯ :—ಆ ನಿಮಿಷವೇ ತುಂಗರಾಯನು ಪುರರಕ್ಷಕರ ದಳವನ್ನು ಕಳಿಹಿ, ಆ ಸಮ್ಮರ್ದವನ್ನು ಒಗ್ಗೊಡೆಯಿಸಿ ಚದರಿಸಬೇಕೆಂದೂ, ಹಾಗೆ ಬಗ್ಗದವರನ್ನು ನಿರ್ದಾಕ್ಷಿಣ್ಯವಾಗಿ ಹೊಯ್ದೋಡಿಸಬೇಕೆಂದೂ, ಅದಕ್ಕೂ ಮೀರಿದವರನ್ನು ನಿಶ್ಶಂಕೆಯಿಂದಿರಿದು ಕೊಂದುಬಿಡಬಹು ದೆಂದೂ, ಸ್ಪಷ್ಟವಾಗಿ ಸಾರಿಸಿ ಶಾಸಿಸಿದನಲ್ಲದೆ—ಆ ನರಸೀಪುರದ ತುಂಟ ನನ್ನು ತೋರಿ ಅಥವಾ ಹಿಡಿದುಕೊಟ್ಟವರಿಗೆ ಅಯ್ದುಸಾಸಿರ ವರಹಗಳ ಸಮ್ಮಾನವು ಲಭಿಸುವುದೆಂದೂ ಪ್ರಕಟಿಸಿದನು.

ವಿಕ್ರಮರಾಯ :—ಹುಂ.

ಅಳಗರಾಜಯ್ಯ :—ಅಷ್ಟರೊಳಗಾಗಿ ಜನರು ಅಲ್ಲಲ್ಲಿಯೇ ಅಡಗಿಕೊಂಡು ಅಗೋಚರರಾದರು ; ಆ ದಳದವರು ಏನನ್ನೂ ಮಾಡಲಾರದೆ, ತಟಸ್ಥ ರಾಗಿ, ಅರಮನೆಯ ಮುಂದೆ ಬೀಡುಗೊಂಡಿದ್ದಾರೆ.

ವಿಕ್ರಮರಾಯ :—ಪಂಜುಗಳೇನಾದುವು ?

ಅಳಗರಾಜಯ್ಯ :—ಪಂಜುಗಳನ್ನು ತರುವುದಕ್ಕೆ ನಮ್ಮವರು ಹಳೆಯ ಉಗ್ರಾಣಕ್ಕೆ ಆಗಳೇ ಹೋದರು.

ವಿಕ್ರಮರಾಯ :—ಆ ನರಸೀಪುರದವನನ್ನು ಹಿಡಿದಿರಾ ?

ಅಳಗರಾಜಯ್ಯ :—ಇಲ್ಲ ; ಸದ್ಯಃ ಅವನೆಲ್ಲಿಯೋ ಮೆಯ್ಗರೆದಿರುವಂತಿದೆ.

ವಿಕ್ರಮರಾಯ :—ನಮ್ಮಾಳ್ಗಳು ಅರಸಹೊರಟಾಗಳೇ ನಮ್ಮ ವಿಪಕ್ಷದವರಿಗೆ ಅದೃಶ್ಯಾಂಜನವು ಸಿದ್ಧಿಸುವುದು.—ಮತ್ತದೇನು ? ಹೇಳಿ, ತೊಲಗು.

ಅಳಗರಾಜಯ್ಯ :—ಮಹಾರಾಜರಿರುವ ಕೋಣೆಯ ಬಾಗಿಲಲ್ಲಿ ಕಾವಲಿರು ತ್ತಿದ್ದ ಚೆನ್ನರಂಗರಿಬ್ಬರೂ ಒಳಗೆ ಸೇರಿ, ಆ ಕದವನ್ನು ಮುಚ್ಚಿ ಭದ್ರ ಪಡಿಸಿ, ಮಹಾರಾಜರೊಡನೆ ಏನನ್ನೋ ಮನ್ತ್ರಣಮಾಡುತ್ತಿದ್ದುದನು ತುಂಗರಾಯನು ಕಂಡುಹಿಡಿದನು. ಅವರ ವಿಷಯದಲ್ಲಿ ಅವನಿಗೆ ತೀವ್ರ ಸಂಶಯವುಂಟಾಗಿದೆ.

ವಿಕ್ರಮರಾಯ :—ಚೆನ್ನರಂಗರಿಬ್ಬರನ್ನೂ ಒಡನೆಯೇ ಹಿಡಿದು, ಅರಮನೆಯ ಗುಪ್ತಗೃಹದಲ್ಲಿ ಚಿತ್ರಹಿಂಸೆಗೊಳಗಾಗಿಸಿ, ಆ ಗುಟ್ಟಿನೊಳಗನ್ನು ಹೊರಪಡಿಸಬೇಕು. ಅಲ್ಲಿ ಅವರು ತೀರಿಹೋಗಲಿ.

ಆಳಗರಾಜಯ್ಯ :—ಅಪ್ಪಣೆ.

ವಿಕ್ರಮರಾಯ :—ಚೆನ್ನ ರಂಗರೂ ಆ ನರಸೀಪುರದವನಂತಾಗದಿರಲಿ! ಜೋಕೆ!

ಆಳಗರಾಜಯ್ಯ :—ಅಪ್ಪಣೆ. (ವಂದಿಸಿ, ಹೋಗುವರು.)

ವಿಕ್ರಮರಾಯ :—(ಅನತಿಕಾಲ ಸ್ತಬ್ಧನಾಗಿ ಚಿಂತಾಸ್ತರ್ಗತನಾಗಿದ್ದು, ಮೊಗವೆತ್ತಿ, ದೀವಟಿಗನತ್ತ ತಲೆದೂಗಿ ಹೊರಡುವನು.)

(ಅಲ್ಲಿ ಅವಿತಿದ್ದವರಿಬ್ಬರು ಹವ್ವನೆ ಮುಂದಕ್ಕೆ ಹಾರಿಬರುವನು.)

ಚೆನ್ನ :—(ದೀವಟಿಗನ ಪಂಜುಗಯ್ಯ ಮಣಿಕಟ್ಟಿನ ಮೇಲೆ... ಆ ಪಂಜು ಕೆಳಕ್ಕೆ ಬಿದ್ದುಹೋಗುವಂತೆ ರಭಸದಿಂದ ಹೊಡೆಯುವನು.)

ದೀವಟಿಗ :—(ತನ್ನ ಕಯ್ಯನ್ನು ಕೊಡಹುತ್ತ, "ಅಯ್ಯಪ್ಪಾ! ಅಯ್ಯೋ!" ಎಂದು ಚೀರುತ್ತಿರುವನು.)

ರಂಗ :—(ಅದೇ ನಿಮಿಷದಲ್ಲಿ ವಿಕ್ರಮರಾಯನನ್ನಾಕ್ರಮಿಸಿ ತಬ್ಬಿಹಿಡಿದು ಕೆಳಕ್ಕೆ ನೂಕಿ ಕೆಡಹಲು ಪ್ರಯತ್ನಿಸುತ್ತಿದ್ದು, ಆಗದೆ, ತಾನೇ ವಿಕ್ರಮರಾಯನ ಪಟ್ಟಿನ ಕಟ್ಟೊದೆಗೆ ಗುರಿಯಾಗಿ ಸಿಲ್ಕಿ, "ಹೋ ಹೋ" ಎಂದು ಕೂಗಿಡುತ್ತ, ದಣ್ಡಾಕಾರವಾಗಿ ಬೀಳುವನು.)

ವಿಕ್ರಮರಾಯ :—(ರಂಗನ ಎದೆಯ ಮೇಗಣ್ಣೆ ನೆಗೆದೇರಿಕುಳಿತು, ತನ್ನೆರಡೂ ಕಯ್ಗಳಿಂದವನ ಕೊರಲನ್ನು ಕಿವಿಚುತ್ತ, ತಾರಕಸಣ್ಣದ...." ಹೋ! ಆಳಗರಾಜ! ಆಳಗರಾಜ! ತುಂಗ! ನಂಜ! ದೇವ! ಬನ್ನಿ! ಬೇಗಬನ್ನಿ! ಕೊಲೆಪಾತಕರು! ನಮ್ಮನ್ನಾಕ್ರಮಿಸಿರುವರು! ಹೋ! ಬನ್ನಿ! ಆಳಗರಾಜ! ದೇವ! ಆಳಗರಾಜ! ಎಂದು ಪುನಃಪುನಃ ಕೂಗುತ್ತಿರುವನು.)

ದೀವಟಿಗ :—(ಭಯಾತಿರೇಕದಿಂದ ಮರೆವಟ್ಟಿದ್ದು, ಹಿಂದಿರುಗಿ ಓಡತೊಡಗುವನು.)

ಚೆನ್ನ :—(ಆ ದೀವಟಿಗನತ್ತ ಹಾರಿ, ಅವನ ಜುಟ್ಟನ್ನು ಹಿಡಿದೆಳೆದು ಸಿಲ್ಲಿಸಿಕೊಂಡು, ತನ್ನ ಬಲಗಯ್ಯಲ್ಲಿ ಹೊಳೆಯೊಳೆಯುತ್ತಿರುವ ಖಡ್ಗವನ್ನು ಮೇಲಕ್ಕೆ ನೆಗಹುವನು.) .

(ಪಂಜು ನಂದಿ ಹೋಗುವುದು............ಗಾಢಾಂಧಕಾರ............ಒಂದು ದೇಹವು ಕೆಳಗುರುಳ್ದ ಶಬ್ದ...............ದಡದಡನೆ ನಡೆದಾಡಿದ ಹೆಜ್ಜೆಗಳ ಸೊಪ್ಪುಳು...........ಚೆನ್ನನ ಕಂಠವು ತವಕದಿಂದ, "ರಂಗ ! ಓ ರಂಗ ! ನೀನ್ ಕೆಳಗೊ! ನೀನ್ ಮೇಗೋ ?—ನೀನ್ ಕೆಳಗೋ ಮೇಗೊ, ರಂಗಾ ?" ಎಂದು ಕೂಗಿ ಕೇಳುತ್ತಿರುವ ಮಾತು ;...............ಉಸಿರಿಲ್ಲದೆ ಅತ್ಯಂತ ಕ್ಷೀಣಸ್ವರದಿಂದ, "ಕೆಳಗೆ ! ಕೆಳಗೆ !" ಎಂದ ಉತ್ತರ ; ಒಡನೆಯೇ ಸೌನೆಳಿಂದು ಖಡ್ಗವನ್ನು ಬೀಸಿದ, ತೆಂಗಿನಕಾಯಿಯಂತಹುದು ಭೂಮಿಗೆ ಬಿದ್ದುರುಳಿದ, ಸದ್ದುಗಳು........ಆ ಬಳಿಕ ಸಾನ್ದ್ರನಿಶ್ಶಬ್ದತೆ.)

ಪ್ರವೇಶ ೧೨.

[ಮಹಿಶೂರಪುರ, ಅರಮನೆ, ಹೊರಗಣ ಅಂಗಳ, ಶ್ರೀರಣಧೀರ ಕಂಠೀರವ ನರಸರಾಜಒಡೆಯ ಇರುವ ಓವರಿ.]

(ರಣಧೀರನು ನಿಲುವುಗನ್ನಡಿಯೆಡೆಯಲ್ಲಿ ನಿಂತಿರುವನು.)

(ತುಂಗರಾಯನ ಪ್ರವೇಶ.)

ತುಂಗರಾಯ :—(ವಿನಯ ವಿನಮಿತನಾಗಿ,) ಆಳುವ ಮಹಾಸ್ವಾಮಿಯವರು ಆರೋಗಣೆಗೂ ಸಜ್ಜೆಗೂ ಬಿಜಯಮಾಡಿಸಿ........

ರಣಧೀರ :—(ಹಿಂದಿರುಗಿ ಸುಖಾಸನದತ್ತ ನಡೆದು,) ಆಳುವ ಮಹಾಸ್ವಾಮಿಯವರು ಆರೋಗಣೆಯನ್ನೂ ಸಜ್ಜೆಯನ್ನೂ ಇಂದು ಇಲ್ಲಿಯೇ ಒಪ್ಪಿಸಿಕೊಳ್ಳುವರು ; ಆ ಊಳಿಗದವರನ್ನು ಕರೆಯಿಸು.

ತುಂಗರಾಯ :—ನಾಳೆ ಹೊತ್ತು ಮೂಡುವುದರೊಳಗಾಗಿ ಇಲ್ಲಿಗೆ ಸುಣ್ಣವನ್ನು ಬಳಿಯಿಸಿ, ಕಸದೂಳಿಲ್ಲಣಗಳಿಲ್ಲದಂತೆ ಪರಿಷ್ಕಾರಮಾಡಿಸಿ, ಪಟ್ಟಣದಿಂದ ಈವರಿಗೆ ಬಂದಿಳಿದಿರುವ ಸುಖಾಸನಗಳು, ಚಿತ್ರಪಟಗಳು, ಕಾಲ್ಮಣೆಗಳು, ಬಾಗಿಲ ಗವಾಕ್ಷದ ತೆರೆಗಳು, ಚಿತ್ರಯವನಿಕೆಗಳು, ದೀಪಸ್ತಂಭಗಳು, ತೂಗುಂಜೊಡರ್ಗಳು, ರತ್ನಗಂಬಳಿಯ ಹಾಸುಗೆಗಳು, ಲಾವಂಚದ ಬೀಸಣಿಗೆಗಳು, ಕಡವೆಯ ಕೊಂಬುಗಳ ಹುಲಿಯ ಮುಖಗಳ ಅಲಂಕಾರಗಳ ಮುಂತಾದ ಮಹಾರಾಜಯೋಗ್ಯವಾದ ಉಪಸ್ಕರಗಳನ್ನಿಲ್ಲಿಗೆ ಸಮನ್ವಯಿಸಿ, ಶೋಭಿಸುವಂತೆ ಅಣಿಮಾಡಬೇಕೆಂದು ಅಪ್ಪಣೆಯಾಗಿದೆ.

ರಣಧೀರ :—ಶ್ರೀಮನ್ತರ ಕೃಪೆ.

ತುಂಗರಾಯ :—ಮಹಾಸ್ವಾಮಿಯವರ ಅನ್ತಃಪುರದವರು—ಆರೋಗಣೆಗೋಸ್ಕರವಾಗಿ...........ಪ್ರತೀಕ್ಷಿಸುತ್ತಿದ್ದಾರೆ.

ರಣಧೀರ :—(ಸುಖಾಸನಾಸೀನನಾಗಿ,) ನಾವು ಸೂಚಿಸಿದಂತೆ ಆ ಊಳಿಗದವರನ್ನು ಕಳಿಹು.

ತುಂಗರಾಯ :—ಮಹಾಸ್ವಾಮಿ !

ರಣಧೀರ :—ನೀನು ಹೊರಡಬಹುದು.

ತುಂಗರಾಯ :—ಇಂದೀಗಳೇ ಇಲ್ಲಿಯ ಕಸವನ್ನು ತೆಗೆಯಿಸಬೇಕು !

ರಣಧೀರ :—(ಎದ್ದು ನಿಂತು, ಕೋಪಾರುಣನೇತ್ರನಾಗಿ,) ನಾವಿಲ್ಲಿರುವಾಗಳೇ ?

(ಹೊರಗೆ) :—(ಯುದ್ಧ ಲಕ್ಷಣದ ಶಬ್ದಗಳಾಗುವುವು.)

(ಉತ್ತರ ನಿಮಿಷದಲ್ಲಿಯೇ ರಕ್ತಾಕ್ತವಾದ ಬಿಚ್ಚುಕತ್ತಿಗಳನ್ನಾಂತ ತನ್ನ ದಳದ ಹಲವರೊಡನೆ ನಿರೀಶನ ಪ್ರವೇಶ.)

ತುಂಗರಾಯ :—(ವಿವರ್ಣನಾಗುವನು.)

ಬಂದವರೆಲ್ಲ :—(ನೀರವವಾಗಿ ರಣಧೀರನಿಗೆ ಕತ್ತಿಯನ್ನೊಳಕೊಂಡು, ಮುಗಿದ ನೀಡುಂಗಯ್ಗಳಿಂದ ಮಣಿದು ವಂದಿಸುವರು.)

ನಿರೀಶ :—(ಅಸಮಾಧಾನದಿಂದ ತುಂಗರಾಯನನ್ನಭೀಕ್ಷಿಸುತ್ತಿದ್ದು, ರಣಧೀರನತ್ತ ತಿರುಗುವನು.)

ರಣಧೀರ —ಅಹುದು, ನಿರೀಶ ; ಈ ಕೋಣೆಯ ಇಲ್ಲಣಕಸಗಳನ್ನು ನಮ್ಮ ತಲೆಯ ಮೇಲಾದರೂ ಗುಡಿಸಬೇಕೆಂಬುದು ಶ್ರೀಮಂತರ ಕಟ್ಟಾಯದ ಆಜ್ಞೆ.

ನಿರೀಶ :—ಇರಬಹುದು, ಮಹಾಸ್ವಾಮಿ, (ತನ್ನವರಿಬ್ಬರಿಗೆ ಇಂಗಿತ ಮಾಡುವನು)

ಆಯಿಬ್ಬರು :—(ಹೋಗಿ, ತುಂಗರಾಯನ ಇರ್ಕೆಲಗಳಲ್ಲಿ ನಿಂತು, ಅವನ ಕಯ್ಗಳನ್ನು ಬಂದಿಗೊಳ್ವರು.)

ರಣಧೀರ :—(ಸಮಸ್ತರನ್ನೂ ನೋಡಿ ನಕ್ಕು,) ನಮ್ಮನ್ನು ಮೀರಿ, ನಮ್ಮೊಡನೆ ಇಲ್ಲಿಗೆ ಬಾರೆವೆಂದು ಚಂಡಿಸಿ, ಚಲದಿಂದ ತೆರಕಣಾಂಬಿ—ಅಲ್ಲಿಯೇ ಅಡಗಿಕೊಂಡುದು ಇದಕ್ಕೋಸ್ಕರವಾಗಿ ! ನಿಮ್ಮ ಲಕ್ಷ್ಯಾರ್ಥವು ಇದೇ ಎಂಬುದನ್ನಾಗಳೇ ಅರಿಯದಾದೆವು............ದುಷ್ಟಮಿತ್ರರೆ, ನಿಮಗೆ ಇನ್ನದೆಂತಹ ಶಾಸ್ತಿಯು ತಕ್ಕುದೊ !

ಅಂಗರಕ್ಷಕರೆಲ್ಲ :—(ಮೌನವಾಗಿ ಬಾಗಿ ಪುನಃ ವಂದಿಸುವರು.)

ರಣಧೀರ :—(ನಿರೀಶನತ್ತ ತಿರುಗಿ,) ನಮ್ಮ ಸ್ಥಿತಿಗತಿಗಳ ವಿವರವೇನು ?

ನಿರೀಶ :—ತನುಮನೋಧನಸರ್ವಸ್ವಗಳನ್ನೂ ಒಪ್ಪಿಸಿ, ಮಹಾಸ್ವಾಮಿಯವರಿಗೋಸ್ಕರವಾಗಿ ಕಾದಲು ಸಿದ್ಧರಾಗಿರುವ ಈ ಮಹಿಶೂರ ಪುರಜನರ ಸೈನ್ಯ; ನಮ್ಮೆಲ್ಲರ ಕರ್ತವ್ಯವನ್ನು ಕಯ್ಕೊಂಡು ನಡೆಯಿಸಿ, ತಿಳಿದು ಸಲ್ಗೆಗೇರುತ್ತಿರುವ ವಿಜಯಲಕ್ಷ್ಮಿಯನ್ನು ಕ್ಷೇಮಲಕ್ಷ್ಮಿಯನ್ನು ರಾಜ್ಯಲಕ್ಷ್ಮಿಯನ್ನು ಮಹಾಸ್ವಾಮಿಯವರು—ಶತ್ರುಶಿಬಿರವು ದುರವಾಗದ ಮುನ್ನ—ವರಯಿಸುವುದು.

ರಣಧೀರ :—ಪೌರರ ಬಲವೆಷ್ಟು ?

ನಿರೀಶ :—ಆರುಸಾಯಿರದ ನಾಲ್ಕುನೂರು.

ರಣಧೀರ :—ಆಯುಧಗಳು ?

ನಿರೀಶ :—ಸರ್ವಾಯುಧಸಜ್ಜಿತವಾದ ಪದಾತಸೈನ್ಯ.

ರಣಧೀರ :—ಶಿಕ್ಷಣ ?

ನಿರೀಶ :—ಒಬ್ಬನೂ ಹೇಡಿಯಲ್ಲ, ದ್ರೋಹಚಿಂತಕನಲ್ಲ.

ರಣಧೀರ :—ಕಟಕೋಪಾಧ್ಯಾಯನಾರು ?

ನಿರೀಶ :—ಮಹಾಸ್ವಾಮಿ !

ರಣಧೀರ :—(ದರಹಸಿತಮುಖನಾಗಿ,) ಆ—ನರಸೀಪುರದ ತುಂಟ ! ಒಳ್ಳಿತು, ಒಂದುಸಾಸಿರ ಸೇನೆಯು ಒಳಕೋಟೆಯ ಕೊತ್ತಲಗಳಲ್ಲಿರುವ ನಾಲ್ಕು ಫಿರಂಗಿಗಳನ್ನು ಮದ್ದುಗುಣ್ಡುಗಳನ್ನೆಲ್ಲ ಸಾಧಿಸಿ, ಸಾಕಾದಷ್ಟು ಮಂದಿ ಗೋಲಂದಾಜರಳವಟ್ಟರೆ, ಅವರು ಅಲ್ಲಿ ಸಿದ್ಧರಾಗಿ, ನಮ್ಮಾಜ್ಞೆಯನ್ನು ನಿರೀಕ್ಷಿಸುತ್ತಿರಲಿ. ಆ ಫಿರಂಗಿಗಳು ನಮ್ಮವರ ಸ್ವಾಧೀನವಾದೊಡನೆಯೇ ಅವುಗಳ ಬಾಯ್ಗಳನ್ನು ಹಿಂದಿರುಗಿಸಿ, ಎಂದರೆ ಊರೊಳಗಣ್ಗೆ ತಿರುಗಿಸಿರಿಸಿ, ಆ ಬಳಿಕ ಗುಂಡನ್ನಿಕ್ಕದೆ ಮದ್ದನ್ನು ಮಾತ್ರ ತುಂಬಿ, ಒಂದೊಂದು ಬಾರಿ ಹಾರಿಸಿ, ನಮಗೆ ತಿಳಿಹಬೇಕು. ಆ ಕೊತ್ತಲಗಳಲ್ಲಿರಬೇಕಾದ ಸೈನಿಕರು ಊರೊಳಗಣ ಶತ್ರುಗಳ ಅಂಬುಗುಂಡುಗಳ ಅಪಾಯಕ್ಕೆ ಗುರಿಯಾಗದಂತೆ–ಈಗಳಿನ ಅವಸರಕ್ಕೆ ಲಭಿಸುವ ತಕ್ಕ

ಸಾಧನಗಳಿಂದ ತಮ್ಮ ಸುತ್ತ ಅಭೇದ್ಯವಾದ ಪ್ರಾಕಾರಗಳನ್ನು ಕಟ್ಟಿಕೊಳ್ಳುವದು ಆವಶ್ಯಕ.

ನಿರೀಶ :—ಅಪ್ಪಣೆ, ಮಹಾಸ್ವಾಮಿ. (ತನ್ನ ದಳದವನೊಬ್ಬನಿಗೆ ಬೆರಲೆತ್ತಿ ಸನ್ನೆ ಮಾಡುವನು,)

ನಿರ್ದಿಷ್ಟವೀರ :—(ರಣಧೀರನಿಗೆ ವಂದಿಸಿ, ಹೋಗುವನು.)

ರಣಧೀರ :—ಎರಡು ಸಾವಿರವು ದಳವಾಯಿ ವಿಕ್ರಮರಾಯನ ಸೌಧವನ್ನು ಮುತ್ತಿ, ಆರೂ ಒಳವುಗದಂತೆ, ಅಲ್ಲಿಂದ ತಪ್ಪಿಸಿಕೊಳ್ಳದಂತೆ—ಅದೇನು, ನಿರೀಶ ?

ನಿರೀಶ :—ಒಂದು ಸಾಸಿರದ ಆರನೂರು ಸೈನ್ಯದೊಡನೆ ಸಕ್ಕನು ವಿಕ್ರಮರಾಯರ ವಾಸಗೃಹವನ್ನು ನಿಶ್ಶಬ್ದವಾಗಿ ಬಳಸಿಕೊಂಡು, ಮಹಾಸ್ವಾಮಿಯವರ ಆಣತಿಗೋಸ್ಕರವಾಗಿ ಪ್ರತೀಕ್ಷಿಸುತ್ತಿರುವನು.

ರಣಧೀರ:—(ತಲೆವಾಗಿದ್ದು, ಮೃದುಮಧುರ ಕಂಪಿತಸ್ವರದಿಂದ,) ನಿನ್ನ ದಿವ್ಯ ಮೈತ್ರಿ—ನಿರೀಶ !

ನಿರೀಶ :—(ಅವಾಙ್ಮುಖನಾಗಿರುವನು.)

ರಣಧೀರ :—(ಈಷತ್ಕಾಲದ ತರುವಾಯ, ಧೃಢಕಣ್ಠದಿಂದ,) ಹುಂ.—ಆ ಒಂದು ಸಾಯಿರದ ಆರುನೂರವರು ನೀನು ಹೇಳಿದ ಒಟ್ಟಿನ ಲೆಕ್ಕಕ್ಕೆ ಸೇರಿದವರೆ ?

ನಿರೀಶ :—ಅಲ್ಲ.

ರಣಧೀರ :—ಇನ್ನು...............ಎರಡು ಸಹಸ್ರಜನರು ವಿಕ್ರಮರಾಯನ ಬಲದವರಿಳಿದುಕೊಂಡಿರುವ ಸೇನಾಗಾರಕ್ಕೆ ಮುತ್ತಿಗೆಯಿಟ್ಟು, ಮೊತ್ತಮೊದಲು ಅವರ ಮದ್ದಿನ ಆಯುಧದ ಉಗ್ರಾಣಸಾಲೆಗಳನ್ನು ನಮ್ಮ ವಶ ಮಾಡಿಕೊಂಡು, ಹಾಗೆ ನಿಸ್ಸಹಾಯರಾದ ಅವರ್ಗೆ ಸುಮ್ಮನೆ ಕಾವಲಿರಬೇಕು. ತಾವಾಗಿ ಕಯ್ಮಾರದವರು—ಅವರ ಮೇಲೆ ಕಯ್ಮಾಡದಿರಿ. (ಗಂಭೀರನಾದದಿಂದ,) ವ್ಯರ್ಥವಾಗಿ ಒಂದೇ ಪ್ರಾಣವೂ ನಷ್ಟವಾಗಲಾಗದು ! ವಿಜಯೋತ್ಸವದ ಸಂಭ್ರಮದಿಂದ

ಮತಿಗೆಟ್ಟು, ಈ ಕಡುಗಟ್ಟಳೆಯನ್ನು ಮರೆತು ಉಪೇಕ್ಷಿಸಿ ಪ್ರವರ್ತಿಸುವವರಿಗೆ ಆಕ್ಷಣವೇ ಅಲ್ಲಿಯೇ ಪ್ರಾಣಾಂತ ದಣ್ಡನೆಯಾಗಲಿ.

ನಿರೀಶ :—ಅಪ್ಪಣೆ, ಮಹಾಸ್ವಾಮಿ. (ಮಲ್ಲಹನುಮನಿಗೆ ಕಯ್ಸನ್ನೆ ಮಾಡಿ ಬೆಸಸುವನು.)

ಮಲ್ಲಹನುಮ :—(ರಣಧೀರನಿಗೆ ನಮಸ್ಕರಿಸಿ, ಹೋಗುವನು.)

ರಣಧೀರ :—ಅಯ್ಗಾರುಜನರು ಈ ಮಹಿಶೂರಪುರದ ಗೌಡ ಕರಣಿಕ ತಳಾರ ಕಳ್ಳಬಂಟ ಮುಂತಾದವರನ್ನೂ ಪುರರಕ್ಷಕರ ದಳವನ್ನೂ, ಕೋಟೆಯ ಬಾಗಿಲ್ಗಳ ಕಾವಲ ಸೈನಿಕರ ಒಡ್ಡುಗಳನ್ನೂ ಹಿಡಿದು ದೊಡ್ಡಗಿಡ್ಡಂಗಿಗೆ ಕೂಡಿ, ಅವರ ಸ್ಥಾನಗಳಲ್ಲಿ ತಕ್ಕವರು ಆಯಾ ವೂಳಿಗಗಳನ್ನು ಬಲ್ಲಂತೆ ನೆರವೇರಿಸುತ್ತಿರಲಿ.

ನಿರೀಶ :—ಅಪ್ಪಣೆ, ಮಹಾಸ್ವಾಮಿ. (ತನ್ನ ದಳದ ಮತ್ತೊಬ್ಬನಿಗೆ ಸಂಜ್ಞೆ ಮಾಡುವನು.)

ನಿರ್ದಿಷ್ಟವೀರ :—(ರಣಧೀರನಿಗೆ ನಮಿಸಿ, ಹೋಗುವನು.)

ರಣಧೀರ :—ಅರಮನೆಯನ್ನು ಸುತ್ತಿಕೊಂಡಿರುವ ಶತ್ರುಸೇನೆಯೆಷ್ಟಿರಬಹುದು ?

ನಿರೀಶ :—ಮುಂದಣ ಪ್ರಾಂಗಣದಲ್ಲಿ ಪಾಳೆಯಗೊಂಡಿದ್ದ ಚಿಕ್ಕ ದಳವೊಂದು ನಮ್ಮನಿದಿರಿಸಿದುದು ; ಒಬ್ಬನೂ ಉಳಿಯಲಿಲ್ಲ.

ರಣಧೀರ :—ಅಹುದು, ನಿರೀಶ ; ಸಮಯವಂತಹುದು.—ಅರಮನೆಯ ಕಾವಲ್ಗೆ ಅಯ್ಗಾರ್ವರು ಸಾಕು ; ನೆಲವಾಳಿಗೆಯ ಗುಟ್ಟಿನೋವರಿಗಳಿಂದ ಮೋಗಣ ಕಳಶದವರೆಗೆ ಅರಸಿನೋಡಿ, ಅಲ್ಲಲ್ಲಿ ಮರೆಗರೆದು ಹೊಂಚುತ್ತಿರುವ ಪ್ರತಿಪಕ್ಷದ ಬೇಹುಕಾರರನ್ನಾರಯ್ದು ಗಿಡ್ಡಂಗಿಯೊಳಕ್ಕೆ ನೂಕಿರಬೇಕು.

ನಿರೀಶ :—ಅಪ್ಪಣೆ, ಮಹಾಸ್ವಾಮಿ. (ತನ್ನ ದಳದ ಇತರನೊಬ್ಬನಿಗೆ ನಿರೂಪಿಸುವನು.)

ನಿರ್ದಿಷ್ಟವೀರ :—(ರಣಧೀರನಿಗೆ ವಂದಿಸಿ, ಹೋಗುವನು)

ರಣಧೀರ :—ಇನ್ನುಳಿದಿರುವುದರಲ್ಲಿ ಕಯ್ಯೋವಿಬಿಲ್ಲುಗಳ ಪ್ರಯೋಗಗಳಲ್ಲಿ ಬಲ್ಲ ಕುಶಲರಾದ ಒಂದು ಸಹಸ್ರ ಜನರುಳ್ಳ ಅತ್ಯುತ್ತಮವಾದ ಭಾಗವನ್ನು ಸಾಕಾದಷ್ಟು ಮದ್ದುಗುಂಡು ಅಂಬುಗಳೊಡನೆ ಊರ ಹೊರಗೆ ಬೀಡಿಕೆಗೊಂಡು, ಎಚ್ಚರವಾಗಿ ಸನ್ನದ್ಧವಾಗಿರಬೇಕೆಂದು ಕಳಿಹು, ನಿರೀಶ.—ಈಗ ನಾವು ಮಿಕ್ಕಿರುವ ಸೇನೆಯನ್ನೊಡಗೊಂಡು ಸಕ್ಕನ ಸಹಾಯಕ್ಕೆ ಹೋಗೋಣ.

(ರಕ್ತಸಿಕ್ತಗಾತ್ರರಾದ ಚೆನ್ನರಂಗರ, ಪ್ರವೇಶ.)

ಸಕ್ಕ :—(ರಣಧೀರನಿಗೆ ಪ್ರಣಾಮ ಮಾಡಿ,) ಈಯಿಬ್ಬರ ಕಯ್ಮೆಯು ಎದೆಯನ್ನು ನಡುಗಿಸುವಂತಹುದು.

ನಿರೀಶ :—(ಚೆನ್ನನತ್ತ ತಿರುಗಿ,) ಏನದು ?

ಚೆನ್ನ :—(ರಕ್ತದಿಂದ ತೋದ ಬಟ್ಟೆಯಲ್ಲಿ ಸುತ್ತಲ್ಪಟ್ಟ ಸೆಂಡಿನಾಕಾರದ ವಸ್ತುವನ್ನು ತನ್ನ ಕವುಂಕುಳಿಂದ ತಗೆದು, ಮುಂದೆಯ್ದು, ಅದನ್ನು ರಣಧೀರನ ಕಾಲೆಡೆಯಲ್ಲಿಡುವನು.)

ಚೆನ್ನ, ರಂಗ } :—ಸಾಷ್ಟಾಂಗವಾಗಿ ಅಡ್ಡಬೀಳುವರು.

ನಿರೀಶ :—(ತೀಕ್ಷ್ಣ ದೃಷ್ಟಿಯಿಂದ ನೋಡಿ,) ಮಾತನಾಡು, ಅಂತದೇನು ?

ಸಕ್ಕ :—ದಳವಾಯಿ ವಿಕ್ರಮರಾಯರ ತಲೆ !

ರಣಧೀರ :—(ಹಿಮ್ಮೆಟ್ಟಿನಿಂತು, ಅದನ್ನವಲೋಕಿಸುತ್ತಿರುವನು.)

ತುಂಗರಾಯು :—(ಬರಸಿಡಿಲೆರಗಿದವನಂತಾಗಿ, ಸ್ತಂಭಿತನಾಗಿದ್ದು, ಮೆಯ್ದೊಡಹಿ, ತನ್ನ ಕಾವಲನ್ನೊಬ್ಬನನ್ನೂರೆಗೊಂಡು ನಿಂತು ನಡುಗುತ್ತಿರುವನು.)

ರಣಧೀರ :—(ಕಡೆಗೆ ಮೊಗವೆತ್ತಿ ಚೆನ್ನನನ್ನುದ್ದೇಶಿಸಿ,) ಎಲಾ ಪಾಪಿ !—ಇಂತಹ ಕಾರ್ಯವನ್ನೇಕೆ ಮಾಡಿದೆ ?

ಚೆನ್ನ :—(ನಕ್ಕು) ಕಡೆಗೂ ಬುದ್ದಿಯವರು ಒಪ್ಪಲೇ ಇಲ್ಲ. ಹೌದು, ಮಾಸ್ವಾಮಿ !........ನಾನ್ ಪಾಪಿ, ಬುದ್ದಿ ; ಆದರೆ, (ಆ ಛಿನ್ನಮಸ್ತಕದತ್ತ ತೋಳ್ನೀಡಿ,) ಆ ಅಣ್ಣಸಿಗಿಂತ ಆ ಬೂತನಿಗಿಂತ ನಾನಾ,

ಮಾಸ್ವಾಮಿ ? ಅವನನ್ನ ಈ ಪಟ್ಟಿಗೆ ಸಿಕ್ಕಿಸಿಕೊಳ್ಳದೆ ಬಿಟ್ಟಿದ್ದರೆ, ನಮ್ಮಿಬ್ಬರನುವೆ ಅರಮನೆ ಕೆಳಗೆ ನೆಲಮಾಳಿಯ ಒಳಗೆ ಕಯ್ಯಾಕಲ್ತ್ರಿದು ಬೆಂಕಿಯಲ್ಲಿ ಬೇಯಿಸಿ ಹೊಯ್ದುಕೊಯ್ದು ಚಿವುಟಿ, ಚುಚ್ಚಿ ಸೀಳಿ ಹಿಂಸೆಮಾಡಬೇಕು ಎನ್ನುತ ಕಟ್ಟು ಮಾಡುತ ಇದ್ದನವ, ಬುದ್ದಿ ! ಮಾಸ್ವಾಮಿಯವರು ನಮ್ಮಿಬ್ಬರನ್ನುವೆ—ನನ್ನನ್ನ ರಂಗನನ್ನ—ಗಿಡ್ಡಂಗಿಗೆ ಹಾಕಿಸಿ, ಸೂಲಕ್ಕೆತ್ತಿಸಿ, ಇನ್ನೇನನ್ನ ಬೇಕಾದರೂ ಮಾಡಿಸಿ, ಬುದ್ದಿ ; ನಾವಿಬ್ಬರುವೆ ಹೋದರೂ, ನಮ್ಮ ದೊರೆಗಳ ಕುಳದವರು ಇನ್ನು ಸೊಕವಾಗಿ ಬೆದರಿಕೆಯಿಲ್ಲದೆ ಬದುಕಿಕೊಳ್ಳುತ್ತಾರೆ.

(ಹೊರಗೆ) :—(ಪ್ರಚಣ್ಡ ಕೋಲಾಹಲವೇಳುವುದು.)

ರಣಧೀರ:—(ನಿರೀಶನ ಮುಖವನ್ನು ನೋಡುವನು.)

ನಿರೀಶ:—(ಪಂದಲೆಯತ್ತ ನಿರ್ದೇಶಿಸಿ,) ಈ ವೃತ್ತಾನ್ತದರಿವು ನಿಳ್ಕಿದ ಪ್ರಜಾಲೋಕವು ಸನ್ತೋಷಿಸುತ್ತಿರುವುದು, ಮಹಾಸ್ವಾಮಿ. (ತನ್ನ ದಳದ ಬೇರೊಬ್ಬನಿಗೆ ಸಂಕೇತದಿಂದ ಆಜ್ಞಾಪಿಸುವನು.)

ನಿರ್ದಿಷ್ಟವೀರ:—(ರಣಧೀರನಿಗೆ ವೊಳ್ಗಿ, ಹೋಗುವನು.)

(ಹೊರಗೆ):- (ಸ್ವಲ್ಪಹೊತ್ತಿನೊಳಗಾಗಿ ನೀರವವಾಗುವುದು.)

ರಣಧೀರ :—ಹೀಗೆ ಸುಪ್ರಜಾವಳಿಯ ಗೌರವಕ್ಕೆ ಭಕ್ತಿಗೆ ವಿಶ್ವಾಸಕ್ಕೆ ಸರಲಸ್ನೇಹಕ್ಕೆ ಸನ್ತೋಷಕ್ಕೆ—ಮಹಾಸಮ್ಮತಕ್ಕೆ ಪಾತ್ರವಾಗಿರುವ ಈ ಮಹಿಶೂರ ಯಾದವ ಪ್ರಭುವಂಶದ ಪರಮಸುಕೃತದ ಸಂಭಾವನ ವಿದಹುದು.

ನಿರೀಶ:—ಅದು ಮಹಾಸ್ವಾಮಿಯವರ ಉತ್ಸಾಹವರ್ಧನದಿಂದ ಧನ್ಯವಾಗುವುದು, ಮಹಾಸ್ವಾಮಿ.

ರಣಧೀರ:—(ತಲೆವಾಗಿದ್ದು) ಈ—ಇದು ಹೇಗಾಯ್ತು ?

ಚಿನ್ನ:—ದಳವಾಯಿಗಳು ಸಂಜು ನಂದಿಹೋಗುತ್ತಲೇ, ರಂಗನನ್ನ ಕೆಳಕ್ಕೆ ಕೆಡಹಿಕೊಂಡು, ಅವನೆದೆ ಮೇಗೆ ಮಂಡಿಯೂರಿ ಕುಳ್ಳಿರುತ್ತ

6

ಅವನ ಕತ್ತನ್ನ ಎರಡೂ ಕಯ್ಯಿಂದ ಹೀಗೆ ಕಿವುಚುತ್ತ—'ಓ ದಾಸ ! ಓ ತುಂಗ ! ಓ ಸಿಂಗ !' ಎನ್ನುತ ಒದರುತ್ತಿದ್ದರು, ಬುದ್ದಿ ; ಆಗ ನಾನ್—

ಎಲ್ಲರೂ:—(ವಿಸ್ಮಯಕೌತುಕಗಳಿಂದ ನಿಲವುಗನ್ನಡಿಯತ್ತ ನೋಡುತಿರುವರು.)

(ಮಹಾಮಾತೃಶ್ರೀ ತಿಮ್ಮಾಜಮ್ಮಣ್ಣಿಯು ಚೆಂದವ್ವೆ ರುದ್ರವ್ವೆಯರ ಪ್ರವೇಶ)

ಅನಿಬರೂ:—(ನೀರವರಾಗಿ ಬಾಗಿ ಮುಗಿದ ನೀಡುಂಗಯ್ಗಳಿಂದ ವಂದಿಸುವರು.)

ತುಂಗರಾಯು:—(ನಿಮಿರಿ ನಿಲ್ಲುವನು.)

ಮಹಾಮಾತೃಶ್ರೀ:—(ಚೆನ್ನನತ್ತ ತಿರುಗಿ, ಭಯಂಕರಕಂಠದಿಂದ,) ಅದು ನಿಜವೆ? ಆ ದ್ರೋಹಿ ರಾಕ್ಷಸನು ಸತ್ತನೆ ? ಅದು ಅವನ ತಲೆಯೆ ?

(ದಡದಡನೆ ಮುಂಬರಿದು, ಆ ರುಂಡದತ್ತ ಕಯ್ನೀಡಿ ಬಗ್ಗುವಳು.)

ರಣಧೀರ:—(ಚಕ್ಕನೆ ಹಾರಿ, ಅವಳ ಕಯ್ಯನ್ನು ಹಿಡಿದು ತಡೆದೆಬ್ಬಿಸಿ, ಮೆಲ್ಲಗೆ ಹಿಮ್ಮೆಟ್ಟಿಸಿ,) ಚಿಕ್ಕಮ್ಮಯ್ಯ, ನಿಮ್ಮ ಪವಿತ್ರಹಸ್ತವು ಆ ಮಹಾಪಾತಕನವನ ತಲೆಯನ್ನೇಕೆ ಮುಟ್ಟಬೇಕು ?

ಮಹಾಮಾತೃಶ್ರೀ:—ಸತ್ತವನು ಅವನೇ ಅಲ್ಲದಿದ್ದರೆ ?

ರಣಧೀರ:—ಬನ್ನಿ, ಚಿಕ್ಕಮ್ಮಯ್ಯ, ಈ ಸುಖಾಸನದಲ್ಲಿ.................. ಕುಳ್ಳಿರಿ. ಅವುದನ್ನೂ ಈಗಳೇ ಶಂಕೆಯುಳಿವಂತೆ ನೋಡೋಣ

ಚೆನ್ನ:—(ಮುನ್ನಡೆದು, ಆ ತಲೆಯನ್ನೆತ್ತಿಕೊಂಡು, ಅದರ ಮೇಲ್ಮುಸುಕನ್ನುಸುಲಿದು ಬಿಸುಟು, ದಳವಾಯಿ ವಿಕ್ರಮರಾಯನ ರುಣ್ಡದ ವಿಕಾರವದನವನ್ನೆತ್ತಿ ಎಲ್ಲರಿಗೂ ಸುತ್ತ ತೋರುವನು.)

ತುಂಗರಾಯು:—(ರೋಷೋನ್ಮತ್ತನಾಗಿ ಅವುಡುಗಚ್ಚುತ್ತ ತನ್ನ ಕಾವಲರ ಕಯ್ಗಳಿಂದ ಝಾಡಿಸಿ ಕೊಡಹಿ ಬಿಡಿಸಿಕೊಂಡು, ಚೆನ್ನನತ್ತ ನೆಗೆದು ನುಗ್ಗುವನು.)

ನಿರೀಶ:—(ಹಾರಿ, ತುಂಗರಾಯನಿಗಡ್ಡವಂದು, ಅವನನ್ನು ತಬ್ಬಿಹಿಡಿದು ನಿಲ್ಲಿಸಿ, ಆ ಕಾವಲ ಮಲ್ಲರ ವಶಮಾಡಿ, ಹೊರಗಣ್ಗುಯ್ವಂತೆ ಕಯ್ತೋರಿಸುವನು.)

ಕಾವಲ ಮಲ್ಲರು:—(ತುಂಗರಾಯನನ್ನು ಹೊರಕ್ಕೆಳೆದುಕೊಂಡು ಹೋಗುವರು.)

ಚೆನ್ನ:—ಬುದ್ಧಿ, ನಮ್ಮಿಬ್ಬರನ್ನ–

ನಿರೀಶ :—ನಿಮ್ಮಿಬ್ಬರ ವಿಷಯದಲ್ಲಿ ಮಹಾಸ್ವಾಮಿಯವರಿಗೆ ಬಹಳ ಅಸಮಾಧಾನವುಂಟಾಗಿದೆ. ಈ ಕೊಲೆಗೆ ತಕ್ಕ ದಂಡನವೇನೆಂಬುದು ನಿರ್ಣೀತವಾಗುವವರೆಗೆ — ನೀವು ಹೋಗಿ, ಕೈಲಾಸವಾಸಿಗಳಾದ ದಳವಾಯಿ ವಿಕ್ರಮರಾಯರ ರುಂಡಮುಂಡಗಳನ್ನು ಒಟ್ಟೈರಿಸಿ, ಈವೊಡನೆಯೇ ಹೊರಟು, ಕ್ರಮಪ್ರಕಾರವಾಗಿ ಶವಸಂಸ್ಕಾರ ಮಾಡಿ ಬರಬೇಕು ......ಸಕ್ಕ, ನೀನಿವರಾ ಕಾರ್ಯಕ್ಕೆ ಅವಶ್ಯಕವಾದ ಸಾಧನ ಸೌಕರ್ಯಗಳನ್ನೊದವಿಸಿಕುಡವುದಲ್ಲದೆ, ನಿನ್ನ ಹಲವು ಮಂದಿ ಸೈನಿಕರೊಡನೆ ಇವರ ಮೇಲೆ ಕಾವಲಿದ್ದು, ಗತಶ್ರೀಮನ್ತರ ಶವಕ್ಕೆ ಆವ ವಿಧವಾದ ಅವಮಾನವೂ ಉಂಟಾಗದಂತೆ ನೋಡಿಕೊಳ್ಳುತ್ತಿರಬೇಕು.

ಸಕ್ಕ :—ಅಪ್ಪಣೆ.

ಚೆನ್ನ :—(ತಾನು ಬಿಸಾಡಿದ್ದ ಆ ರಕ್ತಾಕ್ತವಾದ ಬಟ್ಟೆಯನ್ನೆತ್ತಿಕೊಂಡು, ಅದರೊಳಗೆ ವಿಕ್ರಮರಾಯನ ಶಿರವನ್ನು ಸುತ್ತಿಕೊಳ್ಳುತ್ತ, ರಂಗನೊಡನೆ ಹೋಗುವನು.)

ಮಹಾಮಾತೃಶ್ರೀ :—(ಸ್ತಂಭಿತೆಯಾಗಿದ್ದು, ಮೆಲ್ಲನೆ ಧೀರ್ಘನಿಶ್ವಾಸವನ್ನು ಬಿಡುವಳು.)

ರಣಧೀರ :—............ಇದು ವೀರಮರಣವಲ್ಲ, ನಿರೀಶ.

ನಿರೀಶ :—ಮಹಾಸ್ವಾಮಿ, ಅದು ಪತಂಗದ ದುರದೃಷ್ಟ.

ಮಹಾಮಾತೃಶ್ರೀ : (ಎಚ್ಚೆತ್ತು) ವೀರಮರಣ !—ನನ್ನ ಕಂದನಿಗೆ, ಈ ದೆವ್ವನು ಸಾಧಿಸಿದ ವಿಷಚೂರ್ಣಪ್ರಯೋಗಕ್ಕೆ ಬಲಿಯಾದ ನನ್ನ ಪುಟ್ಟಸ್ವಾಮಿಗೆ ವೀರಮರಣವುಂಟಾಯ್ತೆ ? ಅಯ್ಯೋ ! ಅಯ್ಯೋ ! (ಗಳಗಳನೆ ಅಳುವಳು,)

ರಣಧೀರ :—(ಮೆಲ್ಲನೆ,) ಚಿಕ್ಕಮ್ಮಯ್ಯ !

ಮಹಾಮಾತೃಶ್ರೀ :—ಅಯ್ಯೋ ! (ಮೂರ್ಛಿತೆಯಾಗುವಳು.)

ಚೆಂದವ್ವೆ, ರುದ್ರವ್ವೆ : (ಬೇಗನೆ ಹೋಗಿ, ಮಹಾಮಾತೃಶ್ರೀಗೆ ಶೈತ್ಯೋಪಚಾರ ಮಾಡಲಾರಂಭಿಸುವರು.)

ರಣಧೀರ :—(ಖಿನ್ನನಾಗಿ, ಅವಾಙ್ಮುಖನಾಗಿದ್ದು,) ನಿರೀಶ, ನಮ್ಮ ಅನ್ತಃಪುರದವರು ಮಹಾಮಾತೃಶ್ರೀಯವರ ಪಾದಸೇವೆಗೆ ಈಗಳೇ ಇಲ್ಲಿಗೆ ಬರಬೇಕು.

ನಿರೀಶ :—ಅಹುದು, ಮಹಾಸ್ವಾಮಿ. ನಾವು ಮಲ್ಲಹನುಮನ ಬೆಂಬಲಕ್ಕೆ ಹೊರಡಬೇಕಾದ ಸಮಯವಾಯ್ತು.

ರಣಧೀರ :—(ವಿಜಯನಾರಸಿಂಹನನ್ನು ಬಿಚ್ಚಿ ಕಟಬನ್ಧದೊರೆಯಿಂದೆಳೆದುಕೊಳ್ಳುತ್ತ ನಿಷ್ಕ್ರಮಿಸುವನು.)

ಗಂಡುಸರೆಲ್ಲ :—(ರಣಧೀರನ ಹಿಂದೆ ನಡೆಯುವರು.)

ಮಹಾಮಾತೃಶ್ರೀ :—(ಕಿರಿದುಹೊತ್ತಿನ ಬಳಿಕ ತೆಪ್ಪತ್ತು, ಸುತ್ತ ನಿಟ್ಟಿಸುತ್ತಿದ್ದು, ಕ್ಷೀಣಸ್ವರದಿಂದ,) ರಣಧೀರನೆಲ್ಲಿ, ಚೆಂದವ್ವೆ ?

ಚೆಂದವ್ವೆ :—ಸೈನ್ಯದೊಡನೆ ಹೋಗಿದ್ದಾರೆ.

ಮಹಾಮಾತೃಶ್ರೀ :—(ನಿಟ್ಟುಸಿರ್ಗರೆದು,) ....ನಾಳೆ ಬೆಳಗಾಗುತ್ತಲೇ ನಾನು ಕಾಶಿಗೆ ಹೊರಡುವೆನು—ನೀವೂ ಬರುವಿರಷ್ಟೆ ?

ರುದ್ರವ್ವೆ :—ಬುದ್ಧಿಯವರು ಎಲ್ಲಿಗೆ ಹೋದರೂ, ಅಲ್ಲಿಗೆ ನಾವು ಬರುವೆವು.

ಚೆಂದವ್ವೆ :—ಆದರೆ ಹೊಸ ಮಹಾರಾಜರು—

ಮಹಾಮಾತೃಶ್ರೀ :—(ಕಣ್ಣೀರನ್ನೊರಸಿಕೊಂಡು,) ಅಹುದು, ಚೆಂದವ್ವೆ ! ದತ್ತಸ್ವೀಕಾರವೇನೂ ಆಗಬೇಕಾಗಿಲ್ಲ, ಆವಶ್ಯಕವಾದರೂ, ಆ ಶಾಸ್ತ್ರವು ನಾಳಿನ ದಿನವೇ ನಡೆದುತೀರಬೇಕು. ಆ ಬಳಿಕ ಶುಭ ಲಗ್ನವನ್ನು ನೋಡಿ, ಅವರು ಪಟ್ಟಾಭಿಷೇಕ ಮಾಡಿಕೊಳ್ಳಲಿ.

ಚೆಂದವ್ವೆ :—ಹಾಗಾಗುವುದೇ ?—ಅವರು ಒಪ್ಪುವರೆ ?

ಮಹಾಮಾತೃಶ್ರೀ :—(ಮೆಲ್ಲಗೆ,) ಇಲ್ಲ ... .ಅಹುದು. ನಾಳೆ ಶುದ್ಧ—ಬಿದಿಗೆ ; ಮಹಾದೇವನ ದಯೆಯಿಂದ ದಿವಸವು ಎರಡಕ್ಕೂ ಪ್ರಶಸ್ತವಾಗಿದ್ದರೆ !

(ಹೊರಗೆ) :—(ನಾಲ್ಕು ಫಿರಂಗಿಗಳು ಮೊಳಗುವುವು.)

ಅನುಬಂಧ

—o—

೧. "ಸಂಸ" = ಎ.ಎನ್. ಸಾಮಿ ವೆಂಕಟಾದ್ರಿ ಐಯರ್.

"ಸಂಸ *" — ಎಂಬುದು 'ವಿಗಡ ವಿಕ್ರಮರಾಯ' ಎಂಬ ಸ್ವತಂತ್ರ ಐತಿಹಾಸಿಕ ನಾಟಕವನ್ನು ಕನ್ನಡದಲ್ಲಿ ಬರೆದ ಕವಿ ತನ್ನ ಕೃತಿಗಳ ಸಂಬಂಧದಲ್ಲಿ ತಾನು ಬಳಸಿಕೊಂಡ ಒಂದು ಅಂಕಿತ. ಇವರಿಗೆ ನಾಮಕರಣವಾದಾಗ ಇಟ್ಟ ಹೆಸರು—'ವೆಂಕಟಾದ್ರಿ'. ಇವರನ್ನು ಮನೆಯಲ್ಲಿ ಬಳಕೆಯಿಂದ ಕರೆಯುತ್ತಿದ್ದ ಅಡ್ಡಹೆಸರು—'ಸಾಮಿ' ಇವರು ತಮ್ಮ ಹೆಸರನ್ನು **ಸಾಮಿ, ಸಾಮಿ ವೆಂಕಟಾದ್ರಿ, ಎ. ಎನ್. ಸಾಮಿ ವೆಂಕಟಾದ್ರಿ ಅಯರ್** ಎಂದು ಬೇರೆ ಬೇರೆ ಬಗೆಯಾಗಿ ಬರೆಯುತ್ತಿದ್ದುದೂ ಉಂಟು.

ಇದೇ ಕಳೆದ ಹೇವಿಳಂಬಿನಾಮ ಸಂವತ್ಸರದ ಪುಷ್ಯ ಬಹುಳ ಪಂಚಮಿ ಗುರುವಾರ ರಾತ್ರೆ ಕನ್ಯಾ ಲಗ್ನದಲ್ಲಿ (ಎಂದರೆ ೧೮೬೮ನೇ ಇಸವಿಯ ಜನವರಿ ೧೩) ಜನಿಸಿದ ಇವರ ಹುಟ್ಟೂರು ಮೈಸೂರು ಸಂಸ್ಥಾನದ ಯೆಳಂದೂರು ತಾಲ್ಲೂಕಿಗೆ ಸೇರಿದ ಅಗರವೆಂಬ ಗ್ರಾಮ. ಈ ಗ್ರಾಮದ ಆಚೆಯ ಸ್ವರ್ಣವತೀ ನದಿಯನ್ನುದಾಟಿದರೆ ಸಿಕ್ಕುವ ದಡವೇ ಆಗ ಸದ್ಯಕ್ಕೆ ಮದರಾಸಿಗೆ ಸೇರಿದ್ದ ಕೊಳ್ಳೇಗಾಲ.

---

*ಈ 'ಸಂಸ' ಎಂಬ ಪದಕ್ಕೆ ಏನು ಅರ್ಥವೋ ತಿಳಿಯದು. ಬಹುಶಃ ಏನು ಅರ್ಥವೂ ಇದ್ದಂತಿಲ್ಲ. ಸಂಸರನ್ನೇ ಒಮ್ಮೆ ಕೇಳಿದಾಗ ಅವರು ಹೀಗೆ ಹೇಳಿದರು : ಅವರು ಯಾವುದೋ ಒಂದು ಕೃತಿಯನ್ನು ಮೊದಲು ಅಚ್ಚಿಗೆ ಕೊಟ್ಟಾಗ, ತಮ್ಮ ಹೆಸರಿನ ಅಂಕಿತವನ್ನು 'ಕಂಸ' ಎಂದು ಬರೆದುಕೊಟ್ಟಿದ್ದರಂತೆ ; ಮೊಳೆ ಜೋಡಿಸುವವನು ತಪ್ಪು ಮಾಡಿ 'ಸಂಸ' ಎಂದು ಜೋಡಿಸಿದನಂತೆ ; ಇವರು ಅದನ್ನೇ ನಿಲ್ಲಿಸಿಕೊಂಡು, 'ಸಂಸ' ಎಂಬುದನ್ನೇ ತಮ್ಮ ಅಂಕಿತವಾಗಿ ಬಳಸುತ್ತ ಬಂದರಂತೆ. ಆದರೆ 'ಕಂಸ' ಎಂಬುದನ್ನಾದರೂ ಇವರು ಮೊದಲು ಏಕೆ ಅಂಕಿತವಾಗಿ ಇಟ್ಟುಕೊಂಡರೆಂದರೆ, ಅದೂ ತಿಳಿಯದು.

ಸಂಸರ ಪೂರ್ವಿಕರು ಅನೇಕ ತಲೆಮಾರುಗಳಿಂದ ಆಯುರ್ವೇದ ವಿದ್ಯೆಗೆ ಹೆಸರಾದ ಹಿರಿಯ ಮನೆತನದವರು. ಇವರ ತಂದೆಯವರಾದ ಬ್ರಹ್ಮಶ್ರೀ ಅಗರದ ನರಸಿಂಹ ಪಂಡಿತರಿಗೆ ಮೂವರು ಗಂಡು ಮಕ್ಕಳು, ಒಂದು ಹೆಣ್ಣು ಮಗು. ಈ ಮೂವರು ಗಂಡುಮಕ್ಕಳಲ್ಲಿ ಸಂಸರೇ ಕಡೆಯವರು.

ಸಂಸರು ಇನ್ನೂ ಬಾಲಕರಾಗಿದ್ದಾಗ ಅಗರದಲ್ಲಿ ಪ್ರೈಮರಿ ಶಾಲೆ ಕೂಡ ಇರಲಿಲ್ಲವಂತೆ. ಪೊಳೆಯಾಚೆಯ ಕೊಳ್ಳೇಗಾಲದ ಮಿಡ್ಲ್ ಸ್ಕೂಲಿನ ಸಂಸ್ಕೃತ ಪಂಡಿತರಾಗಿದ್ದ ಶ್ರೀ ಪಾಳ್ಯದ ಶ್ರೀಕಂಠಶಾಸ್ತ್ರಿಗಳಿಂದ ಇವರಿಗೆ ಅಕ್ಷರಾಭ್ಯಾಸವಾಯಿತು. ಅನಂತರ ಅದೇ ಗ್ರಾಮದಲ್ಲಿ ಪೋಸ್ಟ್ ಮಾಸ್ಟರಾಗಿದ್ದ ಶ್ರೀ ಶ್ರೀನಿವಾಸಾಚಾರ್ಯರೆಂಬವರೇ ಇವರಿಗೆ ಓದು ಬರಹ ಕಲಿಸಿದವರು. ಮುಂದೆ ಮಿಡ್ಲ್‌ಸ್ಕೂಲಿನ ವ್ಯಾಸಂಗ ಕೊಳ್ಳೇಗಾಲದ ಬೋರ್ಡ್ ಮಿಡ್ಲ್‌ಸ್ಕೂಲಲ್ಲಿ ನಡೆಯಿತು. ಅನಂತರ ಸಂಸರು ಮೈಸೂರಿನ ಮರಿಮಲ್ಲಪ್ಪನವರ ಹೈಸ್ಕೂಲಿಗೆ ಬಂದು ಸೇರಿದರು. ಅಲ್ಲಿಗೆ ಬಂದ ಬಳಿಕ, ೧೯೧೧ರಲ್ಲಿ ಎಸ್. ಎಸ್. ಎಲ್. ಸಿ.. ಪರೀಕ್ಷೆಗೆ ಕುಳಿತರು. ಆದರೆ ಉತ್ತೀರ್ಣರಾಗಲಿಲ್ಲ. ಇಲ್ಲಿಗೆ ಸಂಸರ ಶಾಲಾವ್ಯಾಸಂಗ ಕೊನೆಗಂಡಿತು. ಆಗ ಅವರಿಗೆ ಹದಿನಾರು ವರುಷ ವಯಸ್ಸು.

ಸಂಸರು ಮರಿಮಲ್ಲಪ್ಪನವರ ಹೈಸ್ಕೂಲಿಗೆ ಬಂದು ಸೇರಿದಾಗ ಅವರ ಹಿರಿಯ ಅಣ್ಣಂದಿರಾದ ಶ್ರೀ (ಡಾಕ್ಟರ್) ಎ. ಎನ್. ನರಸಿಂಹಯ್ಯನವರು ಅದೇ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಆಗ, ಸಂಸರು ತಮ್ಮ ಅಣ್ಣನವರ ಶಿಷ್ಯರಾಗಿ ವಿದ್ಯೆ ಕಲಿತಾಗ, ಶ್ರೀ ಬಿ. ಎಂ. ಸಿದ್ಧಲಿಂಗ ಶಾಸ್ತ್ರಿಗಳೆಂಬವರು ಅಲ್ಲಿ ಕನ್ನಡ ಪಂಡಿತರಾಗಿದ್ದರು. ಪ್ರಾಯಃ ಅಲ್ಲಿ ಬಿದ್ದ ಅಡಿಪಾಯ ಅಚ್ಚುಕಟ್ಟಾಗಿದ್ದುದರಿಂದಲೇ ಇರಬಹುದು, ೧೯೧೧ರಲ್ಲಿ ಎಸ್. ಎಸ್. ಎಲ್. ಸಿ., ಯಲ್ಲಿ ತೇರ್ಗಡೆಯಾಗದೆ ಹೈಸ್ಕೂಲನ್ನು ಬಿಟ್ಟ ಸಂಸರು, ಆಗ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದ ಶ್ರೀ ಕರಿಬಸಪ್ಪಶಾಸ್ತ್ರಿಗಳಲ್ಲಿ ಕನ್ನಡ ಪ್ರೌಢಗ್ರಂಥಗಳನ್ನು ವ್ಯಾಸಂಗ ಮಾಡಿ, ಕೇವಲ ಆರೆಂಟು ವರ್ಷಗಳೊಳಗಾಗಿ ತಮ್ಮ 'ವಿಗಡ

ವಿಕ್ರಮರಾಯ' ದಂತಹ ಅಪೂರ್ವವಾದ ಐತಿಹಾಸಿಕ ನಾಟಕಗಳನ್ನು ರಚಿಸುವುದಕ್ಕೆ ಬೇಕಾದ ಪ್ರೌಢಿಮೆಯನ್ನು ಪಡೆದು ಪ್ರಬುದ್ಧರಾದರು.

ಸಂಸರು ಹತ್ತಾರು ವರುಷಗಳ ಕಾಲ, ನಾಲ್ಕಾರು ಕಡೆ, ತಾವು ಕಲಿತ ಕನ್ನಡವನ್ನು ಅನೇಕ ವಿದ್ಯಾರ್ಥಿಗಳಿಗೆ ದಾನಮಾಡಿದ್ದಾರೆ. ಕೆಲವು ಕಾಲ ಅವರು ಹಾಸನಕ್ಕೆ ಸೇರಿದ ಹೆಬ್ಬಾಲೆ ಗ್ರಾಮದ ರೂರಲ್ ಎ. ವಿ. ಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ಕೆಲವು ವರುಷ ಮೈಸೂರಿನ ಶಾರದಾವಿಲಾಸ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದರು. ಮತ್ತೆ ಕೆಲವು ಕಾಲ ಮದರಾಸಿನ ಲಯೊಲಾ ಕಾಲೇಜಿನಲಿ ಕನ್ನಡ ಬೋಧಿಸುತ್ತಿದ್ದರು: ಮಂಗಳೂರಿನ ಸೇಯಿಂಟ್ ಎಲೋಸಿಯಸ್ ಕಾಲೇಜಿನಲ್ಲೂ ಕೆಲವು ಕಾಲ ಇದ್ದರೆಂದು ಕೇಳಿದ್ದೇನೆ.

ಆದರೆ ಏನೋ, ಏಕೋ, ಸಂಸರು ಬಹುದಿನ ಒಂದು ಕಡೆ ನಿಲ್ಲಲಿಲ್ಲ. ಒಮ್ಮೆ, ಕೂಲಿಕಾರನಾಗಿ ಹೋಗಿ ಕಾಂಚನ ಸಂಪಾದಿಸಿಕೊಂಡು ಬರುತ್ತೇನೆಂದು, ಪೆಸಿಫಿಕ್ ಸಾಗರದಲ್ಲಿರುವ ಫಿಜಿ ದ್ವೀಪಗಳಿಗೆ ಹೊರಟು ಹೋಗಿದ್ದರು. ಅಲ್ಲಿಗೆ ಹೋಗುವುದಕ್ಕೆ ಮುಂಚೆಯೋ, ಅಲ್ಲಿಂದ ಬಂದ ಮೇಲೆಯೋ (ಸರಿಯಾಗಿ ತಿಳಿಯದು) ಅಖಿಲಭಾರತವನ್ನೊಮ್ಮೆ ಸುತ್ತು ಹಾಕಿಕೊಂಡು, ೧೯೩೪ರ ವೇಳೆಗೆ ಕ್ವೆಟ್ಟಾ ನಗರಕ್ಕೆ ಬಂದು, ಅಲ್ಲಿಯ ಮಿಲಿಟರಿಯ ಕಛೇರಿಯಲ್ಲಿ ತಮಿಳು ಕಲಿಸುತ್ತ ನಿಂತರು.

ಕ್ವೆಟ್ಟಾದ ಭೂಕಂಪವಾದ ಮೇಲೆ ೧೯೩೬ರ ವೇಳೆಗೆ ಸಂಸರು ಮೈಸೂರಿಗೆ ಹಿಂದಿರುಗಿ ಬಂದರು. ಆ ವೇಳೆಗೆ, (ಎಲ್ಲಿ ಏನಾಗಿತ್ತೋ ಏನೋ, ಯಾರಿಗೂ ತಿಳಿಯದು: ಸಂಸರಾದರೂ ಅದರ ಬಗ್ಗೆ ಯಾರೊಡನೆಯೂ ಪ್ರಸ್ತಾಪಿಸುತ್ತಿರಲಿಲ್ಲ) ; ಆ ವೇಳೆಗೆ ಅವರಿಗೆ 'ನಾನೊಬ್ಬ ಕ್ರಾಂತಿಕಾರ, ಪೋಲೀಸಿನವರ ಕ್ರೂರ ಕಟಾಕ್ಷ ನನ್ನ ಕಡೆಗಾಗಿದೆ, ನನ್ನ ಸರ್ವನಾಶವನ್ನೂ ಸಾಧಿಸಲು ಇವರೆಲ್ಲ ಹಗಲಿರುಳೂ ಹೊಂಚುತ್ತಿದ್ದಾರೆ' ಎಂದು ಏಕೋ ಮನಸ್ಸಿಗೆ ಒಂದು ದುಸ್ಸಹವಾದ ಚಿಂತಾಭಾರ ಹತ್ತಿಬಿಟ್ಟಿತ್ತು. ಸುಮಾರು ಎರಡು ಮೂರು ವರುಷಗಳ ಕಾಲ ಇದೇ ಪೋಲೀಸು ಪೀಡನೆಯ ಭ್ರಮೆಯನ್ನು ಅತಿಯಾಗಿ ಅನುಭವಿಸಿಕೊಂಡು, ಯಾರಾರು ಏನೇನು ಧೈರ್ಯ ಹೇಳಿದರೂ ನಂಬದೆ, ಅದೇ ಕೊರಗಿನಿಂದ ಜೀವನದಲ್ಲಿ

ಅತಿ ಜುಗುಪ್ಸೆ ಹುಟ್ಟಿ, ಸಂಸರು ೧೪-೨-೩೯ರ ರಾತ್ರಿ ತಮ್ಮ ಕೈಯಾರ ತಾವೇ ಮಿತಿಮೀರಿ ವಿಷ ಕುಡಿದು, ತಮ್ಮ ಕೊಠಡಿಯಲ್ಲಿ ಕದವಿಕ್ಕಿಕೊಂಡು ಅಸ್ತವಾದರು. ಅವರು ಇಂತಹ ಅಪಮೃತ್ಯುವಿಗಾದರೆಂಬುದು ಕೂಡ ಒಂದು ವಾರದ ಅನಂತರ ತಿಳಿದು ಬಂದಿತು. ಅದೂ ಶವದ ದುರ್ಗಂಧ ಸಹಿಸಲು ಸಾಧ್ಯವಾಗದೆ ಹೋದಾಗ.

ಸಂಸರು ಮರಣ ಹೊಂದಿದಾಗ ಅವರಿಗೆ ಇನ್ನೂ ನಲವತ್ತೊಂದು ವಯಸ್ಸು, ಅಷ್ಟೆ.

೨. ಸಂಸರ ಕೃತಿಗಳು

ಸಂಸರ ಹೆಸರು ಮೊದಲು ತಿಳಿದದ್ದು— “ಪ್ರಬುದ್ಧ ಕರ್ಣಾಟಕ”ವು (ಸಂಪುಟ ೭-ಸಂಚಿಕೆ ೨, ೩, ೪) ೧೯೨೫-೨೬ರಲ್ಲಿ ಅವರ “ವಿಗಡ ವಿಕ್ರಮ ರಾಯ” ನಾಟಕವನ್ನು ಪ್ರಕಟಿಸಿದಾಗ. ಇದಾದ ಎರಡು ವರುಷಗಳ ಮೇಲೆ ೧೯೨೮ರಲ್ಲಿ ಅವರ ‘ಸಂಸಪದಂ’ ಎಂಬ ಕವಿ ಕಾವ್ಯಸ್ತವನರೂಪವಾದ ಪದ್ಯ ಸಂಗ್ರಹವು ಧಾರಾವಾಡದಲ್ಲಿ ಪ್ರಕಟವಾಯಿತು. ಅದೇ ಕಾಲದಲ್ಲಿ ‘ಶ್ರೀಮಂತೋದ್ಯಾನವರ್ಣನಂ’ ಎಂಬ ಇನ್ನೊಂದು ಕಾವ್ಯವೂ ಅಚ್ಚಾಯಿತಂತೆ. ಇದಕ್ಕೆ ಹಿಂದೆಯೇ ೧೯೨೧-೨೨ರಲ್ಲಿ ಅವರು ಬರೆದ ‘ಸುಗುಣಗಂಭೀರ’ ಎಂಬ ಇನ್ನೊಂದು ಐತಿಹಾಸಿಕ ನಾಟಕವು ೧೯೨೬ರ ವೇಳೆಗೆ ರಂಗಸ್ಥಳದಲ್ಲಿ ಪ್ರದರ್ಶಿತವಾಗಿ, ೧೯೩೩ರಲ್ಲಿ ಪುಸ್ತಕ ರೂಪವಾಗಿ ಹೊರಬಿದ್ದಿತು. ಇದರ ಅನಂತರ ೧೯೩೬ರ ‘ಕಥಾಂಜಲಿ’ ಮಾಸಪತ್ರಿಕೆಯ ಮೊದಲನೆಯ ಸಂಚಿಕೆಯಲ್ಲಿ ಅವರದೇ ‘ಬಿರುದಂತೆಂಬರ ಗಂಡ’ ಎಂಬ ಮತ್ತೊಂದು ಐತಿಹಾಸಿಕ ಏಕಾಂಕ ನಾಟಕ ಮುದ್ರಿತವಾಯಿತು. ಮೇಲೆ ಹೇಳಿರುವ ಐದು ಕೃತಿಗಳು ಅಚ್ಚಾಗಿರುವುದರ ಜೊತೆಗೆ ‘ಬೆಟ್ಟದರಸು’, ‘ಮಂತ್ರಶಕ್ತಿ’ ಮತ್ತು ‘ವಿಜಯನಾರಸಿಂಹ’ ಎಂಬ ಮೂರು ಐತಿಹಾಸಿಕ ನಾಟಕಗಳೂ ಇವೆ.

ಸಂಸರ ಹೆಸರಾಗಿ ನಮಗೆ ದೊರಕಿರುವ ಅವರ ಕೃತಿಗಳು ಅವರ ಒಟ್ಟು ರಚನೆಯಲ್ಲಿ ಒಂದು ಅಂಶ ಮಾತ್ರ. ಅವರ ‘ಈಶಪ್ರಕೋಪನ’

ಎಂಬ—ದೇವರನ್ನು ಮೂದಲಿಸಿ ಸಿಟ್ಟಿಗೇರಿಸಲು ಯತ್ನಿಸುವ—ವಾರ್ಧಕ ಷಟ್ಪದೀ ಕಾವ್ಯವನ್ನೂ, ಗದಾಯುದ್ಧದಲ್ಲಿ ಊರುಭಂಗವನ್ನು ಪಡೆದ ದುರ್ಯೋಧನನು ನರಕಕ್ಕೆ ಹೋಗಿ ಇದ್ದು ಮಾಡಿದುದನ್ನು ವ್ಯಾವರ್ಣಿಸುವ ಅವರ 'ನರಕ ದುರ್ಯೋಧನೀಯು' ಎಂಬ ಚಂಪೂಕಾವ್ಯವನ್ನೂ, 'ಅಚ್ಚುಂಬಶಕ' ವೇ ಮುಂತಾದ ಇತರ ಪದ್ಯಕಾವ್ಯಗಳ ಸವಿಯನ್ನೂ, ಕಂಡಕಂಡವಾಗಿಯಾದರೂ ಅವರ ಮುಖದಿಂದಲೇ, ಅವರ ಇಂಪಾದ ಗಂಭೀರವಾದ ವಾಣಿಯಿಂದಲೇ, ಅವರದೇ ಅರ್ಥವತ್ತಾದ ವ್ಯಾಖ್ಯಾನಗಳೊಡನೆ ಕೇಳಿದವರಿದ್ದಾರೆ. ಆದರೆ ಅದರದು ಒಂದು ಪಂಕ್ತಿಯೂ ಇನ್ನೂ ಇದುವರೆಗಾದರೂ ದೊರಕಿಲ್ಲ.

ಇದರಂತೆಯೇ ಅವರ ಇತರ ಗದ್ಯನಾಟಕಗಳ ಗತಿಯಾದರೂ, ಸಂಸರು ಮೈಸೂರಿನ ಅರಸರ ಚರಿತ್ರೆಯನ್ನು ಆಧರಿಸಿ ಇಪ್ಪತ್ತಮೂರು ನಾಟಕಗಳನ್ನು ಬರೆದಿದ್ದರೆಂದು ಅವರ ಬಾಯಿಂದಲೇ ಕೇಳಿದ್ದೇನೆ. ಅದರಲ್ಲಿ ಈಗ ನಮಗೆ ದೊರಕಿರುವುದು—ಅಚ್ಚಾದುದು ಮೂರು, ಹಸ್ತಪ್ರತಿಯಲ್ಲಿರುವುದು ಮೂರು. ಹಾಗಾದರೆ ಉಳಿದುವು ಏನಾದುವು? ಒಮ್ಮೆ ಧಾರವಾಡದಲ್ಲಿ ಯಾರೊಡನೆಯೋ ಜಗಳವಾಡಿಕೊಂಡು, ಯಾರ ಮೇಲಿನದೋ ಕ್ರೋಧಕ್ಕೆ ಕೆಲವು ನಾಟಕಗಳನ್ನು ಸುಟ್ಟುಬಿಟ್ಟರಂತೆ. ಮತ್ತೊಮ್ಮೆ, ಏನೋ ಮನಸು ತಿರುಗಿ, ಮತಾಂತರ ಹೊಂದಬೇಕೆಂದು ಇಚ್ಛೆಬಂದಾಗ, ಈಸಾಯಿ ಪಾದ್ರಿಯೊಬ್ಬನ ವಶಕ್ಕೆ ತನ್ನ ಹಸ್ತಪ್ರತಿಗಳ ಪೆಟ್ಟಿಗೆಯನ್ನು ನ್ಯಾಸವಾಗಿ ಕೊಟ್ಟಿದ್ದು, ಅದೂ ಕಳೆದುಹೋಯಿತಂತೆ. ಸಂಸರೊಡನೆ ನಾಲ್ಕು ದಿವಸ ಇದ್ದು, ಅವರ ಅಮಾನುಷವೆನಿಸುತ್ತಿದ್ದ, ಆ ಭೂತಶಕ್ತಿಯ ಆವೇಗದ ಪರಿಚಯವಾದವರಿಗೆ ಈ ಕೃತಿಗಳ ಸ್ತೋಮ ಸಹಜ ಎನ್ನಿಸುತ್ತದೆ.

ಸಂಸರ ಐತಿಹಾಸಿಕ ನಾಟಕಗಳೆಲ್ಲ—ನಮಗೆ ದೊರಕಿರುವವುಗಳನ್ನು ಪರೀಕ್ಷಿಸಿದರೆ-ಚರಿತ್ರೆಯ ಶಾಸನಗಳ ಕಣಕವನ್ನು ಹದವಾಗಿ ನಾದಿ, ಅದರಲ್ಲಿ ಪ್ರತಿಭೆಯ ಕಲ್ಪನೆಯ ಪೂರಣವನ್ನು ತುಂಬಿ ಪಕ್ವಗೊಳಿಸಿದ ಸಮರ್ಪಕವಾದ ಕೃತಿಗಳು. ಸಂಸರ ಈ ಕೃತಿಗಳ ರಚನೆಗೆ ಎಷ್ಟು ಅಭ್ಯಾಸ ಅನುವಾಗಿದೆ, ಎಷ್ಟು ವ್ಯಾಸಂಗ ವ್ಯಯವಾಗಿದೆ, ಅದರಿಂದ ಅವರ ಪ್ರತಿಭೆ ಎಷ್ಟು ಬಲಗೊಂಡಿದೆ, ಪುಟಗೊಂಡಿದೆ ಎಂಬುದನ್ನು ಚರಿತ್ರೆಯ, ಶಾಸನಗಳ ಪರಿಚಯ

ವಿರುವವರು ಗುರುತಿಸಿ ಮೆಚ್ಚಬಲ್ಲರು. ಇಷ್ಟಾದರೂ ಆ ಪಾಂಡಿತ್ಯ ನಾಟಕಗಳಲ್ಲಿ ಪ್ರದರ್ಶನವಾಗಿಲ್ಲ ಎಂಬುದನ್ನೂ ಮೆಚ್ಚಬಲ್ಲರು. ಚರಿತ್ರೆಯ ಯಥಾರ್ಥತೆಯನ್ನು ಕಾಪಾಡುವುದಕ್ಕಾಗಿ ಸಂಸರು ಪ್ರೀತಿಗೆ ಮಾತ್ರ ಸಾಧ್ಯವಾದ ಶ್ರಮವನ್ನು ನಿರ್ವಂಚನೆಯಿಂದ ವಹಿಸಿ, ಚರಿತ್ರೆಯ ಕರ್ಬೊನ್ನನ್ನು ಕಾವ್ಯದ ಚೊಂಬೊನ್ನಾಗಿ ಮಾರ್ಪಡಿಸಿದ್ದಾರೆ. ರಸಗರ್ಭವಾದ ಪೌರಾಣಿಕ ವಸ್ತುಗಳನ್ನಾಯ್ದುಕೊಂಡು ಈ ಶತಮಾನದಲ್ಲಿ ಕೈಲಾಸಂ ಏನು ಉತ್ತಮವಾದ ಕೃಷಿ ಮಾಡಿದರೋ ಅಂಥದೇ ಕೃಷಿಯನ್ನು ಸಂಸರು ಮೈಸೂರು ಇತಿಹಾಸದ ವಸ್ತುವಿನಲ್ಲಿ ಸಾಧಿಸಿದರು ಎಂದರೆ ತಪ್ಪಲ್ಲ.

ಸಂಸರ ಆಳವಾದ ಹಳಗನ್ನಡ ಪಾಂಡಿತ್ಯಕ್ಕೂ ನಿಷ್ಕೃಷ್ಟವಾದ ಸಂಸ್ಕೃತ ಜ್ಞಾನಕ್ಕೂ ಅವರ ದೊರಕಿರುವ ಕೃತಿಗಳು ಸಾಕಷ್ಟು ಸಾಕ್ಷಿ. ಸ್ವಂತ ಕೃಷಿಯಿಂದ ಸಂಪಾದಿಸಿಕೊಂಡ ಅವರ ಇಂಗ್ಲಿಷು ತಿಳುವಳಿಕೆಯಾದರೂ ತಳ್ಳಿ ಹಾಕುವಂತಹದಲ್ಲ. ಇಂಗ್ಲಿಷಿನಲ್ಲೂ ಅವರು ಒಂದು ಕಾದಂಬರಿ ಬರೆದಿದ್ದರಂತೆ. 'Soul' ಅನ್ನು ಕುರಿತ ಒಂದು 'Problem Play' ಬರೆಯಬೇಕೆಂದೂ ಅವರು ತೊಡಗಿದ್ದರು.

ಸಂಸರ ಸಾಹಿತ್ಯಚರ್ಯೆ ಒಂದು ಮುಖವಾಗಿರಲಿಲ್ಲ. ಹಲವು ಮುಖವಾಗಿತ್ತು.

೩. ಮೈಸೂರಿನ ಒಡೆಯರು.

ಮೈಸೂರಿನ ಅರಸರ ಮೂಲಪುರುಷರಾದ ಚಂದ್ರವಂಶದ **ಯದುರಾಯರು** ಉತ್ತರದ ದ್ವಾರಕಾನಗರ ಪ್ರಾಂತ್ಯದಿಂದ ದಕ್ಷಿಣಕ್ಕೆ ಬಂದವರು. ತಮ್ಮ ತಮ್ಮಂದಿರಾದ ಕೃಷ್ಣರಾಯರೊಡನೆ ವಿಂಧ್ಯವಾಸಿನೀ ಅಮ್ಮನವರ ದರ್ಶನಕ್ಕೆ ಬಂದಿದ್ದ ಇವರು, ಅದೇ ಅಮ್ಮನವರ ಪ್ರೇರಣೆಯಿಂದ ಇನ್ನೂ ದಕ್ಷಿಣಕ್ಕೆ ನಡೆದು, ಈಗಿನ ಮೈಸೂರಿನ ಪಕ್ಕದಲ್ಲಿರುವ ಚಾಮುಂಡಿಬೆಟ್ಟವೆಂಬ ಮಹಾಬಲಾದ್ರಿಯಲ್ಲಿ ಶ್ರೀ ಚಾಮುಂಡೇಶ್ವರೀ ಅಮ್ಮನವರನ್ನೂ ಪೂಜಿಸಿ, ಆಗಿನ ಮಯಿಸೂರನ್ನು ಮುಟ್ಟಿದರು. ಅದೇ ಕಾಲಾದಲ್ಲಿ ಅಲ್ಲಿನ ದೊರೆಗಳಾದ ಚಾಮರಾಜರೆಂಬುವರು ಗಂಡು ಮಕ್ಕಳಿಲ್ಲದೆ ಕಾಲಾಧೀನರಾಗಲು ಅನಾಯಕವಾದ ಆ ರಾಜ್ಯವನ್ನು ತನ್ನ ವಶಪಡಿಸಿಕೊಳ್ಳಬೇಕೆಂದು ಮಾರ

ನಾಯಕನೆಂಬ ಸೇನಾಪತಿಯು ಸ್ವಾಮಿದ್ರೋಹವನ್ನು ಬಗೆದಾಗ, ಅನಾಥೆಯಾದ ಆ ಚಾಮರಾಜರಪತ್ನಿಯು ಸಹಾಯಕ್ಕೆ ಶ್ರೀ ಯದುರಾಯರು ಮುಂದೆ ಬಂದು, ಮಾರನಾಯಕನನ್ನು ವಧಿಸಿದರು. ರಾಜ್ಯವು ಹೀಗೆ ನಿಷ್ಕಂಟಕವಾದ ವಾರ್ತೆಯನ್ನು ಕೇಳಿ, ಆ ರಾಜಪತ್ನಿಯು ಯದುರಾಯರನ್ನು ಕರೆದು ಮನ್ನಿಸಿ, ತಮ್ಮ ಕುಮಾರಿತಿಯಾದ ದೇವಾಜಮ್ಮಣ್ಣಿಯವರನ್ನು ಅವರಿಗೆ ಮದುವೆ ಮಾಡಿಕೊಟ್ಟು, ಮೈಸೂರಿನ ಅರಸುತನವನ್ನೂ ಅವರಿಗೇ ಒಪ್ಪಿಸಿ, ಪಟ್ಟಾಭಿಷೇಕವನ್ನು ನೆರವೇರಿಸಿದರು. ಈ ಯದುರಾಯರು ಕ್ರಿ.ಶ. 1399 ರಿಂದ 1423ರವರೆಗೆ ಆಳಿದರು.

ಯದುರಾಯರ ಅನಂತರ ಪಟ್ಟಕ್ಕೆ ಬಂದವರು ಅವರ ಮಕ್ಕಳು–**ಹಿರಿಯ ಬೆಟ್ಟದ ಚಾಮರಾಜ ಒಡೆಯರು.** ಇವರ ಆಳಿಕೆ 1423–1459.

ಹಿರಿಯ ಬೆಟ್ಟದ ಚಾಮರಾಜ ಒಡೆಯರ ಬಳಿಕ ಪಟ್ಟಕ್ಕೆ ಬಂದವರು ಅವರ ಮಕ್ಕಳು-**ಮೊದಲನೆಯ ತಿಮ್ಮರಾಜ ಒಡೆಯರು.** ಇವರ ಆಳಿಕೆ 1459-1478.

ಮೊದಲನೆಯ ತಿಮ್ಮರಾಜ ಒಡೆಯರಾದ ಮೇಲೆ ಪಟ್ಟಕ್ಕೆ ಬಂದವರು ಅವರ ಮಕ್ಕಳು-**ಹಿರಿಯ ಚಾಮರಾಜರಸ ಒಡೆಯರು.** ಇವರ ಆಳಿಕೆ 1478–1513.

ಹಿರಿಯ ಚಾಮರಾಜರಸ ಒಡೆಯರ ಅನಂತರ ಪಟ್ಟಕ್ಕೆ ಬಂದವರು ಅವರ ಮಕ್ಕಳು— **ಹಿರಿಯ ಬೆಟ್ಟದ ಚಾಮರಾಜ ಒಡೆಯರು.** ಇವರ ಆಳಿಕೆ 1513-1533.

ಈ ಬೆಟ್ಟದ ಚಾಮರಾಜ ಒಡೆಯರ ಬಳಿಕ ಪಟ್ಟಕ್ಕೆ ಬಂದವರು ಅವರ ಮಕ್ಕಳಲ್ಲಿ ಮೊದಲನೆಯವರಾದ **ಎರಡನೆಯ ತಿಮ್ಮರಾಜ ಒಡೆಯರು.** ಇವರ ಆಳಿಕೆ 1553-1572. ಇವರ ಕಾಲದಲ್ಲಿಯೇ ಮೈಸೂರರಸರಿಗೆ 'ಬಿರುದಂತೆಂಬರ ಗಂಡ' ಎಂಬ ಬಿರುದು ಬಂದದ್ದು.

ಎರಡನೆಯ ತಿಮ್ಮರಾಜ ಒಡೆಯರಾದ ಮೇಲೆ ಪಟ್ಟಕ್ಕೆ ಬಂದವರು ಬೆಟ್ಟದ ಚಾಮರಾಜ ಒಡೆಯರ ಮೂರನೆಯ ಮಕ್ಕಳಾದ **ಬೋಳ ಚಾಮ**

ರಾಜ ಒಡೆಯರು. ಇವರು ಒಮ್ಮೆ ಚಾಮುಂಡೇಶ್ವರೀ ದರ್ಶನಕ್ಕಾಗಿ ಬೆಟ್ಟಕ್ಕೆ ಚಿತ್ತೈಸುತ್ತಿದ್ದಾಗ, ಮಂಡೆಯ ಮೇಲೆ ಸಿಡಿಲು ಬಿದ್ದು, ತಲೆಯ ಕೂದಲು ಉರಿದುಹೋದರೂ ಶರೀರ ಸ್ವಲ್ಪವೂ ಕೊಂಕದಿತ್ತು. ಅದರಿಂದ ಇವರಿಗೆ ಈ ಹೆಸರಾಯಿತು. ಇವರು ರಾಮರಾಜನ ದಳವಾಯಿಯಾದ ತೊರೆಮಾವಿನಹಳ್ಳಿ ವೆಂಕಟಾದ್ರಿನಾಯಕನನ್ನು ಯುದ್ಧದಲ್ಲಿ ಜಯಿಸಿ, ಅವನ 'ಸುಗುಣಗಂಭೀರ' ಎಂಬ ಬಿರುದನ್ನು ಕಿತ್ತುಕೊಂಡರು. ಅವರ ಆಳಿಕೆ 1572—1576.

ಈ ಬೋಳ ಚಾಮರಾಜ ಒಡೆಯರಿಗೆ ಮೂವರು ಗಂಡುಮಕ್ಕಳು—ಬೆಟ್ಟದ ಚಾಮರಾಜ ಒಡೆಯರು, ಮೊದಲನೆಯ ರಾಜ ಒಡೆಯರು, ಮತ್ತು ಮುಪ್ಪಿನ ದೇವರಾಜ ಒಡೆಯರು.* ಇವರಲ್ಲಿ ಹಿರಿಯರಾದ ಬೆಟ್ಟದ ಚಾಮರಾಜ ಒಡೆಯರು 1576—1578 ರಾಜ್ಯಭಾರ ಮಾಡಿ ಅನಂತರ ವೈರಾಗ್ಯಭಾಗ್ಯವನ್ನು ಅಪೇಕ್ಷಿಸಿ, ತಮ್ಮ ತಮ್ಮಂದಿರಾದ ಮೊದಲನೆಯ ರಾಜ ಒಡೆಯರಿಗೆ ಪಟ್ಟಾಭಿಷೇಕ ಮಾಡಿಸಿ, ತಾವು ಪತ್ನೀ ಪುತ್ರರೊಡನೆ ಗುಂಡ್ಲು ತೆರಕಣಾಂಬಿ ಎಂಬ ಗ್ರಾಮಕ್ಕೆ ತೆರಳಿದರು.

ಮೊದಲನೆಯ ರಾಜ ಒಡೆಯರು 1578—1617ರ ವರೆಗೆ ರಾಜ್ಯವಾಳಿದರು. ಇದನ್ನು ತಮ್ಮ ಆಳ್ವಿಕೆಯಲ್ಲಿ ಅನೇಕ ದೇಶಗಳನ್ನು ಜಯಿಸಿ ರಾಜ್ಯವನ್ನು ವಿಸ್ತರಿಸಿದರು. ಇವರ ಕಾಲದಲ್ಲಿಯೇ ನವರಾತ್ರಿಯ ಉತ್ಸವಕ್ರಮ ಮೊದಲು ಏರ್ಪಾಡಾದುದು. ಇವರ ಕಾಲದಲ್ಲಿಯೇ ವಿಸ್ತಾರವಾದ ರಾಜ್ಯವನ್ನು ವಿಚಕ್ಷಣೆಯಿಂದ ಉಳಿಸಿ ಬೆಳಸಿಕೊಳ್ಳುವುದಕ್ಕೆ ಸೇನೆ ಅವಶ್ಯಕವೆಂದೂ, ಸೇನೆಯ ವಿಚಾರಣೆಗೆ ದಕ್ಷನಾದ ದಳಪತಿ ಅಗತ್ಯವೆಂದೂ ಕಂಡುಬಂದದ್ದು. ಹಿಂದೆ ಮಾರನಾಯಕನು ಸ್ವಾಮಿದ್ರೋಹವನ್ನು ಬಗೆದ ಮೇಲೆ ಮೈಸೂರಿನ ಯಾವ ಅರಸೂ ತಮ್ಮ ರಾಜ್ಯದ ಆಳಿಕೆಯನ್ನು ಪರರಿಗೆ ಒಪ್ಪಿಸಿರಲಿಲ್ಲ. ಆದರೆ ರಾಜ ಒಡೆಯರ ಕಾಲದಲ್ಲಿ ರಾಜ್ಯವು ರಾಜರು ತಾವೇ ನೋಡಿಕೊಳ್ಳುವುದಕ್ಕೆ ಸಾಧ್ಯವಾಗದಂತೆ ಬೆಳೆದುಹೋಗಿತ್ತಾದಕಾರಣ

---

* ಈ ಮುಪ್ಪಿನ ದೇವರಾಜ ಒಡೆಯರ ಮಕ್ಕಳಾದ ದೊಡ್ಡ ದೇವರಾಜ ಒಡೆಯರು ರಣಧೀರರ ಅನಂತರ ಪಟ್ಟಕ್ಕೆ ಬಂದರು. ಇವರ ಆಳಿಕೆ 1659—1673 ಈ ನಾಟಕದ ಪುಟ 74ರಲ್ಲಿ ಇವರ ಬಗ್ಗೆ ಉಲ್ಲೇಖವಿದೆ.

'ದಳವಾಯಿ'ಗಳನ್ನು ಪುನಃ ನೇಮಿಸಿಕೊಳ್ಳಬೇಕಾಯಿತು. ಈ 'ದಳವಾಯಿ'ಗಳು ಕೇವಲ ದಳಕ್ಕೆ ಬಾಯಿ ಆಗಿದ್ದುದು ಅಷ್ಟೇ ಅಲ್ಲದೆ ಮಂತ್ರಿ ಮುಖ್ಯರೂ ಆಗಿದ್ದರು.

ಹೀಗೆ ರಾಜ ಒಡೆಯರ ಕಾಲದಲ್ಲಿ ನೇಮಕನಾದ ಮೊದಲನೆಯ ದಳವಾಯಿ ಅವರ ಸೋದರಳಿಯನಾದ ಕಳಲೆ ಕರಿಕಾಲು ಮಲ್ಲರಾಜಯ್ಯ ಎಂಬುವನು. ಆದರೆ ಇವನು ರಾಜರು ತನಗೆ ಒಪ್ಪಿಸಿದ ಕರ್ತವ್ಯವನ್ನು ನಡೆಸದೆ, ಕೆಲವೇ ದಿನಗಳಲ್ಲಿ ದಳವಾಯಿತನವ ಉಂಗುರವನ್ನು ಹಿಂದಕ್ಕೆ ಕಳುಹಿಸಿಬಿಡಲು, ರಾಜ ಒಡೆಯರು ತಮ್ಮ ಅಣ್ಣಂದಿರಾದ ಬೆಟ್ಟದ ಚಾಮರಾಜ ಒಡೆಯರ ಮಕ್ಕಳು 'ಬೆಟ್ಟದರಸು' ಎಂಬುವರನ್ನು ಕರಸಿ, ಅವರಿಗೆ ದಳವಾಯಿತನವನ್ನು ನೇಮಿಸಿದರು. ಈ ಬೆಟ್ಟದರಸಿನವರು ನಿಷ್ಕಪಟವಾದ ಸ್ವಾಮಿಭಕ್ತಿಯಿಂದ ಪ್ರಭುಸೇವೆಯನ್ನು ಸಲ್ಲಿಸಿದರು.

ಮೊದಲನೆಯ ರಾಜ ಒಡೆಯರು ಸ್ವರ್ಗಸ್ಥರಾದ ಮೇಲೆ ಅವರ ಹಿರಿಯ ಕುಮಾರರಾದ ನರಸರಾಜ ಒಡೆಯರ ಮಕ್ಕಳು **ಚಾಮರಾಜ ಒಡೆಯರು** ಪಟ್ಟಕ್ಕೆ ಬಂದರು. ಇವರ ಆಳಿಕೆ 1617—1637. ಇವರ ಆಳಿಕೆಯ ಪ್ರಾರಂಭದಲ್ಲಿ ಅರಮನೆಯಲ್ಲಿ ಹಿಂದಿನಿಂದಲೂ ಸೇವೆ ಮಾಡುತ್ತಿದ್ದ ಹಲವರ ಕುತಂತ್ರದಿಂದ ಚಾಮರಾಜ ಒಡೆಯರಿಗೂ ದಳವಾಯಿ ಬೆಟ್ಟದರಸರಿಗೂ

'ಧೊರೆಗಳ (ಚಾಮರಾಜ ಒಡೆಯರ) ಸನ್ನಿಧಿಯಲ್ಲಿ ಚಾಕರಿಮಾಡುವ ಊಳಿಗದವರು ಮೊದಲಾದವರು ಧೊರೆಗಳಿಗೆ ಬಾಲ್ಯವಾದ್ದರಿಂದ ವಿದ್ಯಾಬುದ್ಧಿಗಳನ್ನು ಕಲಿತುಕೊಳ್ಳುವುದಕ್ಕೆ ಅವಕಾಶಕೊಡದೆ, ಆಟಪಾಟಗಳಲ್ಲಿ ಬುದ್ಧಿಯನ್ನು ಉಂಟುಮಾಡಿ ಸ್ತ್ರೀಲೋಲಾಪ್ತಿಯಲ್ಲಿಯೇ ಇರುವಂತೆ ಮಾಡಿದರು. ಧೊರೆಗಳಿಗೆ ಪಾಠ ಹೇಳಿಕೊಡುತ್ತಿದ್ದ ರಾಮಸೋಮಯಾಜಿಯ ಮಗ ರಂಗನಾಥಧೀಕ್ಷಿತನೂ ಔಷಧವನ್ನು ತಂದುಕೊಡುತ್ತಿದ್ದ ಜೈನರ ಬೊಮ್ಮರಸಪಂಡಿತನೂ ಇದಕ್ಕೆ ಸಹಾಯಕರಾಗಿ ಇದ್ದರು. ಇವರ ದುರ್ನಡತೆಗಳನ್ನು ನೋಡಿ, ದಳವಾಯಿ ಬೆಟ್ಟದ ಅರಸಿನವರು ಇವರೆಲ್ಲರನ್ನೂ ಕರೆಯಿಸಿ, ನೀವು ಇನ್ನುಮೇಲೆ ನಿಮ್ಮ ಕೆಲಸಗಳನ್ನು ನೋಡಬೇಡಿರೆಂದು ಕಟ್ಟುಮಾಡಿದರು. (ವಂಶರತ್ನಾಕರ. ಪುಟ 54) 'ಇವರ ಆಳಿಕೆಯಲ್ಲಿ ನಿಯೋಗಿತನವನ್ನು ಮಾಡಿದವನು ಜೈನರ ಬೊಮ್ಮರಸಪಂಡಿತ' (ವಂಶರತ್ನಾಕರ. ಪುಟ 62.) ಈ ನಾಟಕದ ಪುಟ 18ರಲ್ಲಿ ಇವರ ಬಗ್ಗೆ ಉಲ್ಲೇಖವಿದೆ.

ಮನಸ್ತಾಪ ಬಂದು, ದಳವಾಯಿತನ ಬೆಟ್ಟದರಸರಿಗೆ ತಪ್ಪಿ, ಕೆಲಕೆಲವು ಕಾಲ ಬನ್ನೂರು ಲಿಂಗಣ್ಣ, ಬಸವಲಿಂಗಣ್ಣ, ವಿಕ್ರಮರಾಯ ಎಂಬ ಈ ಮೂವರ ಕೈಗೆ ಬಂದಿತು.

ಚಾಮರಾಜ ಒಡೆಯರು ಸ್ವರ್ಗಸ್ಥರಾದ ಮೇಲೆ ಪಟ್ಟಕ್ಕೆ ಬಂದವರು ಇಮ್ಮಡಿ ರಾಜ ಒಡೆಯರು. ಇವರು ಮೊದಲನೆಯ ರಾಜ ಒಡೆಯರ ಮಕ್ಕಳು. ತಂದೆ ತೀರಿಕೊಳ್ಳುವ ಕಾಲದಲ್ಲಿ ಇನ್ನೂ ತಾಯ ಗರ್ಭದಲ್ಲಿಯೇ ಇದ್ದವರು. ಇವರ ಆಳಿಕೆ 1637-1638. ಇವರಾದರೂ ಮೊದಲನೆಯ ರಾಜ ಒಡೆಯರ ಮೊಮ್ಮಕ್ಕಳಾದ ಚಾಮರಾಜ ಒಡೆಯರಂತೆಯೇ ದಳವಾಯಿ ವಿಕ್ರಮರಾಯನು ಮಾಡಿಸಿದ ಮಂತ್ರ ಮಾಟಗಳಿಗೂ ವಿಷಪ್ರಯೋಗಕ್ಕೂ ಬಲಿಯಾದರು.

ಇಮ್ಮಡಿ ರಾಜ ಒಡೆಯರಾದ ಬಳಿಕ ಪಟ್ಟಕ್ಕೆ ಬಂದವರು ತೆರಕಣಾಂಬಿಯಲ್ಲಿ ಹೋಗಿ ನೆಲಸಿದ್ದ ಬೆಟ್ಟದ ಚಾಮರಾಜ ಒಡೆಯರ ಮಕ್ಕಳಾದ ರಣಧೀರ ಕಂಠೀರವ ನರಸರಾಜ ಒಡೆಯರು. ಇಮ್ಮಡಿ ರಾಜ ಒಡೆಯರ ಮರಣಾನಂತರ ಅವರ ಮಾತೃಶ್ರೀಯವರಾದ ಯಡವನಹಳ್ಳಿ ತಿಮ್ಮಾಜಮ್ಮಣ್ಣಿಯವರು, ಈ ನರಸರಾಜ ಒಡೆಯರನ್ನು ದತ್ತು ಸ್ವೀಕಾರಮಾಡಿದರು. ಈ ರಾಜರ ಆಳಿಕೆ 1638-1659. ಇವರ ಆಳಿಕೆಯ ಪ್ರಾರಂಭದಲ್ಲಿ ವಿಕ್ರಮರಾಯನೇ ದಳವಾಯಿಯಾಗಿದ್ದರೂ, ಅವನ ಹಿಂದಿನ ಗೆಯ್ಮೆಗಳು ಒಂದೂ ಇವರೆದುರು ಸಾಗದೆ, ಬಹುಬೇಗನೆ ಅವನು ದಳವಾಯಿತನದಿಂದ ಚ್ಯುತನಾದನು.

ಪ್ರಕೃತದ ಈ 'ವಿಗಡ ವಿಕ್ರಮರಾಯ' ನಾಟಕವು ಇಮ್ಮಡಿ ರಾಜ ಒಡೆಯರ ಕಡೆಗಾಲವನ್ನೂ ರಣಧೀರ ಕಂಠೀರವರರ ಮೈಸೂರು ಪ್ರವೇಶವನ್ನೂ ದಳವಾಯಿ ವಿಕ್ರಮರಾಯನ ಸ್ಥಾನಚ್ಯುತಿಯನ್ನೂ ಕುರಿತಿರುವ ಕಾರಣ ಮೈಸೂರು ಒಡೆಯರ ಕತೆಯನ್ನು ಇಲ್ಲಿಗೆ ನಿಲ್ಲಿಸಿದರೆ ಸಾಕು.

೪. ಇಮ್ಮಡಿ ರಾಜ ಒಡೆಯರು.

ದಳವಾಯಿ ವಿಕ್ರಮರಾಯನ ಅಧಿಕಾರಲಾಲಸೆಗೆ ಬಲಿಯಾದ—

"ಈ ಇಮ್ಮಡಿ ರಾಜ ಒಡೆಯರವರು ತಮ್ಮ ತಂದೆಗಳೂ ತಾತಂದಿರೂ ಮಾಡಿದ್ದ ದೇವದಾಯ ಬ್ರಹ್ಮದಾಯ ಮುಂತಾದ ಧರ್ಮಕಾರ್ಯಗಳನ್ನು ಚೆನ್ನಾಗಿ ಪರಿಪಾಲನೆ ಮಾಡುತ್ತಾ, ದುಷ್ಟನಿಗ್ರಹ ಶಿಷ್ಟಪರಿಪಾಲನವನ್ನು ತಮ್ಮ ತಂದೆಗಳಿಗಿಂತ ಇಮ್ಮಡಿಯಾಗಿ ವಿಚಾರಣೆ ಮಾಡಿಕೊಂಡು ಬಂದದ್ದರಿಂದ, ಇವರಿಗೆ ಇಮ್ಮಡಿ ರಾಜ ಒಡೆಯರೆಂಬ ಹೆಸರು ಪ್ರಸಿದ್ಧವಾಯಿತು. ಇವರು ನವರಾತ್ರಿಯ ಉತ್ಸವಕಾಲದಲ್ಲಿ ತಮ್ಮ ತಂದೆಗಳು ಹೊಗಳಿಸಿಕೊಳ್ಳುತ್ತಿದ್ದ ಬಿರುದಾವಳಿಗಳಿಂದ ಹೊಗಳಿಸಿಕೊಳ್ಳುತ್ತಿದ್ದುದಲ್ಲದೆ 'ವೀರಶೂರ ಮಲೆವರ ಗಂಡ ಸಂಗೀತಲೋಲ ಸಾಹಿತ್ಯರತ್ನಾಕರ ಅಭಿಯಪ್ರತಾಪಾಧೀಶ್ವರ' ಎಂಬ ಬಿರುದುಗಳಿಂದ ಹೊಗಳಿಸಿಕೊಳ್ಳುತ್ತಾ ವಸಂತೋತ್ಸವ, ನಾಟಕಶಾಲೆ, ಸಾರೀಮೇಳ, ಗಂಧರ್ವವೀಣೆ ಮೊದಲಾದ ಮಹಾರಾಜವೈಭವದಿಂದ ಸತ್ಕೀರ್ತಿಯನ್ನು ಪಡೆದು........ಪರಲೋಕಗತರಾದರು."

ಈ ಇಮ್ಮಡಿ ರಾಜ ಒಡೆಯರ ಆದ್ಯಂತ ವಯಸ್ಸು 20 ವರ್ಷ 9 ತಿಂಗಳು 26 ದಿನ. ಇವರ ಆಳಿಕೆ 1 ವರ್ಷ 5 ತಿಂಗಳು.

—(ವಂಶರತ್ನಾಕರ. ಪುಟ 63)

ಈ ರಾಜರ ಆಳಿಕೆ ಇಷ್ಟುಬೇಗ ಏಕೆ ಕೊನೆಗಂಡಿತು, ಹೇಗೆ ಕೊನೆಗಂಡಿತು ಎಂಬುದನ್ನು ವಿಲ್ಕ್ಸ್ ಚರಿತ್ರಕಾರನು ಹೀಗೆ ಹೇಳಿದ್ದಾನೆ:

"The posthumous son of Raja Wadeyar ascended the Musnud in his 20th year on the death of his nephew Cham Raj, and was poisoned at the expiration of a year and a half by his Dulwoy (general and minister) Veecrama Raj. It is probable that the meagre annals of the preceding reign would furnish more of incident, if we had access to the *genuine* history of the Dulwoys during that period; but not

only the fact which has just been stated, and the assassination of Veecrama under the succeeding Raja, are altogether omitted in the family history of the Dulwoys, but even the name of this personage has been obliterated from their annals.

"The preceding Raja had succeeded to the Government at the early age of fifteen. We may conjecture from subsequent events that this minister had found him of an easy temper. And in the mode so familiar to Indian courts of modern and ancient date, had, by inciting and corrupting his natural propensities, plunged him into habits of low and licentious indolence; and thus kept him through life in a state of perpetual tutelage. *Immadee Raj* was probably found to possess too much of the energy of his grand-father, and was therefore speedily removed."

—(Wilks, P. 47)

೫. ರಣಧೀರ ಕಂಠೀರವ ನರಸರಾಜ ಒಡೆಯರು.

ಇಮ್ಮಡಿ ರಾಜ ಒಡೆಯರು ಕಾಲವಾದ ಮೇಲೆ—

"ರಾಜ ಒಡೆಯರ ಧರ್ಮಪತ್ನಿಯವರಾದ ಯಡವನಹಳ್ಳೀ ತಿಮ್ಮಾಜಮ್ಮಣ್ಣಿಯವರು ತೆರಕಣಾಂಬಿಯಲ್ಲಿದ್ದ ತಮ್ಮ ಬಾವಂದಿರಾದ ಬೆಟ್ಟದ ಚಾಮರಾಜ ಒಡೆಯರವರ ೨ನೇ ಪುತ್ರರಾದ ಕಂಠೀರವ ನರಸರಾಜ ಒಡೆಯರವರನ್ನು ರಾಜಮರ್ಯಾದೆಯಿಂದ ಕರೆಯಿಸಿ ಶ್ರೀರಂಗಪಟ್ಟಣದಲ್ಲಿ ಪಟ್ಟಾಭಿಷೇಕ ಮಾಡಿಸಿದರು."

"ಇವರು ಪಟ್ಟವಾಗುವುದಕ್ಕೆ ಮುಂಚಿತವಾಗಿ ತಮ್ಮ ತಂದೆಗಳಾದ ಬೆಟ್ಟದ ಚಾಮರಾಜ ಒಡೆಯರವರ ಸಮೀಪದಲ್ಲಿ ತೆರಕಣಾಂಬಿಯಲ್ಲಿ ಇದ್ದರು. ಆ ಕಾಲದಲ್ಲಿ ಒಬ್ಬ ಬ್ರಾಹ್ಮಣನು ರಾಮೇಶ್ವರದ ಯಾತ್ರೆಮಾಡಿಕೊಂಡು ಬಂದು, ಈ ಕಂಠೀರವ ನರಸರಾಜ ಒಡೆಯರಿಗೆ ಫಲಮಂತ್ರಾಕ್ಷತೆಯನ್ನು ಒಪ್ಪಿಸಿ, 'ತಿರುಚನಾಪಳ್ಳಿಯಲ್ಲಿ ಮಹಾಪರಾಕ್ರಮಶಾಲಿಯಾದ ಶೂರನಾದ ಒಬ್ಬ ಜಟ್ಟಿಯು ತನ್ನ ಸಂಗಡ ಯಾರೂ ಕಾಳಗವನ್ನು ಕಾಯುವವರು ಇಲ್ಲ ವೆಂದು, ತನ್ನ ದಟ್ಟೀ ಚಲ್ಲಣಗಳನ್ನು ಆ ವೂರಿನ ಕೋಟೇ ಬಾಗಿಲಿಗೆ ಕಟ್ಟಿದರೆ ಸರ್ವಜನರೂ ತನ್ನ ಕಾಲಕೆಳಗೆ ಸಂಚಾರಮಾಡುವಂತೆ ಆಗುವದೆಂದು ದುರ ಹಂಕಾರದಿಂದ ಅರಸನ ಅನುಮತಿಯಿಂದ ಅವುಗಳನ್ನು ಕಟ್ಟಿದ್ದಾನೆ. ಆ ವೂರಿನ ಅರಸು ಬ್ರಾಹ್ಮಣರು ಮಾತ್ರ ಮತ್ತೊಂದು ಬಾಗಿಲಲ್ಲಿ ಸಂಚಾರ ಮಾಡುವಂತೆಯೂ, ಆ ಬಾಗಿಲಲ್ಲಿ ಮಹಾಶೂರರು ಮೊದಲಾದ ಸಕಲ ಜನರೂ ಸಂಚಾರಮಾಡುವಂತೆಯೂ, ನೇಮಕಮಾಡಿ ಇದ್ದಾನೆ' ಎಂದು ಹೇಳಿದನು. ಆ ಮಾತನ್ನು ಕೇಳಿ ಈ ಕಂಠೀರವ ನರಸರಾಜ ಒಡೆಯರವರು ಜಟ್ಟೀ ವೇಷವನ್ನು ಧರಿಸಿ, ಜನರು ಅರಿಯದಂತೆ ಆ ಬ್ರಾಹ್ಮಣನನ್ನು ಕರೆದು ಕೊಂಡು ಹೋಗಿ, ಆ ತಿರುಚನಾಪಳ್ಳಿಯು ಕೋಟೇಬಾಗಿಲಿಗೆ ಕಟ್ಟಿರುವ ದಟ್ಟೀಚಲ್ಲಣಗಳನ್ನು ತಮ್ಮ ಕಡೆಯ ಆಳಿನ ಕೈಕೋಲಿನಿಂದ ತೆಗೆಯಿಸಿ, ಅದೇ ಬಾಗಿಲಲ್ಲಿ ಕೋಟೆಯೊಳಕ್ಕೆ ಪ್ರವೇಶಮಾಡಿದರು. ಈ ವರ್ತಮಾನ ವನ್ನು ಕೇಳಿದ ತಿರುಚನಾಪಳ್ಳಿಯು ಅರಸು ಇವರನ್ನು ಕರೆಯಿಸಿ, ಸನ್ಮಾನ ಮಾಡಿ ಇರಿಸಿಕೊಂಡಿದ್ದು, ಒಂದಾನೊಂದು ದಿನ ತನ್ನಲ್ಲಿದ್ದ ಸರ್ವಜನ ರನ್ನೂ ಕರೆಯಿಸಿ, ಸಭೆಮಾಡಿ, ತಾನು ಉಪ್ಪರಿಗೇಮೇಲೆ ಕುಳಿತುಕೊಂಡು ತನ್ನಲ್ಲಿದ್ದ ಜಟ್ಟಿಗೂ ವೇಷಧಾರಿಗಳಾಗಿ ಬಂದು ಇದ್ದ ಕಂಠೀರವ ನರಸರಾಜ ಒಡೆಯರವರಿಗೂ ಕಾಳಗ ಬಿಡಿಸಿದನು. ಆಗ ವಜ್ರಮುಷ್ಟಿಗಳನ್ನು ಹಿಡಿದು ಇಬ್ಬರೂ ಕಾಳಗ ಮಾಡುವ ಸಮಯದಲ್ಲಿ ಜಟ್ಟೀವೇಷವನ್ನು ಧರಿಸಿರುವ ಈ ಕಂಠೀರವ ನರಸರಾಜ ಒಡೆಯರವರು ಜನರು ಅರಿಯದಂತೆ ಪೂರ್ವದಲ್ಲಿ ಸೊಂಟದಲ್ಲಿ ಕಟ್ಟಿ ಇದ್ದ ವಿಜಯನಾರಸಿಂಹನೆಂಬ ಕತ್ತಿಯಿಂದ ಈ ಜಟ್ಟಿ ಯನ್ನು ತಮ್ಮ ಸಾಧಕ ಹಸ್ತಲಾಘವ ಚಮತ್ಕಾರದಿಂದ ಕೊರಳನ್ನು ಕುಯಿದು ಆ ಹೆಣದ ಮುಂದೆ ಸುಮ್ಮನೆ ನಿಂತುಕೊಂಡರು. ಇದನ್ನು

ತಿಳಿಯದೆ ಆ ತಿರುಚನಾಪಳ್ಳಿಯ ಅರಸು ಯಾತಕ್ಕೆ ಸುಮ್ಮನೆ ನಿಂತು ಇದ್ದೀರಿ ಎಂಬುದಾಗಿ ಕೇಳಲು, ಕಂಠೀರವ ನರಸರಾಜ ಒಡೆಯರವರು ತಮ್ಮ ಎಡದ ಹಸ್ತದಲ್ಲಿದ್ದ ಬೆತ್ತದಿಂದ ಎದುರಾಳಿಯ ಮುಖವನ್ನು ತಿವಿದರು. ಆಗ ಆ ಜಟ್ಟಿಯ ತಲೆಯು ಕೆಳಕ್ಕೆ ಬಿದ್ದು ಕುಣಿದಾಡಲು, ಈ ಜಟ್ಟೀ ಕಾಳಗವನ್ನು ನೋಡುವುದಕ್ಕೆ ಬಂದಿದ್ದ ಜನರೆಲ್ಲರೂ ಇವರ ಹಸ್ತಲಾಘವ ಚಮತ್ಕಾರವನ್ನೂ ಇವರ ಸಾಹಸ ಪರಾಕ್ರಮಗಳನ್ನೂ ನೋಡಿ, ಆಶ್ಚರ್ಯ ಪಡುತ್ತಾ ಇವರನ್ನು ಕೊಂಡಾಡುತ್ತಿದ್ದರು. ಇದನ್ನು ಕಂಡು ಆ ತಿರುಚನಾ ಪಳ್ಳಿಯ ಅರಸು ಇವರಿಗೆ ಬಹಳ ಸನ್ಮಾನಗಳನ್ನು ಮಾಡಬೇಕೆಂದು ಯೋಚಿಸುತ್ತಿದ್ದನು. ಇವರು ಆ ಅರಸಿನ ಮುಖಾಭಾವವನ್ನೂ ಅವನು ಸ್ತೋತ್ರ ಮಾಡುತ್ತಿರುವ ಅಭಿಪ್ರಾಯವನ್ನೂ ತಿಳಿದು, ಈ ಪಾಳ್ಯಗಾರನಿಂದ ಜಟ್ಟಿಯಂತೆ ಸನ್ಮಾನಮಾಡಿಸಿಕೊಳ್ಳುವುದು ಅಯುಕ್ತವೆಂದು ಎಣಿಸಿ, ನಾಳೇ ದಿನ ಬರುತ್ತೇನೆಂದೂ ಆ ಅರಸಿನೊಡನೆ ಹೇಳಿ, ಆ ದಿನ ರಾತ್ರಿ ಜನರು ಅರಿಯದಂತೆ ಆವೂರ ಕೋಟೆಬಾಗಲಿಗೆ, ಮಹಿಸೂರ ಸಂಸ್ಥಾನದಿಂದ ಯಾರೋ ಬಂದು ಇಂಥಾ ಪರಾಕ್ರಮವನ್ನು ತೋರಿಸಿದರೆಂದು ಸಕಲರಿಗೂ ತಿಳಿಯುವಂತೆ ಚೀಟಿಯನ್ನು ಬರೆದು ಕಟ್ಟಿ, ತಾವು ಬ್ರಾಹ್ಮಣ ಸಮೇತರಾಗಿ ತೆರಕಣಾಂಬಿಗೆ ಬಂದು ಸೇರಿದರು. ಹೀಗೆ ಬರುವಾಗ ದಾರಿಯಲ್ಲಿ ಒಂದು ಬಳಪದ ಕಲ್ಲಿನ ಕಂಭವನ್ನು ಕಂಡು ಅದನ್ನು ತಮ್ಮ ಭುಜಬಲ ಪರಾಕ್ರಮ ಬುದ್ಧಿ ಚಮತ್ಕಾರಗಳಿಂದ ಕತ್ತಿಯಿಂದ ಎರಡು ತುಂಡುಮಾಡಿದರು.

“ಕಂಠೀರವ ನರಸರಾಜ ಒಡೆಯರವರು ಪಟ್ಟಾಭಿಷಿಕ್ತರಾಗಿ ಸುಖದಿಂದ ಪೃಥ್ವೀಸಾಮ್ರಾಜ್ಯವನ್ನು ಮಾಡುತ್ತಾ ಇರುವ ಸಮಯದಲ್ಲಿ ಪೂರ್ವದಲ್ಲಿ ಅಧಿಕಾರವನ್ನು ಮಾಡುತ್ತಿದ್ದ ಜನರನ್ನು ಕರೆಯಿಸಿ, ಸೀಮೆಯ ಆದಾಯ ವೆಚ್ಚದ ಲೆಕ್ಕವನ್ನೂ, ಬೊಕ್ಕಸ ಮುಂತಾದವುಗಳ ಲೆಕ್ಕವನ್ನೂ, ಕರಣೀಕರ ಮುಖಾಂತರ ವಿಚಾರಣೆ ಮಾಡಿ, ಸಂಸ್ಥಾನಕ್ಕೆ ಕೂಡಿ ಬರುವಂತೆ ಅಧಿಕಾರಮಾಡಿದ ಜನರ ಶೀಲಸ್ವಭಾವಗಳನ್ನು ತಿಳಿದು, ಅವರನ್ನು ಆಯಾ ಅಧಿಕಾರಗಳಲ್ಲಿ ನೇಮಿಸಿದರು.

“ಒಂದಾನೊಂದು ದಿನ ಧೊರೆಗಳು ತಮಗೆ ಆಪ್ತರಾದ ಜನರನ್ನು ಕರೆಯಿಸಿ ‘ಪೂರ್ವದಲ್ಲಿ ಧೊರೆತನ ಮಾಡುತ್ತಿದ್ದ ನಮ್ಮ ತಮ್ಮಂದಿರಾದ

ಇಮ್ಮಡಿ ರಾಜ ಒಡೆಯರವರು ೨೧ನೇ ವರ್ಷದಲ್ಲಿ ಯಾವ ಉಪದ್ರವದಿಂದ ತೀರಿಹೋದರು ? ಇದಕ್ಕೆ ಏನಾದರೂ ನಿಮಿತ್ತ ಉಂಟೋ ?' ಎಂಬುದಾಗಿ ಕೇಳಿದರು. 'ಅವರಿಗೆ ದೇಹಕ್ಕೆ ಆಯಾಸವಾಗಿ ಇರುವ ಕಾಲದಲ್ಲಿ ದಳವಾಯಿ ವಿಕ್ರಮರಾಯರು ವೈದ್ಯನಿಂದ ವಿಷಚೂರ್ಣಪ್ರಯೋಗವನ್ನು ಮಾಡಿಸಿದ್ದರಿಂದ ತೀರಿಹೋದರೆಂಬ ವರ್ತಮಾನವನ್ನು ಕೇಳಿ ಇದ್ದೇವೆ' ಎಂದು ಅವರು ತಿಳಿಸಿದರು. ಅನಂತರದಲ್ಲಿ ಕಂಠೀರವ ನರಸರಾಜ ಒಡೆಯರವರು ಅಂತಃಪುರಕ್ಕೆ ಹೋಗಿ ವಿಚಾರಿಸುವಲ್ಲಿ ಹೀಗೆ ನಡೆದದ್ದು ಯಾಥಾರ್ಥವೆಂದು ಅವರು ತಿಳಿಸಿದರು. ಆಗ ದಳವಾಯಿ ವಿಕ್ರಮರಾಯರನ್ನೂ ವೈದ್ಯನನ್ನೂ ಕರೆಯಿಸಿ ಕೇಳಲು, ಅವರು ತಾವು ಹಾಗೆ ಮಾಡಿದ್ದು ಉಂಟು ಎಂದು ಒಪ್ಪಿಕೊಂಡರು. ಮಹಾರಾಜದ್ರೋಹವನ್ನು ಮಾಡಿದವರು ಇಂಥಾ ಅಧಿಕಾರದಲ್ಲಿ ಇರಬಾರದೆಂದು ತಿಳಿದು, ಕಂಠೀರವ ನರಸರಾಜ ಒಡೆಯರವರು ಅವರಿಗೆ ದಳವಾಯಿತನದ ಅಧಿಕಾರವನ್ನು ತೆಗೆದು, ಅವರಿಗೆ ಸಹಾಯಕರಾಗಿ ಇದ್ದ ಜನರೆಲ್ಲರಿಗೂ ತಮ್ಮ ತಂದೆಗಳಾದ ಬೆಟ್ಟದ ಚಾಮರಾಜ ಒಡೆಯರವರ ಅನುಮತಿಯಿಂದ ಪ್ರಾಣಾಂತ ಶಿಕ್ಷೆಯನ್ನು ಮಾಡಿಸಿದರು. ಅನಂತರದಲ್ಲಿ ತಿಮ್ಮಪ್ಪನಾಯಕನೆಂಬುವನಿಗೆ ದಳವಾಯಿತನವು ನೇಮಕವಾಯಿತು.

—(ವಂಶರತ್ನಾಕರ ಪುಟ 65-67)

ವಂಶರತ್ನಾಕರ, ವಂಶಾವಳಿ ಎರಡರಲ್ಲಿಯೂ ಮೇಲೆ ಹೇಳಿರುವಂತೆಯೇ ಇರುವುದಾದರೂ ವಿಲ್ಕ್ಸ್ ಚರಿತ್ರಕಾರನು ಹೇಳಿರುವುದು ಇದರಿಂದ ಭಿನ್ನವಾಗಿದೆ : ಕಂಠೀರವ ನರಸರಾಜ ಒಡೆಯರನ್ನು ವಿಕ್ರಮರಾಯನೇ ಪಟ್ಟಕ್ಕೆ 'ಆಯ್ದು' ಕರೆಸಿಕೊಂಡನೆಂದೂ, ಅವರು ಮೈಸೂರಿಗೆ ಬಂದಾಗ ಅವರನ್ನು ಉಪೇಕ್ಷಿಸಿ ಅಲಕ್ಷ್ಯಮಾಡಿದನೆಂದೂ, ಅಷ್ಟರಲ್ಲಿ ಆ ದಳವಾಯಿಯ ರಾಜದ್ರೋಹವು ಪ್ರಕಟವಾಗಿ ಅವನ ಸಂಹಾರವಾಯಿತೆಂದೂ, ಅದರ ಮಾರನೆಯ ದಿವಸವೇ ಕಂಠೀರವ ನರಸರಾಜ ಒಡಯರಿಗೆ ಪಟ್ಟಾಭಿಷೇಕವಾಯಿತೆಂದೂ ವಿಲ್ಕ್ಸ್ ಹೇಳುತ್ತಾನೆ.

ಕಂಠೀರವ ನರಸರಾಜ ಒಡೆಯರ ತಿರುಚನಾಪಳ್ಳಿಯ ಸಾಹಸವನ್ನು ವರ್ಣಿಸಿಯಾದ ಮೇಲೆ ಆತನು ಹೀಗೆ ಬರೆಯುತ್ತಾನೆ :—

"Such was the character of the man whom an usurping minister had the audacity to *select* for his nominal master.

"On his arrival at Mysoor, where it was still the practice to instal the Rajas, the minister ordered that he should be lodged in an exterior apartment ; and assigning to him a few personal attendants, announced, in a manner sufficiently intelligible, the condition to which he was destined by departing on a tour of the neighbouring districts, without going through the form of installing him, or even the decent observance of paying his personal respects. During the tour it was reported to the minister that the Raja appeared to be dissatisfied, and would probably attepmt to recover his independence :–'Let him take care,' said the minister, negligently, 'and remember that I have not yet installed him.'

"The murder of Immadee Raja, and the facts which have just been stated, constitute the grounds of the conjecture which has been hazarded regarding the condition of the two preceding Rajas; and the open and contemptuous arrogance of the minister's demeanor on the present occasion seems to furnish abundant proof of an absolute usurpation.

"During the absence of the minister, two of the attendants appointed to wait on the Raja elect secretly unfolded to him the history of the murder of his predecessor, and offered their services to dispatch the usurper; this was accordingly effected on the very night subsequent to his arrival at Mysoor, after he had gone through the form of paying a visit of ceremony to the Raja.

"The details of this transaction has been preserved in several manuscripts. The two attendants (peons, or foot-soldiers) scaled the walls of the minister's court-yard after dark, and laid in wait for an opportunity to effect their purpose. Shortly afterwards the minister appeared, preceded by a torch-bearer, passing towards a detached apartment. The associates first killed the torch-bearer, and the light happened to be entirely extinguished. 'Who are you?' said the minister. 'Your enemy!' replied one of the peons; and made a blow. The minister, however, closed with him, and being the more powerful man, threw him to the ground, and held him by the throat, in which situation he called out for aid. The night was sovery dark that his companion was afraid to strike at random. 'Are you uppermost or undermost?' Undermost.

cried the half-strangled peon, and this information enabled his associate to strike the fatal blow.

"Canterava Narasa Raj was installed on the following day, and in two days afterwards proceeded to the seat of Government at Seringapatam."

-(Wilks P. 49-50)

ಈ ಅರಸರ ಆದ್ಯಂತ ವಯಸ್ಸು 44 ವರ್ಷ 3 ತಿಂಗಳು 10 ದಿನ ಇವರ ಆಳಿಕೆಯ ಕಾಲ 20 ವರ್ಷ 9 ತಿಂಗಳು 21 ದಿನ.

೬: ದಳವಾಯಿ ವಿಕ್ರಮರಾಯ

ಈ ವಿಕ್ರಮರಾಯನೂ ಇವನಿಗೆ ಮೊದಲು ಮೊದಲನೇ ರಾಜ ಒಡೆಯರ ಕಾಲದಲ್ಲಿ ಹೆಸರಾಂತ ದಳವಾಯಿಯಾಗಿದ್ದ ಬೆಟ್ಟದರಸುವೂ ಇಬ್ಬರೂ ಮೊದಲನೇ ರಾಜ ಒಡೆಯರ ಅಣ್ಣಂದಿರಾದ ಬೆಟ್ಟದ ಚಾಮರಾಜ ಒಡೆಯರ ಗಾಂಧರ್ವಪುತ್ರರು, ಎಂದರೆ ಬಂಗಾರದವರ ಮಕ್ಕಳು.

ಮೊದಲನೇ ರಾಜ ಒಡೆಯರಾದ ಬಳಿಕ ಅವರ ಮೊಮ್ಮಕ್ಕಳು ಚಾಮರಾಜ ಒಡೆಯರು ಪಟ್ಟಕ್ಕೆ ಬಂದಮೇಲೆ ಬೆಟ್ಟದರಸಿನವರು, ಬನ್ನೂರು ಲಿಂಗಣ್ಣ, ಬಸವಲಿಂಗಣ್ಣ—ಈ ಮೂವರು ದಳವಾಯಿಪದವನ್ನು ವಹಿಸಿದ ಮೇಲೆ, ಅದೇ ಆಳಿಕೆಯಲ್ಲಿ ವಿಕ್ರಮರಾಯನು ನಾಲ್ಕನೆಯ ದಳವಾಯಿಯಾದನು.

ಈ ಆಳಿಕೆಯಲ್ಲಿ ವಿಕ್ರಮರಾಯನು "ಚನ್ನಪಟ್ಟಣವನ್ನೂ ನಾಗಮಂಗಲವನ್ನೂ ಬೆಳ್ಳೂರನ್ನೂ ಸಹ ಯುದ್ಧದಲ್ಲಿ ಅಲ್ಲಿನ ಪಾಳ್ಯಗಾರರನ್ನೂ ಜಯಿಸಿ ಕಟ್ಟಿಕೊಂಡ"ನೆಂದು "ವಂಶರತ್ನಾಕರ"ವು (ಪುಟ 59) ಹೇಳುತ್ತದೆ.

ಇದೇ ಆಳಿಕೆಯಲ್ಲಿ "ಭಾವಸಂವತ್ಸರದ ಮಾಘ ಶುದ್ಧ ೧೫ ಗುರುವಾರದಲ್ಲಿ ಮಹಿಶೂರ ಬೆಟ್ಟ ಚಾಮರಾಜ ಒಡೆಯರವರ ಕುಮಾರರಾದ ದಳವಾಯಿ ವಿಕ್ರಮರಾಯರು ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯವರಿಗೆ

ವಂಶರತ್ನಾಕರ. ಪುಟ ೬೨ ವಿಕ್ರಮರಾಯನ ತಾಯಿಯ ಹೆಸರು ಮುದ್ದಾಜಮ್ಮಯ್ಯ, (ವಂಶಾವಳಿ ಪುಟ ೫೬)

ಸಂಕ್ರಾಂತಿ ಉತ್ಸವ ಮೊದಲಾದ ಉತ್ಸವಗಳು ನಡೆಯುವುದಕ್ಕೆ ಕಪಿಲಾ ನದಿಯ ತೀರದಲ್ಲಿ ಮಂಟಪವನ್ನೂ ಅನೇಕ ವೃಕ್ಷಗಳಿಂದ ನಿಬಿಡವಾದ ವನವನ್ನೂ ಮಾಡಿಸಿದರು. ಶ್ರೀಕಂಠೇಶ್ವರನ ಹೊರಪ್ರಾಕಾರದಲ್ಲಿ ಸರ್ವಜನರೂ ಆಶ್ಚರ್ಯಪಡುವಂತೆ ಶಿಲೆಯಿಂದ ಒಂದು ದೊಡ್ಡ ವೃಷಭವನ್ನು ಮಾಡಿಸಿ ಅವರ ಪೀಠದಲ್ಲಿ ಸ್ವನಾಮಾಂಕಿತವಾಗಿ ಶಾಸನವನ್ನು ಪ್ರತಿಷ್ಠೆಮಾಡಿ ಇದ್ದಾರೆ"

-(ವಂಶರತ್ನಾಕರ. ಪುಟ ೬೦-೬೧)

ವಿಕ್ರಮರಾಯನು ಈ ಆಳಿಕೆಯಲ್ಲಿ 7 ವರ್ಷ 1 ತಿಂಗಳು 3 ದಿವಸ ದಳವಾಯಿತನ ಮಾಡಿದನು. ಅನಂತರ ಬಂದ ಇಮ್ಮಡಿರಾಜ ಒಡೆಯರು ಆಳಿದಷ್ಟು ಕಾಲವೂ-ಎಂದರೆ 1 ವರ್ಷ 5 ತಿಂಗಳು-ಅವರ ದಳವಾಯಿಯಾಗಿದ್ದು, "ಶಾ. ಶಕ 1560ನೇ ಈಶ್ವರ ಸಂವತ್ಸರದಲ್ಲಿ ಅರಕಲಗೂಡಿಗೆ ಹೋಗಿ, ಅಲ್ಲಿಗೆ ಮುತ್ತಿಗೆ ಹಾಕಿ, ಅಲ್ಲಿನ ಪಾಳ್ಯಗಾರ ಕೃಷ್ಣಪ್ಪನಾಯಕನನ್ನು ಜಯಿಸಿ, ಅವನಲ್ಲಿದ್ದ ಗಜಾಶ್ವ ದ್ರವ್ಯ ಮುಂತಾದ ಸಕಲ ಪದಾರ್ಥಗಳನ್ನೂ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಬಂದ"ನೆಂದು 'ವಂಶರತ್ನಾಕರ'ವು (ಪುಟ 63) ತಿಳಿಸುತ್ತದೆ. ಇಮ್ಮಡಿ ರಾಜ ಒಡೆಯರು ಕಾಲವಾದ ಮೇಲೆ, ರಣಧೀರ ಕಂಠೀರವ ನರಸರಾಜ ಒಡೆಯರ ಆಳಿಕೆಯಲ್ಲಿ ವಿಕ್ರಮರಾಯನ ದಳವಾಯಿತನ ನಡೆದದ್ದು ಕೇವಲ 28 ದಿವಸಗಳು ಮಾತ್ರ.

-(ವಂಶರತ್ನಾಕರ ಪುಟ 91)

೭. "ವಿಗಡ ವಿಕ್ರಮ ಚರಿತ".

ಮೇಲೆ ಉದ್ಧರಿಸಿರುವ ಮೂಲಗಳ * ಆಧಾರದಿಂದ ಸಂಸರ ಪ್ರತಿಕಲ್ಪನಾ ಸಾಮರ್ಥ್ಯವು ಎಂತಹ ನಾಟಕವನ್ನು ಸೃಷ್ಟಿಸಿದೆಯೆಂಬುದನ್ನು ಎರಡನ್ನೂ

---

೧. ಮಹಿಶೂರ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರ-೧೮೮೭.

೨. ಮೈಸೂರು ಸಂಸ್ಥಾನದ ಪ್ರಭುಗಳು ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ-೧-೧೯೧೬.

3. Historical Sketches of the South of India, in an attempt to trace the HISTORY OF MYSORE by LIEUT, COLONEL MARK WILKS. Vol. 1 1810.

ಅವಲೋಕಿಸಿದವರು ತಿಳಿಯಬಲ್ಲರು. ಇಲ್ಲಿ ಕಾಣಿಸಿರುವ ಮೂಲಗಳನ್ನು ಮಾತ್ರವಲ್ಲದೆ, ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇನ್ನೂ ಅಚ್ಚಾಗದ ಕಯ್ಬರಹದ ಹಲವು ಕಡತಗಳನ್ನೂ ಸಂಸರು ಪರಿಶೀಲಿಸಿದ್ದರಂತೆ. ಅವುಗಳ ಪರಿಚಯು ನಮಗಿಲ್ಲ.

ದಳವಾಯಿ ವಿಕ್ರಮರಾಯನ ಬಗೆಗೆ ತಾವು ಕಂಡುಕೊಂಡುದನ್ನು ಸಂಸರು 'ವಿಗಡ ವಿಕ್ರಮರಾಯ'ದಲ್ಲಿ ಮಾತ್ರವಲ್ಲದೆ ಇನ್ನೂ ಒಂದೆರಡು ನಾಟಕಗಳಲ್ಲಿ ಚಿತ್ರಿಸಿರುವಂತಿದೆ. ಅವುಗಳಲ್ಲಿ ಒಂದಾದ 'ಬೆಟ್ಟದರಸು' ಎಂಬ ನಾಟಿಕದಲ್ಲಿ ವಿಕ್ರಮರಾಯನು ಚಾಮರಾಜ ಒಡೆಯರ ದಳವಾಯಿಯಾಗಿದ್ದ ಬೆಟ್ಟದರಸಿನ ಸ್ಥಾನಭ್ರಷ್ಟತೆಯನ್ನು ಸಾಧಿಸಿ, ಬನ್ನೂರು ಲಿಂಗಣ್ಣ ಬಸವ ಲಿಂಗಣ್ಣನವರ ಮೂಲಕ ಮೈಸೂರು ರಾಜ್ಯದ ಅಧಿಕಾರ ಸೂತ್ರಗಳನ್ನು ಕೈವಶಪಡಿಸಿಕೊಂಡ ಪ್ರವೇಶಚಿತ್ರವಿದೆ. ಈ 'ವಿಗಡ ವಿಕ್ರಮರಾಯ'ದಲ್ಲಿ ವಿಕ್ರಮರಾಯನ ದಳವಾಯಿತನದ ಕೊನೆಗಾಲದ ಚಿತ್ರವಿದೆ. ಇವನ ಆಪ್ತೋಪಜೀವಿಯಾಗಿದ್ದ ತುಂಗರಾಯನ ಕಡೆಗಾಲವನ್ನು ಕುರಿತು ಸಂಸರು "ತುಂಗ ನಿರ್ಯಾತನ" ಎಂಬ ನಾಟಕವನ್ನು ಬರೆದಿದ್ದರಂತೆ. ಇಷ್ಟು ಬರೆದವರು "ಬೆಟ್ಟದರಸು" ನಾಟಕದ ಕಾಲಕ್ಕೂ 'ವಿಗಡ ವಿಕ್ರಮರಾಯ' ನಾಟಕದ ಕಾಲಕ್ಕೂ ನಡುವೆ ಕಳೆದ ಏಳೂ ಚಿಲ್ಲರೆ ವರ್ಷಗಳಲ್ಲಿ ದಳವಾಯಿ ವಿಕ್ರಮರಾಯನು ಏನುಮಾಡಿದನೆಂಬುದನ್ನು ಚಿತ್ರಿಸುವ ಇನ್ನೊಂದು ನಾಟಕವನ್ನು ಬರೆದಿರಲಾರರೇ—ಎಂದು ಎನ್ನಿಸುತ್ತದೆ. ಆದರೆ ನಿಶ್ಚಯವಾಗಿ ಏನನ್ನೂ ಹೇಳುವಂತಿಲ್ಲ.

ವಿಕ್ರಮರಾಯನಿಗೆ ಸಂಬಂಧಿಸಿದಂತೆ ದೊರಕಿರುವ ಈ ಎರಡು ನಾಟಕಗಳಲ್ಲಿ ಸಂಸರು ತಾವು ಕಂಡ ವಿಗಡ ವಿಕ್ರಮನನ್ನು ಹೇಗೆ ಚಿತ್ರಿಸಿರುವರೆಂಬುದು ಈ ಅನುಬಂಧಕ್ಕೆ ಪ್ರಸ್ತುತವಾಗಲಾರದೆಂದು ಅದನ್ನು "ಸಂಸರು ವಿಗಡ ವಿಕ್ರಮ ಚರಿತ" ಎಂಬ ಪ್ರತ್ಯೇಕ ಪುಸ್ತಕಕ್ಕೆ ಉಳಿಸಿ ಇಟ್ಟಿದ್ದೇನೆ.

Vijaya Evening College Library
Bangalore-560 004.

Call No:

Author : ಸಂಸ

Title : ವಿಗಡ ವಿಕ್ರಮರಾಯ

Signature	Borrowing Date
T.V. Mohan Babu.	

ವಿಜಯ ಸಂಜೆ ಕಾಲೇಜು ಗ್ರಂಥಾಲಯ

ಆರ್.ವಿ. ರಸ್ತೆ, ಬಸವನಗುಡಿ,

ಬೆಂಗಳೂರು - 560 004.

ಸಂಸ

Title ವಿಗಡ ವಿಕ್ರಮರಾಯ

ACCN. NO. 6998

ಬೆಲೆ : ಎಂಟು ರೂಪಾಯಿ